ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 4 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 343 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸುಮಾರು 400 ಕೋಟಿ ಅಂದಾಜು ವೆಚ್ಚದಲ್ಲಿ

ಮೈಸೂರಲ್ಲಿ ವಂದೇ ಭಾರತ್ ಡಿಪೋ ನಿರ್ಮಾಣ

ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಮಾಹಿತಿ

- ಯಾದವಗಿರಿ ಬಳಿಯ ನ್ಯೂ ಗೂಡ್ಸ್ ಟರ್ಮಿನಲ್‌ನಲ್ಲಿ ಸ್ಥಾಪನೆ
- ಯೋಜನೆ ಬಳಿಕ ಮೈಸೂರಿನಲ್ಲೇ ವಂದೇ ಭಾರತ್ ರೈಲುಗಳ ನಿರ್ವಹಣೆ
- 3 ದಿನದಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಸಿಸಿಟಿವಿ ಕ್ಯಾಮರಾ ಸುಸ್ಥಿತಿ

ಮೈಸೂರು, ಏ.3(ಬಿಎಲ್‌ಯು)– ಮೈಸೂರಿನಲ್ಲಿ ವಂದೇ ಭಾರತ್ ಡಿಪೋ ನಿರ್ಮಾಣಕ್ಕೆ ಯೋಜಿಸಲಾಗಿದೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ(ಡಿಆರ್‌ಎಂ) ಮುದಿತ್ ಮಿತ್ತಲ್ ತಿಳಿಸಿದ್ದಾರೆ.

ಮೈಸೂರಿನ ತಮ್ಮ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಯಾದವಗಿರಿ ಬಳಿಯ ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್‌ನಲ್ಲಿ 400 ಕೋಟಿ ಅಂದಾಜು ವೆಚ್ಚದಲ್ಲಿ ವಂದೇ ಭಾರತ್ ರೈಲ್ ಕೋಚಿಂಗ್ ಡಿಪೋ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಟರ್ಮಿನಲ್‌ನಲ್ಲಿ ನಡೆಯುತ್ತಿರುವ ಹಾಲಿ ಕಾರ್ಯವನ್ನು ಮಂಡ್ಯದ ಎಲಿಯೂರಿಗೆ ಸ್ಥಳಾಂತರಿಸಲು ಕ್ರಮ ವಹಿಸಲಾಗಿದೆ ಎಂದರು.

ವಂದೇ ಭಾರತ್ ರೈಲ್ ಕೋಚಿಂಗ್ ಡಿಪೋ ನಿರ್ಮಾಣ ಸಂಬಂಧ ನ್ಯೂ ಗೂಡ್ಸ್ ಟರ್ಮಿನಲ್ ಡಿಪೋ ಸ್ಥಳದಲ್ಲಿ ಸರ್ವೆ ಮಾಡಿ, ತರುವಾಯ ಡಿಪಿಆರ್ ಸಿದ್ಧಗೊಳಿಸಬೇಕಿದೆ. ನಂತರ ರೈಲ್ವೆ ಮಂಡಳಿ ಹಾಗೂ ರೈಲ್ವೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆದ ನಂತರ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು. ವಂದೇ ಭಾರತ್ ರೈಲುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕೋಚಿಂಗ್ ಡಿಪೋ ಅವಶ್ಯಕವಾಗಿದೆ. ವಂದೇ ಭಾರತ್ ರೈಲುಗಳ ಲೋಕೋಮೋಟಿವ್ ಅಥವಾ ಇಂಜಿನ್, ಬೋಗಿಗಳ ನಿರ್ವಹಣೆ, ಮೆಕ್ಯಾನಿಕಲ್, ಟೆಕ್ನಿಕಲ್, ಎಲೆಕ್ಟ್ರಾನಿಕ್ ಲೋಪಗಳನ್ನು ಸರಿಪಡಿಸುವಿಕೆ, ಸ್ವಚ್ಛತೆ ಸೇರಿದಂತೆ ಇತರೆ ಎಲ್ಲಾ ನಿರ್ವಹಣೆ ಈ ಡಿಪೋದಲ್ಲೇ ನಡೆಯಲಿವೆ ಎಂದು ತಿಳಿಸಿದರು. ವಂದೇ ಭಾರತ್ ರೈಲುಗಳ ಸಂಚಾರಕ್ಕೆ ಮುನ್ನ ಯಾವುದೇ ತಾಂತ್ರಿಕ ದೋಷವಿಲ್ಲದಿರುವುದನ್ನು ಡಿಪೋದಲ್ಲಿ ಖಚಿತಪಡಿಸಿಕೊಳ್ಳಲಾಗುವುದು. ಕೋಚಿಂಗ್ ಡಿಪೋ ■ 6ನೇ ಪುಟಕ್ಕೆ


ಮುದಿತ್ ಮಿತ್ತಲ್



ಮೈಸೂರು ರೈಲ್ವೆ ವಿಭಾಗಕ್ಕೆ 449 ಕೋಟಿ ಆದಾಯ

ಶೇಕಡ 1.49ರಷ್ಟು ಬೆಳವಣಿಗೆ

ಮೈಸೂರು: ಮೈಸೂರು ರೈಲ್ವೆ ವಿಭಾಗವು ಕಳೆದ 2025–26ನೇ ಸಾಲಿನಲ್ಲಿ 449.13 ಕೋಟಿ ರೂಪಾಯಿ ಆದಾಯ ಗಳಿಸಿದ್ದು, ಈ ಮೂಲಕ ಶೇಕಡ 1.49 ರಷ್ಟು ಪ್ರಗತಿ ಸಾಧಿಸಿದೆ ಎಂದು ಡಿಆರ್‌ಎಂ ಮುದಿತ್ ಮಿತ್ತಲ್ ಮಾಹಿತಿ ನೀಡಿದರು.

ಕಳೆದ ವರ್ಷ 419.89 ಕೋಟಿ ಆದಾಯ ಬಂದಿತ್ತು. ಈ ಬಾರಿ 29.24 ಕೋಟಿ ಹೆಚ್ಚುವರಿ ಆದಾಯ ಗಳಿಸಿದೆ. ಟಿಕೆಟ್ ಪರಿಶೀಲನೆ ಕಾರ್ಯಕ್ಷಮತೆ ಅತ್ಯುತ್ತಮವಾಗಿ ಮುಂದುವರೆದಿದ್ದು, 9.75 ಕೋಟಿ ಆದಾಯ ದಾಖಲಿಸಿದೆ ಎಂದು ತಿಳಿಸಿದರು. ಇತರೆ ಕ್ಷೇತ್ರಗಳಲ್ಲೂ ಉತ್ಕೃಷ್ಟ ಬೆಳವಣಿಗೆಯಾಗಿದ್ದು, ವಾಣಿಜ್ಯ ಜಾಹೀರಾತಿನಿಂದ 3.17 ಕೋಟಿ, ಪಾರ್ಕಿಂಗ್‌ನಿಂದ 4.02 ಕೋಟಿ, ಕೆಟರಿಂಗ್‌ನಿಂದ 2.61 ಕೋಟಿ, ಪಾರ್ಸೆಲ್ ಸೇವೆಯಿಂದ 11.81 ಕೋಟಿ, ಎಸ್‌ಎಲ್‌ಆರ್ ಹಾಗೂ ವಿಪಿಹೆಚ್ ಪಾರ್ಸೆಲ್ ಲೀಸ್‌ನಿಂದ 5.85 ಕೋಟಿ ಆದಾಯ ಬಂದಿದೆ ಎಂದು ಅವರು ಅಂಕಿ ಅಂಶಗಳ ಸಹಿತ ವಿವರಿಸಿದರು.

ಸರಕು ಚಾಲನೆ(ಗೂಡ್ಸ್ ರೈಲು) ವಿಭಾಗದಲ್ಲಿ 900.19 ಕೋಟಿ ಆದಾಯ ಬಂದಿದ್ದು, ಇದು ರೈಲ್ವೆ ವಿಭಾಗದ ಎರಡನೇ ಉನ್ನತ ಆದಾಯವಾಗಿದೆ. ಸರಕು ಚಾಲನೆಯಲ್ಲಿ 10.586 ಮಿಲಿಯನ್ ಟನ್ ತಲುಪಿದ್ದು, ಇದರಲ್ಲಿ 8,664 ಮಿಲಿಯನ್ ಟನ್ ಉಕ್ಕು ಸೇರಿದೆ. ಎರಡು ಚಕ್ರದ ವಾಹನ, ನಾಲ್ಕು ಚಕ್ರದ ವಾಹನಗಳ ಲೋಡಿಂಗ್ ನಿಂದ 23.94 ಕೋಟಿ ಆದಾಯ ■ 6ನೇ ಪುಟಕ್ಕೆ

ಸಾರ್ವಜನಿಕರ ಆಕ್ರೋಶಕ್ಕೆ ಮಣಿದ ಮೈಸೂರು ಪಾಲಿಕೆ

ವಾಹನ ಉಪಕರ ಹಿಂದಕ್ಕೆ



ಮೈಸೂರು, ಏ.3(ಎಂಟಿವೈ)– ಸಾರ್ವಜನಿಕರ ತೀವ್ರ ಆಕ್ಷೇಪದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯು 'ಮೋಟಾರು ವಾಹನ ಮೂಲಸೌಕರ್ಯ ಉಪಕರ'ವನ್ನು ಕೈಬಿಡಲು ನಿರ್ಧರಿಸಿದೆ.

ನಗರದ ರಸ್ತೆ ಸಂಚಾರ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಾಗಿ 1976ರ ಕಾಯ್ದೆ ಅಡಿಯಲ್ಲಿ ಪ್ರತಿ ವಾಹನದ ಮೇಲೆ ವಾರ್ಷಿಕವಾಗಿ ನಿರ್ದಿಷ್ಟ ಮೊತ್ತದ ಉಪಕರ ವಿಧಿಸಲು ಪಾಲಿಕೆಯ ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ ಈ ಹಿಂದೆಯೇ ತೀರ್ಮಾನಿಸಲಾಗಿತ್ತು. ಇದರನ್ವಯ ಪ್ರಸಕ್ತ ಸಾಲಿನಿಂದ ಆಸ್ತಿ ತೆರಿಗೆಯೊಂದಿಗೆ ದ್ವಿಚಕ್ರ ವಾಹನಗಳಿಗೆ 100 ರೂ., ತ್ರಿಚಕ್ರ ವಾಹನಗಳಿಗೆ 200 ರೂ., ನಾಲ್ಕು ಚಕ್ರದ ವಾಹನಗಳಿಗೆ 500 ರೂ. ಉಪಕರ ಸಂಗ್ರಹಿಸಲು ಮುಂದಾಗಿತ್ತು. ಇದು ಏ.1ರಿಂದ ಜಾರಿಗೆ ಬರಲಿದೆ ಎಂದು ಮಾ.23ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿತ್ತು.

ಆದರೆ ಈ ಹೊಸ ತೆರಿಗೆ ಪದ್ಧತಿ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಯಿತು. ಆಸ್ತಿ ತೆರಿಗೆಯೊಂದಿಗೆ ವಾಹನ ಉಪಕರ ಸೇರಿಸುವುದು ಅವೈಜ್ಞಾನಿಕ ಎಂದು ಆಕ್ಷೇಪ ವ್ಯಕ್ತಪಡಿಸಿ, ಈ ಕ್ರಮವನ್ನು ಕೈಬಿಡುವಂತೆ ಒತ್ತಾಯಿಸಿದರು. ಈ ಹಿನ್ನೆಲೆಯಲ್ಲಿ ಪ್ರಕ್ರಿಯೆಯ ಸಾಧಕ– ಬಾಧಕಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಆಡಳಿತಾಧಿಕಾರಿಗಳು, ಪ್ರಸ್ತುತ ಈ ಯೋಜನೆಯನ್ನು ಜಾರಿಗೊಳಿಸದಿರಲು ತೀರ್ಮಾನಿಸಿದ್ದಾರೆ.

ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಜನರ ಆಕ್ಷೇಪಣೆಯನ್ನು ಗೌರವಿಸಿ, ಸದ್ಯಕ್ಕೆ ಮೋಟಾರು ವಾಹನ ಉಪಕರ ವಸೂಲಾತಿ ಪ್ರಕ್ರಿಯೆಯನ್ನು ಕೈಬಿಡಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ■ 6ನೇ ಪುಟಕ್ಕೆ

ಜಯಲಕ್ಷ್ಮೀ ವಿಲಾಸ ಗುತ್ತಿಗೆ ಒಪ್ಪಂದವಾಗಿಲ್ಲ

ಮೈಸೂರು ವಿವಿ ಕುಲಸಚಿವೆ ಸವಿತಾ ಸ್ಪಷ್ಟನೆ

ಚರ್ಚೆ ಹಂತದಲ್ಲಿರುವಾಗಲೇ ತಪ್ಪು ಮಾಹಿತಿ ಹರಡಿದ್ದಾರೆ; ಬೇಸರ






ಮೈಸೂರು, ಏ.3(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮೀ ವಿಲಾಸ ಅರಮನೆ ಕಟ್ಟಡಕ್ಕೆ ಸಂಬಂಧಿಸಿದಂತೆ ಸದ್ಯ ಯಾವುದೇ ಒಡಂಬಡಿಕೆ ಆಗಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಸ್ಪಷ್ಟಪಡಿಸಿದ್ದಾರೆ.

ಜಯಲಕ್ಷ್ಮೀ ವಿಲಾಸ ಅರಮನೆ ಕಟ್ಟಡವನ್ನು ಕಾನೂನು ಬಾಹಿರವಾಗಿ ಖಾಸಗಿ ಸಂಸ್ಥೆಗೆ 40 ವರ್ಷಗಳ ಸುದೀರ್ಘ ಅವಧಿಗೆ ಉಚಿತವಾಗಿ ಲೀಸ್‌ಗೆ ನೀಡಲಾಗಿದೆ ಎಂಬ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರ ಶೇಖರ್ ಆರೋಪಕ್ಕೆ ಸ್ಪಷ್ಟನೆ ನೀಡಿರುವ ಅವರು, ಈ ಹಿಂದೆ ಸಿಂಡಿಕೇಟ್‌ನ ಎರಡು ಸಭೆಯಲ್ಲಿ ಜಯಲಕ್ಷ್ಮೀ ವಿಲಾಸ ಅರಮನೆಯ ಕಟ್ಟಡದ ಒಡಂಬಡಿಕೆ ಸಂಬಂಧ ಸಾಧಕ–ಬಾಧಕಗಳಷ್ಟೆ ಚರ್ಚೆಯಾಗಿದೆ. ಈ ಸಭೆಯಲ್ಲಿ ಯಾವುದೇ ಒಡಂಬಡಿಕೆಗೆ ಸಹಿ ಹಾಕಿಲ್ಲ. ಅಲ್ಲದೆ, ಖಾಸಗಿ ಸಂಸ್ಥೆಗೆ ಲೀಸ್ ನೀಡಲು ಒಪ್ಪಿಗೆ ಸೂಚಿಸಿಲ್ಲ ಎಂದು ತಿಳಿಸಿದ್ದಾರೆ.

ಆರೋಪ ನಿರಾಧಾರ ಹಿಂಬರಹದಲ್ಲಿ ಸ್ಪಷ್ಟನೆ: ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್. ಚಂದ್ರಶೇಖರ್ ಅವರು ■ 6ನೇ ಪುಟಕ್ಕೆ

ಚಾರಣಕ್ಕೆಂದು ಬಂದ ಕೇರಳದ ಯುವತಿ ಕೊಡಗಿನ ಬೆಟ್ಟದಲ್ಲಿ ನಾಪತ್ತೆ


ಜಿ.ಎಸ್.ಶರಣ್ಯ

- ಅರಣ್ಯ, ಪೊಲೀಸ್ ಸಿಬ್ಬಂದಿ ಶೋಧ ಕಾರ್ಯ
- ಎರಡು ದಿನವಾದರೂ ಯುವತಿಯ ಸುಳಿವಿಲ್ಲ

ಮಡಿಕೇರಿ, ಏ.3– ನಾಪೋಕ್ಲು ಸಮೀಪದ ತಡಿಯಂಡ ಮೋಳ್ ಬೆಟ್ಟಕ್ಕೆ ಚಾರಣಕ್ಕೆ ಬಂದಿದ್ದ ಕೇರಳದ ಯುವತಿ ನಿಗೂಢ ರೀತಿ ನಾಪತ್ತೆಯಾಗಿದ್ದಾರೆ.

ಕೇರಳದ ಕಲ್ಲಿಕೋಟೆ ಮೂಲದ ಜಿ.ಎಸ್. ಶರಣ್ಯ(36) ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡಿ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ಬಂದಿದ್ದು, ಬುಧವಾರ ಕಕ್ಕಬ್ಬೆ ಸಮೀಪದ ಕಬ್ಬಿನಕಾಡು ಗ್ರಾಮದ ಬಿ.ನಂದಾ ಎಂಬುವರ ಹೋಂ ಸ್ಟೇನಲ್ಲಿ ತಂಗಿದ್ದರು.

ಹೋಂ ಸ್ಟೇ ಮಾಲೀಕರೇ ಶರಣ್ಯಳನ್ನು ಗುರುವಾರ ಬೆಳಿಗ್ಗೆ ಬೆಟ್ಟದ ಮೇಲಿನ ಗೇಟ್‌ವರೆಗೆ ತಮ್ಮ ದ್ವಿಚಕ್ರ ವಾಹನದಲ್ಲಿ ಡ್ರಾಪ್ ಕೊಟ್ಟಿದ್ದರೆನ್ನಲಾಗಿದೆ. ಶರಣ್ಯ ಕೇರಳದಿಂದ ಏಕಾಂಗಿಯಾಗಿ ಚಾರಣಕ್ಕೆ ಬಂದಿದ್ದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಒಬ್ಬರನ್ನ ಕಳಿಸಲು ಒಪ್ಪದೆ, ಬಾಗಲಕೋಟೆ ಮೂಲದ ನಾಲ್ವರು ಚಾರಣಿಗರೊಂದಿಗೆ ತಡಿಯಂಡಮೋಳ್ ಬೆಟ್ಟಕ್ಕೆ ತೆರಳಲು ಅವರಿಗೆ ಅನುಮತಿ ನೀಡಿದ್ದರು.

ಮನೆಯಲ್ಲಿ ಯಾರಿಗೂ ಹೇಳದೆಯೇ ಶರಣ್ಯ ನಾಯಿಯೊಂದಿಗೆ ಕಲ್ಲಿಕೋಟೆಯಿಂದ ಬಂದಿದ್ದಳು. ನಾಯಿಯೊಂದಿಗೆ ಆಟವಾಡುತ್ತಾ ನಿಧಾನವಾಗಿ ಬೆಟ್ಟ ಹತ್ತುತ್ತಿದ್ದರಿಂದ ಉಳಿದವರು ಮುಂದೆ ಸಾಗಿದರೆಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಕೊನೆಗೆ ದಾರಿ ತಪ್ಪಿದ ಈಕೆ ತನ್ನೊಂದಿಗಿದ್ದವರನ್ನು ಸಂಪರ್ಕಿಸಲೆತ್ನಿಸಿದ್ದಾರೆ. ಆದರೆ ಮೊಬೈಲ್ ಸಂಪರ್ಕ ಸಿಗದಿದ್ದರಿಂದ ಕೊನೆಗೆ ತಾನು ತಂಗಿದ್ದ ಹೋಂ ಸ್ಟೇ ಮಾಲೀಕರಿಗೆ ಅರಣ್ಯದಲ್ಲಿ ತಪ್ಪಿಸಿಕೊಂಡಿರುವುದಾಗಿ ತಿಳಿಸಿದಳೆನ್ನಲಾಗಿದೆ.

ಕತ್ತಲು ಆವರಿಸಿದರೂ ಶರಣ್ಯ ಹೋಂ ಸ್ಟೇಗೆ ಮರಳದ ಹಿನ್ನೆಲೆಯಲ್ಲಿ ಸ್ಥಳೀಯರು ಮತ್ತು ಹೋಂ ಸ್ಟೇ ಮಾಲಿಕರು ಅರಣ್ಯ ಇಲಾಖೆ ಮತ್ತು ನಾಪೋಕ್ಲು ಪೊಲೀಸರಿಗೆ ದೂರು ನೀಡಿದರು. ಕೂಡಲೇ ಅರಣ್ಯ ಮತ್ತು ಪೊಲೀಸ್ ಇಲಾಖೆಯ ■ 6ನೇ ಪುಟಕ್ಕೆ

ಹೆಚ್‌ಎಸ್‌ಆರ್‌ಪಿ: ಹಳೇ ವಾಹನಗಳಿಗೆ ಸಡಿಲ; ಹೊಸ ವಾಹನಗಳಿಗೆ ಕಡ್ಡಾಯ!



ಬೆಂಗಳೂರು: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಎಲ್ಲಾ ವಾಹನಗಳಿಗೆ 'ಹೈ ಸೆಕ್ಯುರಿಟಿ ರಿಜಿಸ್ಟ್ರೇಶನ್ ಪ್ಲೇಟ್(ಹೆಚ್‌ಎಸ್‌ಆರ್‌ಪಿ)'ಗಳನ್ನು ಕಡ್ಡಾಯಗೊಳಿಸಿ ಹೊರಡಿಸಿದ್ದ ಆದೇಶವನ್ನು ಸಡಿಲಗೊಳಿಸಿದೆ ಎನ್ನಲಾಗಿದೆ.

ರಾಜ್ಯದಲ್ಲಿ ಎಂಟು ಬಾರಿ ಗಡುವು ವಿಸ್ತರಣೆ ಬಳಿಕವೂ ನಿರೀಕ್ಷಿತ ಸಾಧನೆ ಸಾಧ್ಯವಾಗದ ಹಿನ್ನೆಲೆಯಲ್ಲಿ 2019ರ ಏಪ್ರಿಲ್ 1ಕ್ಕಿಂತ ಹಿಂದೆ ನೋಂದಣಿಯಾಗಿದ್ದ ವಾಹನಗಳಿಗೂ ಕಡ್ಡಾಯಗೊಳಿಸಿದ್ದ ನಿಯಮವನ್ನು ಸಡಿಲಗೊಳಿಸಿ, ಹೊಸ ವಾಹನಗಳಿಗೆ ಮಾತ್ರವೇ ಹೆಚ್‌ಎಸ್‌ಆರ್‌ಪಿ ನಿಯಮವನ್ನು ಪರಿಪಾಲಿಸಲು ನಿರ್ಧರಿಸಲಾಗಿದೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ವಾಹನಗಳ ■ 6ನೇ ಪುಟಕ್ಕೆ

ವೇದಿಕೆಯಲ್ಲೇ ಕುಸಿದು ಬಿದ್ದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಆರೋಗ್ಯ ಸುಧಾರಣೆ




ಬೆಂಗಳೂರು, ಏ.3– ಸ್ಕೌಟ್ಸ್ ಅಂಡ್ ಗೈಡ್ಸ್ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅಸ್ವಸ್ಥಗೊಂಡು ವೇದಿಕೆ ಮೇಲೆಯೇ ಕುಸಿದು ಬಿದ್ದಿದ್ದ ಮಾಜಿ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರ ಆರೋಗ್ಯ ಈಗ ಸ್ಥಿರವಾಗಿದೆ. ಆರಂಭದಲ್ಲಿ ತೀವ್ರ ಆತಂಕ ಸೃಷ್ಟಿಯಾಗಿದ್ದರೂ, ವೈದ್ಯಕೀಯ ತಪಾಸಣೆಯ ಬಳಿಕ ಅವರು ಸುರಕ್ಷಿತವಾಗಿದ್ದಾರೆ ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಪಿ.ಜಿ.ಆರ್. ಸಿಂಧ್ಯಾ ಅವರಿಗೆ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಸಂತೋಷ್ ಹೆಗ್ಡೆ ಅವರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಮಧ್ಯೆ ಅವರಿಗೆ ■ 6ನೇ ಪುಟಕ್ಕೆ

ಬಡ ರೈತರಿಗೆ ವಂಚನೆ

ಕ್ವಿಂಟಾಲ್ ಮೇಲೆ 'ಹೆಚ್ಚುವರಿ' 4 ಕೆಜಿ ವಂಚನೆ; ರಾಗಿ ಖರೀದಿ ಕೇಂದ್ರಗಳಲ್ಲಿ ರೈತರ ಅಳಲು ಆಲಿಸಿ ಬಂದ ಮಾಜಿ ಸಚಿವ ಸಾರಾ ಮಹೇಶ್ ವಾಗ್ದಾಳಿ



ಮೈಸೂರು, ಏ.3(ಜಿಎ)– ಬೆಂಬಲ ಬೆಲೆಯಡಿ ರಾಗಿ ಖರೀದಿಗೆ ಸರ್ಕಾರದಿಂದ ವ್ಯವಸ್ಥೆ ಮಾಡಿರುವ ಖರೀದಿ ಕೇಂದ್ರಗಳಲ್ಲಿ ಬಡ ರೈತರ ಸುಲಿಗೆ ನಡೆದಿದೆ. ತಮ್ಮದೇ ತವರಿನಲ್ಲಿ ಅನ್ನದಾತನಿಗೆ ವಂಚನೆಯಾಗುತ್ತಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರವಾಗಿ ಪರಿಗಣಿಸಿ, ಕಠಿಣ ಕ್ರಮ ಕೈಗೊಳ್ಳುವಂತೆ ಮಾಜಿ ಸಚಿವ ಸಾ.ರಾ. ಮಹೇಶ್ ಆಗ್ರಹಪಡಿಸಿದ್ದಾರೆ.

ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ನಗರ, ಚುಂಚನಕಟ್ಟೆ, ಸಾಲಿಗ್ರಾಮಗಳಲ್ಲಿ ಬೆಂಬಲ ಬೆಲೆಯಡಿ ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರಿಂದ ರಾಗಿ ಖರೀದಿಗೆ ಕೇಂದ್ರಗಳನ್ನು ತೆರೆಯಲಾಗಿದೆ. ಇಲ್ಲಿ ರಾಗಿ ಖರೀದಿ ಮಾಡುವಾಗ ಅಮಾಯಕ ರೈತರಿಂದ' 4 ಕೆ.ಜಿ. ಹೆಚ್ಚುವರಿಯಾಗಿ ಪಡೆಯುತ್ತಿದ್ದಾರೆ. ಈ ಮೂರು ಖರೀದಿ ಕೇಂದ್ರಗಳಲ್ಲಿ ಇದುವರೆಗೂ 60ಸಾವಿರ ಕ್ವಿಂಟಾಲ್ ರಾಗಿ ಖರೀದಿಸಿದ್ದಾರೆ. ಹಾಗಾಗಿ ಪ್ರತಿಯೊಬ್ಬ ರೈತನಿಗೆ 1 ಕ್ವಿಂಟಾಲ್‌ಗೆ 200 ರಿಂದ 250 ರೂಪಾಯಿ ನಷ್ಟವಾಗುತ್ತಿದೆ ಎಂದು ದೂರಿದರು.

ಸರ್ಕಾರದಿಂದ ಗೋಡೌನ್‌ಗೆ 1 ಕ್ವಿಂಟಾಲ್ ರಾಗಿ ಸಾಗಿಸಲು 32 ರೂಪಾಯಿ ಸಾಗಣೆ ವೆಚ್ಚ ನೀಡಲಾಗುತ್ತಿದೆ. ರಾಗಿ ಲೋಡ್ ಮಾಡುವ ಕೂಲಿ ಕಾರ್ಮಿಕರಿಗೆ 50 ಮೂಟೆ ಬ್ಯಾಗ್‌ಗೆ ರೈತರ ಮೂಲಕ 26 ರೂಪಾಯಿ ನೀಡಲಾಗುತ್ತಿದೆ. ಆದರೆ 1 ಕ್ವಿಂಟಾಲ್ ರಾಗಿ ಸಾಗಣೆ ವೆಚ್ಚವಾಗಿ ನೀಡುವ 32 ರೂಪಾಯಿಯನ್ನು ಅಧಿಕಾರಿಗಳೇ ನುಂಗಿ ನೀರು ಕುಡಿಯುತ್ತಿದ್ದಾರೆ. ಸಿಎಂ ಆಗಾಗ ಮೈಸೂರಿಗೆ ಬಂದು ಹೋಗುತ್ತಿದ್ದಾರೆ. ಇವರಿಗೆ ರೈತರ ಸುಲಿಗೆ ಮಾಡುತ್ತಿರುವುದು, ಹಗಲು ದರೋಡೆ ಮಾಡುತ್ತಿರುವುದು ಗಮನಕ್ಕೆ ಬಂದಿಲ್ಲವೇ ಎಂದು ಪ್ರಶ್ನಿಸಿದರು.

ರೈತರು ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ತಮ್ಮ ಹಿತ ಕಾಯಲೆಂದು. ಆಹಾರ ಇಲಾಖೆ ಜಂಟಿ ನಿರ್ದೇಶಕರೇನು ಕತ್ತೆ ಕಾಯುತ್ತಿದ್ದಾರಾ? ಇದರ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಯಾಕೆ ಮುಂದಾಗುತ್ತಿಲ್ಲ. ಗುರುವಾರ ನಾನು ಖರೀದಿ ಕೇಂದ್ರಕ್ಕೆ ಭೇಟಿ ನೀಡಿದ್ದಾಗ ರೈತರು ತಮ್ಮ ಬಳಿ ಈ ಬಗ್ಗೆ ಅಳಲು ತೋಡಿಕೊಂಡರು. ತಕ್ಷಣ ಈ ವಿಚಾರವನ್ನು ಜಿಲ್ಲಾಧಿಕಾರಿಯ ಗಮನಕ್ಕೆ ತಂದ ನಂತರ, ಸಮಸ್ಯೆ ಬಗೆಹರಿಸಲು ಮುಂದಾದರು. ಮತ್ತೆ ಈ ರೀತಿ ಆಗದಂತೆ ನೋಡಿಕೊಳ್ಳುವ ಭರವಸೆ ನೀಡಿದ್ದಾರೆ. ಇದುವರೆಗೂ ರೈತರಿಗೆ ಆಗಿರುವ ನಷ್ಟಕ್ಕೆ ಯಾರು ಹೊಣೆ, ಈ ನಷ್ಟವನ್ನು ತುಂಬಿ ಕೊಡುವವರು ಯಾರು. ಇದು

ಮೈಸೂರು ಜಿಲ್ಲೆಗೆ ಮಾತ್ರ ಸೀಮಿತ ವಾಗಿಲ್ಲ. ಇಡೀ ರಾಜ್ಯದಾದ್ಯಂತ ಇದೇ ಸುಲಿಗೆ ಆಗಿದೆ. ರೈತರಿಗೆ ಈ ರೀತಿ ಆಗಿರುವ ನಷ್ಟವನ್ನು ಸರ್ಕಾರ ಭರಿಸಬೇಕು. ಟ್ರಾನ್ಸ್ ಪೋರ್ಟ್ ಲಾಭಿಯಿಂದ ಆಗುತ್ತಿರುವ ಅಕ್ರಮಕ್ಕೆ ಕಡಿವಾಣ ಹಾಕಬೇಕು. ರೈತರ ಸುಲಿಗೆ ಮಾಡುತ್ತಿರುವುದನ್ನು ತಪ್ಪಿಸಬೇಕು. ಇಲ್ಲವಾದರೆ ಮುಖ್ಯಮಂತ್ರಿಗಳು ಮೈಸೂರಿಗೆ ಮತ್ತೆ ಬಂದಾಗ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸಾಲಿಗ್ರಾಮ ಕೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಸಂಬಂಧದ ವಿಚಾರವನ್ನು ವಿಧಾನಸಭೆಯಲ್ಲಿ ಚರ್ಚೆ ಮಾಡುವುದಲ್ಲ. ಶಾಸಕ ಡಿ.ರವಿಶಂಕರ್ ಅವರು ಜಿಪಂ ಸದಸ್ಯರಂತೆ ವರ್ತಿಸದೇ, ಶಾಸಕರಂತೆ ವರ್ತಿಸಲಿ ಎಂದು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಎಂಎಲ್ಸಿ ಸಿ.ಎನ್. ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಮುಖಂಡರಾದ ಅಮಿತ್ ದೇವರಹಟ್ಟಿ, ದ್ವಾರಕೀಶ್, ಪ್ರಿಯದರ್ಶನ್, ರಾಮಣ್ಣ, ಸೋಮು ಮತ್ತಿತರರಿದ್ದರು.

ಸತ್ಯ ಮೇವ ಜಯತೆ

ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ಮೈಸೂರು ಜಿಲ್ಲಾಧಿಕಾರಿಯಾಗಿದ್ದಾಗ ಬಟ್ಟೆ ಬ್ಯಾಗ್ ಖರೀದಿಗೆ ಸಂಬಂಧಿಸಿದ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಹೈಕೋರ್ಟ್ ಆದೇಶ ನೀಡಿದೆ. ಇದು 'ಸತ್ಯಮೇವ ಜಯತೆ'. ನ್ಯಾಯಾಲಯದ ಮೇಲಿನ ನಂಬಿಕೆ ಮತ್ತಷ್ಟು ಹೆಚ್ಚಿದೆ. ನ್ಯಾಯದ ಮುಂದೆ ಎಲ್ಲರೂ ಸಮಾನರು ಎಂಬುದ ತಿಳಿಯು ಬೇಕು. ಬಟ್ಟೆ ಬ್ಯಾಗ್ ಖರೀದಿ ಹಗರಣ ಕುರಿತು ನ್ಯಾಯಾಲಯ ನೀಡಿರುವ ಆದೇಶ ಸ್ವಾಗತಾರ್ಹ. ಬಟ್ಟೆ ಬ್ಯಾಗ್ ಖರೀದಿ ಸಂಬಂಧ ನ್ಯಾಯಾಲಯ ನೀಡಿರುವ ಆದೇಶ ದೇಶದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನ ಸಾಮಾನ್ಯರಲ್ಲಿ ವಿಶ್ವಾಸ ಮೂಡಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತಷ್ಟು ಮಾಹಿತಿಯನ್ನು ಕಲೆಹಾಕಿ ಕೊಂಡು ಶನಿವಾರ ಮಾಧ್ಯಮಗಳ ಮುಂದೆ ಪ್ರಸ್ತುತಪಡಿಸುವೆ.

-ಸಾ.ರಾ.ಮಹೇಶ್, ಮಾಜಿ ಸಚಿವ

ಮೈಸೂರು ಮಿತ್ರ

ಬಸವ ಜಯಂತಿ: ಮೈಸೂರು ನಗರ ಯುವ ಸಮಿತಿ ರಚನೆ



ಮೈಸೂರು, ಏ.3– ಬಸವ ಜಯಂತಿ–2026 ಅಂಗವಾಗಿ ಬಸವ ಪುತ್ಥಳಿ ಕಚೇರಿಯಲ್ಲಿ ಅಧ್ಯಕ್ಷರ ಸಮ್ಮುಖದಲ್ಲಿ ಮಹತ್ವದ ಸಭೆ ನಡೆಯಿತು. ಈ ಸಂದರ್ಭದಲ್ಲಿ ನಗರ ಮಟ್ಟದಲ್ಲಿ ಯುವ ಸಮಿತಿಯನ್ನು ರಚಿಸಿ, ಸಂಘಟನೆಯ ಬಲವರ್ಧನೆಗೆ ಅಗತ್ಯವಾದ ಉಪಾಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳನ್ನು ಆಯ್ಕೆ ಮಾಡಲಾಯಿತು. ಆಯ್ಕೆಯಾದ ಪದಾಧಿಕಾರಿಗಳಿಗೆ ಇದೇ ಸಂದರ್ಭದಲ್ಲಿ ಅಧಿಕೃತವಾಗಿ ನೇಮಕ ಪತ್ರಗಳನ್ನು ವಿತರಿಸಲಾಯಿತು.

ಉಪಾಧ್ಯಕ್ಷರಾಗಿ ಶಿವಶಂಕರ್ (ಶಿವು), ಜಗದೀಶ್ (ಮನು), ನಿತೇಶ್ ಕುಮಾರ್ (ಅಂಜು), ಮನೋಜ್ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಆಕಾಶ್ ಮೂರ್ತಿ, ದೀಕ್ಷಿತ್ ರುದ್ರೇಶ್, ಕಾರ್ತಿಕ್ ಜಿ, ನಂದನ್. ಡಿ.ಎಂ.ಅವರನ್ನು ನೇಮಕ ಮಾಡಲಾಗಿದೆ.

ಕರಗ ಮಹೋತ್ಸವ



ಮೈಸೂರಿನ ವೀಣೆಶೇಷಣ್ಣ ರಸ್ತೆ 7ನೇ ಕ್ರಾಸ್‌ನಲ್ಲಿರುವ ವಾಣಿಯರ್ ಶ್ರೀ ಮಾರಮ್ಮನವರ ಜಾತ್ರೆ ಕರಗ ಮಹೋತ್ಸವದೊಂದಿಗೆ ಸಮಾಪ್ತಿಯಾಯಿತು. ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ನಾಗೇಂದ್ರ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿವಿಧ ಸಂಘಟನೆಗಳ ವತಿಯಿಂದ ಪ್ರಸಾದ ವಿತರಿಸಿದರು. ದೇಗುಲ ಸಮಿತಿಯ ಅಧ್ಯಕ್ಷ ಸುಬ್ರಮಣಿ, ಕಾರ್ಯದರ್ಶಿ ತಿರುಮಲೈ ರಾಜು, ರಾಮ, ಆನಂದ ಮತ್ತಿತರರು ಉಪಸ್ಥಿತರಿದ್ದರು.

ಪರಸ್ಪರ ಸಂಸ್ಥೆ ಆಯೋಜನೆಯ ಬೇಸಿಗೆ ಶಿಬಿರ ಉದ್ಘಾಟನೆ



ಚಿಣ್ಣರ ಚೈತ್ರ ಮಕ್ಕಳ ಬೇಸಿಗೆ ಶಿಬಿರವನ್ನು ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ಡಾ. ಮೈಸೂರು ಉಮೇಶ್ ಉದ್ಘಾಟಿಸಿದರು.

ಮೈಸೂರು, ಏ.3– ಯಾವುದೇ ಒಂದು ಹೊಸ ತಂತ್ರಜ್ಞಾನ ನಮ್ಮ ಕೈಗೆ ಬಂದಾಗ ಅದನ್ನು ಬಳಸಿಕೊಳ್ಳುವಂತಹ ಒಂದು ವಿವೇಕ ಪ್ರಜ್ಞೆಯನ್ನ ಯಾವಾಗ ಕಳೆದುಕೊಳ್ಳುತ್ತೇವೆ ಆಗ ನಾವು ಅಧಃಪತನದ ಹಾದಿಗೆ ಹೋಗುತ್ತೇವೆ ಎಂದು ಮೈಸೂರು ಆಕಾಶವಾಣಿಯ ಹಿರಿಯ ಉದ್ಘೋಷಕರು ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ಡಾ. ಮೈಸೂರು ಉಮೇಶ್ ಹೇಳಿದರು.

ಪರಸ್ಪರ ಸಂಸ್ಥೆಯು ಆಲನಹಳ್ಳಿಯ ಶಾಶ್ವತ ಸೇವಾ ಶಾಲೆಯ ಸಹಯೋಗದಲ್ಲಿ ನಡೆಸುವ ಮೂರನೇ ವರ್ಷದ ಚಿಣ್ಣರ ಚೈತ್ರ ಮಕ್ಕಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್‌ಗಳ ಮೂಲಕ ಇತ್ತೀಚಿನ ಮಕ್ಕಳನ್ನು ಕೈಬೀಸಿ ಕರೆಯುತ್ತಿರುವ ಆಧುನಿಕ ಕಾಲದಲ್ಲಿ ಇಂತಹ ಬೇಸಿಗೆ ಶಿಬಿರವು ನಮ್ಮ ಮೂಲ ಕಲೆ–ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಎಂ.ಆರ್.ಚೌಧರಿ, ನಿವೃತ್ತ ಪ್ರಾಂಶುಪಾಲ ಶಿವಕುಮಾರಸ್ವಾಮಿ, ಮುಖ್ಯಶಿಕ್ಷಕಿ ಪವಿತ್ರ ಹೆಚ್.ಪಿ, ಪರಸ್ಪರ ಸಂಸ್ಥೆಯ ಸಂಸ್ಥಾಪಕರು ಹಾಗೂ ಶಿಬಿರದ ನಿರ್ದೇಶಕರಾದ ರಮೇಶ್ ತಾಯೂರು, ಬಸವರಾಜ್ ದೇವಲಾಪುರ ಬೋಧಕ–ಬೋಧಕೇತರ ಸಿಬ್ಬಂದಿ, ಮಕ್ಕಳು ಹಾಜರಿದ್ದರು.

ಏ.10ಕ್ಕೆ ರಾಜ್ಯ ಮಟ್ಟದ ಉದ್ಯೋಗ ಮೇಳ

ಮೈಸೂರು, ಏ.3(ಎಂಟಿವೈ)– ಮೈಸೂರಿನ ಹೂಟಗಳ್ಳಿಯಲ್ಲಿರುವ ಮೈಕಾಸ್ ಕಾಲೇಜಿನಲ್ಲಿ ಏ.10ರಂದು ಬೆಳಗ್ಗೆ 9ರಿಂದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಡಾ. ತೆಕ್ಕಡೆ ರಮ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ ಮೇಳದಲ್ಲಿ ರಾಜ್ಯದ ವಿವಿಧೆಡೆಯಿಂದ ಸುಮಾರು 43 ಕಂಪನಿಗಳು ಪಾಲ್ಗೊಳ್ಳಲಿದ್ದು, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರಕಲಿದೆ. ಈಗಾಗಲೇ 500ಕ್ಕೂ ಹೆಚ್ಚು ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ವಿವಿಧ ಶೈಕ್ಷಣಿಕ ಅರ್ಹತೆ, ಅನುಭವ ಹೊಂದಿರುವವರು ಮೇಳದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದುಕೊಳ್ಳಬಹುದು. ನೋಂದಣಿ ಮತ್ತು ಭಾಗವಹಿಸುವಿಕೆಯ ದೃಢೀಕರಣಕ್ಕಾಗಿ ಮೊ.ಸಂಖ್ಯೆ 98440 99514ನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಡಾ. ರಾಮಚರಣ್, ಉದಯ್ ಹಾಗೂ ಚಾರು ವಿಕ್ರಮ್ ಇದ್ದರು.

ನಿಧನ

ಅಲ್‌ಹಾಜ್ ಎಂ.ಜೆ. ರೋಯಜ್ ಉರ್ ರೆಹಮಾನ್

ಮೈಸೂರು, ಏ.3– ಮೈಸೂರಿನ ಸುಭಾಷ್‌ನಗರ ನಿವಾಸಿ ಅಲ್‌ಹಾಜ್ ಎಂ.ಜೆ. ರೋಯಜ್ ಉರ್ ರೆಹಮಾನ್ (71) ಗುರುವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಶುಕ್ರವಾರ (ಏ.3) ಅಶೋಕ ರಸ್ತೆಯಲ್ಲಿರುವ ಜುಮ್ಮಾ ಸಲಾತ್ ಮಸೀದಿಯಲ್ಲಿ ನಮಾಜ್–ಎ–ಜನಾಜ ನಡೆದ ನಂತರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಕ್ಕಾಟಿರ ಸಿ. ಅಶೋಕ್



ಮೈಸೂರು, ಏ.3– ಮೈಸೂರಿನ ರಾಮಕೃಷ್ಣನಗರ ಇ–ಎಫ್ ಬ್ಲಾಕ್ ನಿವಾಸಿ ಹಾಗೂ ಕೊಡವ ಸಮಾಜದ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್‌ನ ಅಧ್ಯಕ್ಷ ಮುಕ್ಕಾಟಿರ ಸಿ.ಅಶೋಕ್ (67) ಗುರುವಾರ ಬೆಳಗ್ಗೆ ನಿಧನರಾದರು.

ಶ್ರೀಯುತರು ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ಅರ್ವತೊಕ್ಲು ಮೂಲದವರಾಗಿದ್ದು, ಪತ್ನಿ ಚಿತ್ರಾ (ಅಪ್ಪು ಮಣಿಯಂಡ), ಪುತ್ರ ತಿಮ್ಮಯ್ಯ, ಪುತ್ರಿ ಪುಚ್ಚಿಮಂಡ ದೀಪ್ತಿ ನಾಚಪ್ಪ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೇಕಬ್ ಇಪೆನ್



ಮೈಸೂರು: ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ಜೇಕಬ್ ಇಪೆನ್(65) ಬುಧವಾರ ನಿಧನರಾದರು. ಮೃತರು ಪತ್ನಿ ಶೋಭನಾ ಥಾಮಸ್, ಪುತ್ರಿಯರಾದ ರಿಯಾ, ರಿಚಾ, ಸಹೋದರ ಇಜಿ ಇಪೆನ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಏ. 4 (ಶನಿವಾರ) ರ ಮಧ್ಯಾಹ್ನ 1 ಗಂಟೆಗೆ ಮೃತರ ನಿವಾಸದಲ್ಲಿ ಪ್ರಾರ್ಥನೆ, ನಂತರ ಮಧ್ಯಾಹ್ನ 2 ಗಂಟೆಗೆ ಹೆಬ್ಬಾಳದ ಮಾರ್ ಥೋಮಾ ಸಿರಿಯನ್ ಚರ್ಚ್‌ನಲ್ಲಿ ಎರಡನೇ ಬಾರಿಗೆ ಪ್ರಾರ್ಥನೆ ನಡೆದ ನಂತರ ಮಧ್ಯಾಹ್ನ 3 ಗಂಟೆಗೆ ನಂಜನಗೂಡು ರಸ್ತೆಯಲ್ಲಿರುವ ಬೆನ್ಸನ್ ಸೆಮೆಟ್ರಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಡಂಚಿನಲ್ಲಿ ಬೇಟೆ; ಇಬ್ಬರ ಬಂಧನ

ಕಾರು, ಗನ್, ಉರುಳು ಇನ್ನಿತರ ವಸ್ತುಗಳ ವಶಪಡಿಸಿಕೊಂಡ ಅರಣ್ಯ ಸಂಚಾರಿ ದಳ

ಮೈಸೂರು,ಏ.3(ಎಂಟಿವೈ)– ಕಾಡಂಚಿನ ಪ್ರದೇಶದಲ್ಲಿ ವನ್ಯಜೀವಿಗಳನ್ನು ಬೇಟೆಯಾಡುತ್ತಿದ್ದ ಇಬ್ಬರನ್ನು ಅರಣ್ಯ ಸಂಚಾರಿ ದಳದ ಸಿಬ್ಬಂದಿ ಬಂಧಿಸಿ, ದುಷ್ಕೃತ್ಯಕ್ಕೆ ಬಳಸುತ್ತಿದ್ದ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲೂಕು, ಕೂತಿ ಗ್ರಾಮದ ಕೆ.ಹೆಚ್.ಸುರೇಶ್ ಕುಮಾರ್ ಅಲಿಯಾಸ್ ಗಿರೀಶ್(43) ಹಾಗೂ ಎಂ.ಬಿ.ಮಧುಸೂದನ್ ಅಲಿಯಾಸ್ ಪ್ರಜ್ವಲ್‌ಗೌಡ(29) ಬಂಧಿತರು. ಇವರಿಂದ ಒಂದು ಆಲ್ಟೋ ಕಾರು(ಕೆಎ.04–ಎಂಜೆ.4989), ಡಬಲ್ ಬ್ಯಾರಲ್ ಗನ್, ಸಿಂಗಲ್ ಬ್ಯಾರಲ್ ಗನ್, 14 ಜೀವಂತ ಕಾಡತೂಸು, ಗನ್‌ಪೌಡರ್, ಸೀಸದ ಚೆಲ್ಸ್, ಕತ್ತಿಗಳು, ವಾಹನಗಳ ಕ್ಲಚ್ ವೈರ್‌ನಿಂದ ತಯಾರಿಸಿದ 6 ಉರುಳು, 2 ಟಾರ್ಚ್, ಗ್ಯಾಸ್ ಸಿಲಿಂಡರ್, ಬರ್ನರ್, ಟಾರ್ಪಲ್, ಕುಕ್ಕರ್, ಪಾತ್ರೆ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.



ಕಬಿನಿ ಹಿನ್ನೀರು ಕಾಡಂಚಿನ ಪ್ರದೇಶಗಳಲ್ಲಿ ವನ್ಯಜೀವಿಗಳ ಬೇಟೆಗೆ ಹೊಂಚು ಹಾಕುತ್ತಿದ್ದ ಇಬ್ಬರನ್ನು ಅರಣ್ಯ ಸಂಚಾರಿ ದಳದ ಸಿಬ್ಬಂದಿ ಬಂಧಿಸಿ, ಬಂದೂಕು ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಹಿನ್ನೀರು ಪ್ರದೇಶದಲ್ಲಿ ಹೊಂಚು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಮೇಟಿಕುಪ್ಪೆ ವಲಯ ವ್ಯಾಪ್ತಿಯ ಹೆಚ್.ಡಿ.ಕೋಟೆ ತಾಲೂಕಿನ ಅಗಸನಹುಂಡಿ ಗ್ರಾಮದ ಜಮೀನಿನಲ್ಲಿ ಮಾ.27ರಂದು ಹುಲಿಯೊಂದು ಉರುಳಿಗೆ ಸಿಲುಕಿ ಸಾವನ್ನಪ್ಪಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ ಕಾಡಂಚಿನ ಗ್ರಾಮಗಳಲ್ಲಿ ಗಸ್ತು ಹೆಚ್ಚಿಸಿ, ಬೇಟೆಗಾರರ ಪತ್ತೆಗೆ ಮುಂದಾಗಿದ್ದರು. ಈ ವೇಳೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಭೀಮನಕೊಲ್ಲಿ ಮಹದೇಶ್ವರ ದೇವಾಲಯದ ಸಮೀಪ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಆಲ್ಟೋ ಕಾರಿನಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಈ ಇಬ್ಬರನ್ನು ತಡೆದು, ಪರಿಶೀಲಿಸಿದಾಗ ಬೇಟೆಗೆ ಹೊಂಚು ಹಾಕುತ್ತಿರುವುದು ಬಯಲಾಯಿತು.

ಭಕ್ತರ ಸೋಗಿನಲ್ಲಿ ಪಾರು ಯತ್ನ: ಅರಣ್ಯ ಸಿಬ್ಬಂದಿ ತಡೆದು ನಿಲ್ಲಿಸಿದಾಗ ತಾವು ಭೀಮನಕೊಲ್ಲಿ ಮಹದೇಶ್ವರ ದೇವಾಲಯಕ್ಕೆ ಬಂದಿದ್ದಾಗಿ ಹೇಳಿ, ತಪ್ಪಿಸಿಕೊಳ್ಳಲು ಯತ್ನಿಸಿದರು. ಆದರೆ ಅವರ ಮಾತುಗಳಿಂದ ಯಾಮಾರದ ಅರಣ್ಯ ಸಿಬ್ಬಂದಿ, ಕಾರನ್ನು ಪರಿಶೀಲಿಸಿದಾಗ ಬೇಟೆಗಾಗಿ ತಂದಿದ್ದ ಗನ್, ಮಾರಕಾಸ್ತ್ರ ಪತ್ತೆಯಾದವು. ಅಲ್ಲದೆ, ಕುಕ್ಕರ್‌ನಲ್ಲಿ ಮಾಂಸದ ಅಡುಗೆಯೂ ಇತ್ತು. ಬಳಿಕ ವಿಚಾರಣೆ ತೀವ್ರಗೊಳಿಸಿದಾಗ ಬೇಟೆ ಉದ್ದೇಶದಿಂದ ಬಂದಿದ್ದಾಗಿ ಆರೋಪಿಗಳು ಒಪ್ಪಿಕೊಂಡರು ಎಂದು ಅರಣ್ಯ ಸಂಚಾರಿ ದಳದ ಸಿಬ್ಬಂದಿ ತಿಳಿಸಿದ್ದಾರೆ.

ಹಲವು ವರ್ಷಗಳಿಂದ ಬೇಟೆ: ಬಂಧಿತರಿಬ್ಬರು 2009 ರಿಂದಲೂ ಭೀಮನಕೊಲ್ಲಿ ಸೇರಿದಂತೆ ವಿವಿಧೆಡೆ ಕಾಡುಹಂದಿ ಹಾಗೂ ಜಿಂಕೆ ಬೇಟೆಯಾಡುತ್ತಿದ್ದರು ಎನ್ನುವುದು ವಿಚಾರಣೆ ವೇಳೆ ತಿಳಿದುಬಂದಿದೆ. ಏ.1ರಂದು ಬೆಳಗ್ಗೆ ಸೋಮವಾರಪೇಟೆಯಿಂದ ಹೊರಟು ಮಧ್ಯಾಹ್ನ ಭೀಮನಕೊಲ್ಲಿ ಮಹದೇಶ್ವರ ದೇವಾಲಯದ ಬಳಿ ಕಬಿನಿ ಹಿನ್ನೀರಿನ ಪ್ರದೇಶಕ್ಕೆ ಬಂದಿದ್ದಾರೆ. ಅಂದು ತೋಟಗಾರಿಕಾ ಇಲಾಖೆಗೆ ಸೇರಿದ ತಾಳೆ ತೋಟದ ಬೇಲಿಯಲ್ಲಿ ಆರು ಕಡೆ ಉರುಳು ಹಾಕಿ, ರಾತ್ರಿಯಿಡೀ ಕಾಡಂಚಿನ ನಿರ್ಜನ ಪ್ರದೇಶದಲ್ಲಿ ಕಾರಿನಲ್ಲೇ ಕಾದಿದ್ದಾರೆ ಆದರೆ ಉರುಳಿಗೆ ಯಾವ ಪ್ರಾಣಿಯೂ ಸಿಲುಕದ ಹಿನ್ನೆಲೆಯಲ್ಲಿ ಬೆಳಗ್ಗೆ ಉರುಳನ್ನು ತೆಗೆದುಕೊಂಡು ಬೇರೆಡೆ ಹಾಕುವ ಆಲೋಚನೆಯಲ್ಲಿದ್ದಾಗ ಅರಣ್ಯ ಸಂಚಾರಿ ದಳಕ್ಕೆ ಸಿಕ್ಕಿಬಿದ್ದಿದ್ದಾರೆ.

ಕಾಡು ಪ್ರಾಣಿಗಳ ಮಾಂಸ ಬೇಕೆನಿಸಿದಾಗ ಅರಣ್ಯದಂಚಿನ ಪ್ರದೇಶಕ್ಕೆ ಬಂದು ಬೇಟೆಯಾಡುತ್ತಿದ್ದರು. ಬೇಟೆ ನಂತರ ಪ್ರಾಣಿಯ ಚರ್ಮ ಸುಡಲು ಗ್ಯಾಸ್ ಸಿಲಿಂಡರ್ ಹಾಗೂ ಬರ್ನರ್ ಬಳಸುತ್ತಿದ್ದರು. ಬಳಿಕ ಮನೆಗೆ ಮಾಂಸ ಕೊಂಡೊಯ್ದು ಹಂಚಿಕೊಳ್ಳುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದುಬಂದಿರುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಂಚಾರಿ ದಳದ ಡಿಸಿಎಫ್ ಜಿ.ರುದ್ರೇಶ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಕೆ.ಸುರೇಂದ್ರ, ಡಿಆರ್‌ಎಫ್‌ಓ ವಿ.ಮುತ್ತುರಾಜು, ಗಸ್ತುಪಾಲಕರಾದ ತಿರುಪತಿ ಪೂಜಾರ, ಕುಮಾರ್, ದೇವರಾಜ ಬಂಡಿವಡ್ಡರ್ ಇನ್ನಿತರರು ಪಾಲ್ಗೊಂಡಿದ್ದರು.

ಇಂದಿನಿಂದ ಎಲ್‌ಇಡಿ ಪರದೆ ಮೇಲೆ ಐಪಿಎಲ್ ಪಂದ್ಯಾವಳಿ

ಮೈಸೂರು, ಏ.3(ಜಿಎ)–ಐಪಿಎಲ್ ಪಂದ್ಯಗಳನ್ನು ಏ.4 ಮತ್ತು 5ರಂದು ನಗರದಲ್ಲಿ ಬೃಹತ್ ಎಲ್‌ಇಡಿ ಪರದೆ ಮೇಲೆ ವೀಕ್ಷಿಸಿ ಆನಂದಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಸಿಎ ಮೈಸೂರು ವಲಯ ಅಧ್ಯಕ್ಷ ರಾಘವೇಂದ್ರ ಪಟ್ನಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.4ರಂದು ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ಮಧ್ಯಾಹ್ನ 2.30ಕ್ಕೆ ಪ್ರವೇಶಿಸಿದರೆ ಡೆಲ್ಲಿ ಕ್ಯಾಪಿಟಲ್ ಮತ್ತು ಮುಂಬಯಿ ಇಂಡಿಯನ್ಸ್ ತಂಡಗಳ ನಡುವಿನ ಪಂದ್ಯ, ನಂತರ ಗುಜರಾತ್ ಟೈಟಾನ್ಸ್ ಮತ್ತು ರಾಜಸ್ತಾನ್ ರಾಯಲ್ಸ್ ಪಂದ್ಯ, ಏ.5ರಂದು ಮಧ್ಯಾಹ್ನ 2.30ಕ್ಕೆ ಪ್ರವೇಶಿಸಿದರೆ ಮೊದಲಿಗೆ ಸನ್‌ರೈಸರ್ಸ್ ಹೈದ್ರಾಬಾದ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಡುವಿನ ಪಂದ್ಯ ಹಾಗೂ ಸಂಜೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಪಂದ್ಯವನ್ನು ಉಚಿತವಾಗಿ ವೀಕ್ಷಿಸಬಹುದಾಗಿದೆ ಎಂದರು.

ಬಿಸಿಸಿಐ ಪ್ರತಿನಿಧಿ ರವೀಂದ್ರ ಮಾತನಾಡಿ, ಇಲ್ಲಿ ಸಂಗೀತ, ಆಹಾರ ಮಳಿಗೆ, ವಿವಿಧ ಆಟಗಳೂ ಇರಲಿದ್ದು, ನೈಜ ಪಂದ್ಯಗಳನ್ನು ವೀಕ್ಷಿಸಲು ಸಾಧ್ಯವಾಗದಿರುವವರಿಗೆ ಇಂತಹುದೇ ಅನುಭವ ಈ ಫ್ಯಾನ್ ಪಾರ್ಕ್ ಒದಗಿಸುತ್ತದೆ. ವಿಶೇಷ ಚೇತನರು, ಹಿರಿಯ ನಾಗರಿಕರು ಹಾಗೂ ಗರ್ಭಿಣಿಯರಿಗೆ ಖುರ್ಚಿ ವ್ಯವಸ್ಥೆ ಇದೆ ಎಂದರು.

ತಂಬಾಕು ದರ ಕುಸಿತ ಬಾರುಕೋಲು, ಪೊರಕೆ ಚಳವಳಿ ಎಚ್ಚರಿಕೆ

ಮೈಸೂರು, ಏ.3(ಜಿಎ)–ಐಟಿಸಿ ಕಂಪನಿ ವಂಚನೆ, ಇದರೊಂದಿಗೆ ತಂಬಾಕು ಮಂಡಳಿ ಅಧಿಕಾರಿಗಳು ಶಾಮೀಲಾಗಿರುವ ಕಾರಣ ತಂಬಾಕು ದರ ಈ ಭಾಗದಲ್ಲಿ ತೀವ್ರ ಕುಸಿದು ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಹೀಗಾಗಿ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸದಿದ್ದರೆ ಸಾಮೂಹಿಕ ನಾಯಕತ್ವದ ರೈತಸಂಘದ ವತಿಯಿಂದ ಬಾರುಕೋಲು ಹಾಗೂ ಪೊರಕೆ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈಜ್ಞಾನಿಕ ಬೆಲೆ ನೀಡಲು ಸಾಧ್ಯವಾಗದಿದ್ದರೂ ಕನಿಷ್ಠ ಕಳೆದ ಅಕ್ಟೋಬರ್, ನವೆಂಬರ್‌ನಲ್ಲಿ ನೀಡಿದ ದರವನ್ನೇ ಈಗ ಕೊಡುತ್ತಿಲ್ಲ. ಒಂದು ಕೆಜಿ ತಂಬಾಕು ಬೆಳೆಯಲು ರೈತರಿಗೆ ಖರ್ಚಾದರೆ ಈಗ ಕೇವಲ 180 ರಿಂದ 190 ಅಥವಾ 200 ರೂ. ನೀಡಿದರೆ ಜೀವನ ನಡೆಸುವುದು ಹೇಗೆ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಮಾದ್ರಳ್ಳಿ ಪಾಪಣ್ಣ, ಚಕ್ಕೋಡನಹಳ್ಳಿ ಡಿ.ಪುನೀತ್, ಚಂಗಡಿ ಕರಿಯಪ್ಪ ಇದ್ದರು.

ಏ.5ರಂದು ಸ್ವಯಂಪ್ರೇರಿತ ರಕ್ತದಾನಿಗಳಿಗೆ ಸನ್ಮಾನ, ರಕ್ತದಾನಿಗಳ ಹಬ್ಬ

ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಗಳಿಂದ ಪೋಸ್ಟರ್ ಬಿಡುಗಡೆ

ಮೈಸೂರು, ಏ.3– ಜೀವಧಾರ ರಕ್ತ ನಿಧಿ ಕೇಂದ್ರ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಮತ್ತು ಬ್ಲಡ್ ಆನ್ ಕಾಲ್ ಕ್ಲಬ್ ವತಿಯಿಂದ ಏಪ್ರಿಲ್ 5ರಂದು ನಗರದ ರೈಲ್ವೆ ನಿಲ್ದಾಣ ಮುಂಭಾಗವಿರುವ ಜೆಕೆ ಆಡಿಟೋರಿಯಂ ಆವರಣದಲ್ಲಿ 15 ಕ್ಕೂ ಹೆಚ್ಚು ಬಾರಿ ಸ್ವಯಂಪ್ರೇರಿತ ರಕ್ತದಾನ ಮಾಡಿದ 300ಕ್ಕೂ ಹೆಚ್ಚು ಸ್ವಯಂ ಪ್ರೇರಿತ ರಕ್ತದಾನಿಗಳ ಸನ್ಮಾನಿಸುವ ಮೂಲಕ ರಕ್ತದಾನಿಗಳ ಹಬ್ಬವನ್ನು ಆಚರಿಸಲಾಗುತ್ತಿದೆ.

ರಕ್ತದಾನದ ಜಾಗೃತಿಯ ಪೋಸ್ಟರ್ ಅನ್ನು ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಬಿಡುಗಡೆಗೊಳಿಸಿ ಆಶೀರ್ವಾದ ನೀಡಿದರು.



ರಕ್ತದಾನದ ಜಾಗೃತಿ ಪೋಸ್ಟರ್ ಅನ್ನು ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಶ್ರೀಗಳು, ರಕ್ತದಾನ ಅತ್ಯಂತ ಶ್ರೇಷ್ಠದಾನ ಮಾತ್ರವಲ್ಲ ಜೀವ ರಕ್ಷಕ ಸಾಧನ. ನಾವು ನೀಡುವ ರಕ್ತವು ಜೀವ ಒಂದನ್ನು ಉಳಿಸಬಲ್ಲದು. ಸಕಾಲದಲ್ಲಿ ರಕ್ತ ದಾನ ಮಾಡುವುದರಿಂದ ಸಾಮಾನ್ಯ ಮನುಷ್ಯರಿಗೂ ಇತರರ ಜೀವ ಉಳಿಸಲು ಸಾಧ್ಯವಿದೆ. ಕಾಲ ಕಾಲಕ್ಕೆ ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಜೀವ ಉಳಿಸಿದ ಸಾರ್ಥಕತೆಯ ಜೊತೆಗೆ ನಮ್ಮ ಆರೋಗ್ಯವೂ ವೃದ್ಧಿಸುತ್ತದೆ. ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲದ ಕಾರಣ ರಕ್ತದಾನಿಗಳಿಂದಲೇ ರಕ್ತದ ಪೂರೈಕೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ರಕ್ತದಾನ ಮಾಡಿ ಜೀವ ಉಳಿಸುವ ಪುಣ್ಯ ಕಾರ್ಯದಲ್ಲಿ ಕೈಜೋಡಿಸಬೇಕು.

ರಕ್ತದಾನ ಮಾಡಲು ಒಳ್ಳೆ ಮನಸ್ಸಿದ್ದರೆ ಸಾಕು. ಇತರರ ನೋವು–ನಲಿವು, ಕಷ್ಟ–ಕಾರ್ಪಣ್ಯಗಳಿಗೆ ಸ್ಪಂದಿಸುವ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ನಿರಂತರ ರಕ್ತದಾನ ಮಾಡಿದಲ್ಲಿ ಸಮಾಜದ ಸ್ವಾಸ್ಥ್ಯ ವೃದ್ಧಿಸುತ್ತದೆ ಎಂದು ರಕ್ತದಾನದ ಮಹತ್ವದ ಬಗ್ಗೆ ಮಾತನಾಡಿದರು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ರಕ್ತದಾನಿಗಳಿಗೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ 15ಕ್ಕೂ ಹೆಚ್ಚು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದ ದಾನಿಗಳಿಗೆ ಸನ್ಮಾನಿಸುವ ಮೂಲಕ ರಕ್ತದಾನದ ಹಬ್ಬವನ್ನು ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ ವಿಕಾಶ್ ಶಾಸ್ತ್ರಿ, ಬ್ಲಡ್ ಆನ್ ಕಾಲ್ ಕ್ಲಬ್ ಮೈಸೂರು ದೇವೇಂದ್ರ ಪರಿಹಾರಿಯ, ಆನಂದ್, ನವೀನ್, ರಾಮಚಂದ್ರ ಇನ್ನಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.4.2026 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.
- **ವ್ಯವಸ್ಥಾಪಕರು :** ಬಿಗ್ ಜ್ಯುವೆಲ್ಲರಿ ಶೋ, ವಿವಿಧ ರಾಜ್ಯಗಳ ಪ್ರಮುಖ ಆಭರಣ ವಿನ್ಯಾಸಗಾರರ ವಿನೂತನ ಆಭರಣಗಳ ಸಂಗ್ರಹ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಬ್ರಾಂಡ್ ಅಂಬಾಸಿಡರ್ ನಟಿ ಅಮೃತಾ, ಸ್ಥಳ: ರ್‍ಯಾಡಿಸನ್ ಪ್ಲಾಜಾ ಹೋಟೆಲ್, ಎಂ.ಜಿ. ರಸ್ತೆ, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ :** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಮೈತ್ರಿ ಸ್ಪೆಷಲ್ ಚಿಲ್ಡ್ರನ್ ಸ್ಕೂಲ್ :** ಗೀಟು ಗೀಚು ಅಕ್ಷರ ರಹಿತ ಕಥೆಗಳು, ಮುಖ್ಯ ಅತಿಥಿಗಳು : ಶ್ರೀಮತಿ ಶುಭಾ ಸಂಜಯ್ ಅರಸ್, ಶಾಶ್ವತಿಸಿಂಗ್, ಅಜಿತ್‌ಪೈ, ಸ್ಥಳ:ಸುಚಿತ್ರಾ ಆರ್ಟ್‌ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಹ್ಯಾಕ್ ಒಲಂಪಿಕ್–2026, ರಾಷ್ಟ್ರ ಮಟ್ಟದ ಹ್ಯಾಕಥಾನ್, ಮುಖ್ಯ ಅತಿಥಿಗಳು : ವೆಲ್ಸ್ ಫಾರ್ಗೋ ಉಪಾಧ್ಯಕ್ಷೆ ಸೌಮ್ಯ ಎನ್. ಸ್ವಾಮಿ, ಗೌರವ ಅತಿಥಿಗಳು : ಡಾ. ಬಿ. ಸುರೇಶ್, ಆದರ್ಶ್ ಸುಧೀಂದ್ರ, ಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಪ್ರಿನ್ಸಿಪಾಲ್ ಡಾ. ಸಿ. ನಟರಾಜು, ಕುಲಸಚಿವ ಡಾ. ಎಸ್.ಎ. ಧನರಾಜ್, ಸ್ಥಳ: ಸೆಮಿನಾರ್ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 8ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ
- **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ವಿಶ್ರಾಂತ ಪ್ರಿನ್ಸಿಪಾಲ್ ಪುರುಷೋತ್ತಮ್, ಅಭಿನಂದನಾ ಭಾಷಣ : ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಾ. ಎನ್. ಪ್ರಭಾ, ಮುಖ್ಯ ಅತಿಥಿಗಳು : ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಲೇಖಕಿ ಶ್ರೀಮತಿ ವಿ. ವಿಜಯಕುಮಾರಿ, ಗಾಯಕಿ ಶ್ರೀಮತಿ ಫಾತಿಮಾ ಅವರಿಂದ ಗೀತಗಾಯನ, ಸ್ಥಳ: ಅಕ್ಕನ ಬಳಗ ಸಭಾಂಗಣ, ಮಧ್ಯಾಹ್ನ 3.30ಕ್ಕೆ.
- **ಜೆಎಸ್‌ಎಸ್ ಮೆಡಿಕಲ್ ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಮೆಡಿಕಲ್ ಅಸೆಸ್‌ಮೆಂಟ್ ಅಂಡ್ ರೇಟಿಂಗ್ ಬೋರ್ಡ್ ಅಧ್ಯಕ್ಷ ಡಾ. ಎಂ.ಕೆ. ರಮೇಶ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸ್ಥಳ: ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಸಂಜೆ 4ಕ್ಕೆ.
- **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್ :** ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು : ಎಸ್. ರಾಮಕೃಷ್ಣನ್, ಪದಗ್ರಹಣ ಅಧಿಕಾರಿ : ಬಿಎಐ ರಾಷ್ಟ್ರೀಯ ಉಪಾಧ್ಯಕ್ಷ ವಿ. ಸತ್ಯಮೂರ್ತಿ, ಗೌರವ ಅತಿಥಿಗಳು : ಬಿಎಐ ರಾಜ್ಯಾಧ್ಯಕ್ಷ ಶಿವಪ್ರಕಾಶ್, ಸ್ಥಳ: ಎಂಬಿಸಿಟಿ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ವಿಶ್ವೇಶ್ವರನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ –ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ಎಸ್. ಸಂಗೀತಾ ಹಾಗೂ ಪಿ. ಸುರಭಿ, ವ್ಯಾಖ್ಯಾನ–ಡಾ.ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ಭಾರತಿ–ವೀಣಾ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ –ಡಿ.ಜಿ.ಸರ್ ಅಂತೂ ಇಂತೂ ಹ್ಲೂಂ ಅಂದ್ರು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಪ್ರಾಯೋಜಿತ ಕಾರ್ಯಕ್ರಮ–ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ, ಪ್ರಾಯೋಜಕರು–ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಈ ಕುರಿತು ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ನಿರ್ದೇಶಕರಾದ ಎಸ್.ಎಂ. ರಾಜೇಶ್ವರಿ ಅವರೊಂದಿಗೆ ಸಂದರ್ಶನ. ಸಂದರ್ಶನ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ರಾಧ ಗೋವಿಂದ್ ದಾಸ್–ಧ್ರುಪದ್, ಧಾಮರ್

- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ – ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ
- **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್:** ಎಸ್.ಜಿ. ರಘುರಾಂ ಸಂಸ್ಮರಣೆ ಕಾರ್ಯಕ್ರಮದ ಅಂಗವಾಗಿ ಡಾ. ಡಿವಿಜಿ ಅವರ ಮಂಕುತಿಮ್ಮನ ಕಗ್ಗಗಳು ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮ, ಗಾಯನ ಮತ್ತು ವ್ಯಾಖ್ಯಾನ : ಡಾ. ರೋಹಿಣಿ ಮೋಹನ್, ರವಿರಾಜ್ ಹಾ.ಸು. –ಹಾರ್ಮೋನಿಯಂ, ಭೀಮಾಶಂಕರ್–ತಬಲ, ಸ್ಥಳ: ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ
- **ನಿರಂತರ ಫೌಂಡೇಷನ್ :** ನಿರಂತರ ರಂಗ ತಂಡದ ಕಲಾವಿದರಿಂದ ಮಹೇಶ್ ಎಲಕುಂಚವಾರ್ ಅವರ ಪಾರ್ಟಿ ನಾಟಕ ಪ್ರದರ್ಶನ, ಅನುವಾದ : ಪ್ರಸಾದ್ ಕುಂದೂರು, ನಿರ್ದೇಶನ : ಚಿದಂಬರರಾವ್ ಜಂಬೆ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಶ್ರೀರಾಮ ನವಮಿ ಕಾರ್ಯಕ್ರಮಗಳು



- **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಸಂಜೆ 5.30 ರಿಂದ ಶಾರದಾ ಕಲಾ ಕೇಂದ್ರ, ಶ್ರೀರಾಂಪುರ ಅವರಿಂದ ಭಜನೆ, ಸಂಜೆ 6.30ಕ್ಕೆ ವಿದ್ವಾನ್ ರಾಘವೇಂದ್ರ ಶೃಂಗೇರಿ, ಬೆಂಗಳೂರು ಮತ್ತು ವೃಂದದವರಿಂದ ವೇಣುವಾದನ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಾಭವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಾಭವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ತ್ರಿಚೂರ್ ಸಹೋದರರಾದ ವಿದ್ವಾನ್ ಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಂಕುಮಾರ್ ಮೋಹನ್ ಅವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ
- **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ಲಕ್ಷ್ಮೀಪುರಂನ ಶ್ರೀ ಶಾರದಾಂಬ ಭಜನಾ ಮಂಡಳಿಯವರಿಂದ ಭಜನೆ. ಸ್ಥಳ: ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ.

ಮೈಸೂರು ಮಿತ್ರ ಶನಿವಾರ 4 ಏಪ್ರಿಲ್ 2026

ವರಿಷ್ಠರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ

ಅಧಿಕಾರ ಹಂಚಿಕೆ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇನ್ನೂ ಆಶಾಭಾವ!

ಬೆಂಗಳೂರು, ಏ.3(ಕೆಎಂಶಿ)– ಪಕ್ಷದ ವರಿಷ್ಠರು ತಮಗೆ ನ್ಯಾಯ ಒದಗಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಧಿಕಾರ ಹಂಚಿಕೆ ವಿಷಯದಲ್ಲಿ ನಮ್ಮಲ್ಲಿ ಗೊಂದಲವೂ ಇಲ್ಲ, ಭಿನ್ನಾಭಿಪ್ರಾಯಗಳೂ ಇಲ್ಲ. ವರಿಷ್ಠರು ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಂಡು ಎಲ್ಲರಿಗೂ ನ್ಯಾಯ ಒದಗಿಸುತ್ತಾರೆ. ನಿಷ್ಠಾವಂತ ಕಾರ್ಯಕರ್ತರನ್ನು ಪಕ್ಷ ಎಂದೂ ಕೈಬಿಟ್ಟಿಲ್ಲ. ಆದರೆ, ಎಲ್ಲರಿಗೂ ಅಧಿಕಾರ ನೀಡಲಾಗದಿದ್ದರೂ ಯಾರಿಗೆ ಯಾವ ಸ್ಥಾನ ಕೊಡಬೇಕೆಂಬುದು ಅವರಿಗೆ ತಿಳಿದಿರುತ್ತದೆ.

ಕರ್ನಾಟಕ ನಾಯಕತ್ವ ವಿಚಾರದಲ್ಲೂ ವರಿಷ್ಠರು ಯಾವುದೇ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿ ನ್ಯಾಯ ಒದಗಿಸುತ್ತಾರೆಂಬ ವಿಶ್ವಾಸ ವ್ಯಕ್ತಪಡಿಸಿದರು.

ಗುರುವಾರ ತಡರಾತ್ರಿ ಆಂಗ್ಲ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ನಾಯಕತ್ವ ಗೊಂದಲ ಬಿಜೆಪಿ ಸೃಷ್ಟಿಯೇ ಹೊರತು ನಮ್ಮ ಪಕ್ಷದಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿದರು. ನನ್ನೊಬ್ಬನಿಂದಾಗಲೀ ಅಥವಾ ಸಿದ್ದರಾಮಯ್ಯ ಅವರೊಬ್ಬರಿಂದಾಗಲೀ ರಾಜ್ಯ ಸರ್ಕಾರ ನಡೆಯುತ್ತಿಲ್ಲ. ಇಬ್ಬರೂ ಒಟ್ಟಿಗೆ ಶ್ರಮಿಸಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದಿದ್ದೇವೆ.

ಉಪಚುನಾವಣೆಯಲ್ಲಿ ಕೂಡ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ, ನಮ್ಮ ಕಾರ್ಯಕರ್ತರು, ಶಾಸಕರು, ಸಚಿವರು ಹಗಲೂ ರಾತ್ರಿ ಎರಡೂ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ.



ಡಿ.ಕೆ.ಶಿವಕುಮಾರ್

ಜಾತಿ ಮೇಲಲ್ಲ; ನೀತಿ ಮೇಲೆ!: ನಾವು ಜಾತಿ, ಧರ್ಮದ ಮೇಲೆ ರಾಜಕಾರಣ ಮಾಡುವುದಿಲ್ಲ. ನೀತಿಯ ಮೇಲೆ ರಾಜ ಕಾರಣ ಮಾಡುತ್ತೇವೆ ಎಂದರು. ಬಿಜೆಪಿ ಖಾಲಿ ಮಾತುಗಳ ಮೂಲಕ ಜನರನ್ನು ಮರಳು ಮಾಡುತ್ತಿದೆ. ಅಕ್ಕಿಗೆ ಅರಿಶಿನ ಬೆರೆಸಿ ಅಯೋಧ್ಯೆಯಿಂದ ತಂದಿದ್ದೆಂದು ಬಿಂಬಿಸುತ್ತಿದೆ. ಅಕ್ಷತೆಯನ್ನು ಮನೆ–ಮನೆಗೆ ತಲುಪಿಸುತ್ತಿದ್ದಾರೆ.

ಅಕ್ಷತೆ ತಲುಪಿಸುವ ರೀತಿಯಲ್ಲೇ ಎಲ್‌ಪಿಜಿ ಸಿಲಿಂಡರ್‌ಗಳನ್ನು ತಲುಪಿಸಲಿ, ಇವರದು ಬರೀ ಬಣ್ಣದ ಮಾತು, ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ, ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ನಾನು ಅಸ್ಸಾಂ ಹಾಗೂ ಕೇರಳ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದೇನೆ. ಇಲ್ಲಿ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ವರ್ಷ 60,000 ಕೋಟಿ ರೂ. ಜನರಿಗಾಗಿ ವಿನಿಯೋಗಿಸುತ್ತಿದೆ.

ಅಸ್ಸಾಂನಲ್ಲಿ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ಕಾರ್ಯಕರ್ತರಿಗೆ ಮಾತ್ರ ನೀಡಲಾಗುತ್ತಿದೆ. ನಾವು ಸಮಾಜದ ಎಲ್ಲಾ ವರ್ಗದವರಿಗೂ ಪಕ್ಷಭೇದ ಮರೆತು ನೀಡುತ್ತಿದ್ದೇವೆ. ಇದೇ ಕಾರಣಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಸ್ಸಾಂನಲ್ಲಿ ಗ್ಯಾರಂಟಿ ಯೋಜನೆಗಳ ಭರವಸೆ ಘೋಷಣೆ ಮಾಡಿದ್ದಾರೆ. ಭೂಮಿ ಹಕ್ಕು, ಪಿಂಚಣಿ ಸೇರಿದಂತೆ ಅನೇಕ ಯೋಜನೆಗಳನ್ನು ಘೋಷಿಸಲಾಗಿದೆ.

ದಾವಣಗೆರೆಯಲ್ಲಿ ಕೇವಲ ಒಂದು ಕುಟುಂಬ ರಾಜಕೀಯವಾಗಿ ಶಕ್ತಿಶಾಲಿಯಾಗಿದೆ ಎಂಬ ಪ್ರಶ್ನೆಗೆ, ಶಿವಶಂಕರಪ್ಪ ಹಾಗೂ ಅವರ ಮಗ ಮಲ್ಲಿಕಾರ್ಜುನ್ ಅನೇಕ ವರ್ಷಗಳಿಂದ ರಾಜಕೀಯದಲ್ಲಿದ್ದಾರೆ. ಇದು ಎಲ್ಲಾ ಪಕ್ಷಗಳಲ್ಲೂ ಇದೆ, ಯಡಿಯೂರಪ್ಪ ಅವರ ಇಬ್ಬರು ಮಕ್ಕಳು ರಾಜಕೀಯದಲ್ಲಿ ಇಲ್ಲವೇ, ಜನತಾದಳದಲ್ಲಿ ಒಂದೇ ಕುಟುಂಬದ ಐದಾರು ಜನ ಇಲ್ಲವೇ ಎಂದು ಪ್ರಶ್ನಿಸಿದರು.

2028ಕ್ಕೆ ಕಾಂಗ್ರೆಸ್ ನಿರ್ನಾಮ; ಮಾಜಿ ಸಂಸದ ಪ್ರತಾಪ್ ಸಿಂಹ ಭವಿಷ್ಯ

ಸಿದ್ದರಾಮಯ್ಯ ಸರ್ಕಾರದ ಲೂಟಿ ನೋಡಿಯೇ ಕೆಂಪಣ್ಣ ಸತ್ತೋಗ್ಬಿಟ್ಟ!

ಬಾಗಲಕೋಟೆ: ಉಪಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ನಡೆಸಿದ ಮಾಜಿ ಸಂಸದ ಪ್ರತಾಪ ಸಿಂಹ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಾಗ್ದಾಳಿ ನಡೆಸಿದರು.



ಬಾಗಲಕೋಟೆಯಲ್ಲಿ ಖಾಸಗಿ ಚಾನಲ್ ಜೊತೆ ಮಾತನಾಡಿದ ಅವರು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ. 40 ರಷ್ಟು ಕಮಿಷನ್ ಆರೋಪ ಮಾಡಿದ್ದ ಕೆಂಪಣ್ಣ ಈಗಿನ ಸರ್ಕಾರದ ಲೂಟಿ ನೋಡಿದ ಬಳಿಕ ಸತ್ತೇ ಹೋಗಿಬಿಟ್ಟ ಮನುಷ್ಯ ಎಂದು ಪ್ರತಾಪ ಸಿಂಹ ಆರೋಪಿಸಿದ್ದಾರೆ.

ಸಿದ್ದರಾಮಯ್ಯ ಅವರ ಹೆಸರಷ್ಟೇ ಹಿಂದೂ, ಆದರೆ ಅವರ ಗುಣ–ನಡತೆಗಳಲ್ಲಿ ಹಿಂದೂ ಧರ್ಮದ ಯಾವ ಲಕ್ಷಣವೂ ಕಾಣಿಸುತ್ತಿಲ್ಲ. ಕಾಂಗ್ರೆಸ್ ಪಕ್ಷದವರು ಹಿಂದುತ್ವ ಮಂತ್ರ ಜಪಿಸುತ್ತಿದ್ದಾರೆ. ನಾಗಮಂಗಲದಲ್ಲಿ ಗಣೇಶ ಶೋಭಾಯಾತ್ರೆ ಮೇಲೆ ಕಲ್ಲು ತೂರಾಟ ನಡೆದಾಗ ಸಣ್ಣಪುಟ್ಟ ಘಟನೆ ಎಂದು ಮುಖ್ಯಮಂತ್ರಿ ಅವರು ಹೇಳಿದ್ದರು. ಅಲ್ಲದೆ, ಸ್ಥಳಕ್ಕೆ ಭೇಟಿ ನೀಡಲಿಲ್ಲ.

ಮದ್ದೂರಿನಲ್ಲಿ ಮಸೀದಿ ಮೇಲೆ ಕಲ್ಲು ತೂರಾಟ, ಅಣ್ಣಮ್ಮ ಜಾತ್ರೆ ಮೇಲೆ ಕಲ್ಲು ತೂರಾಟ, ಶಿವಾಜಿ ಜಯಂತಿಯಂದು ಚಪ್ಪಲಿ ಮತ್ತು ಕಲ್ಲು ತೂರಾಟ ನಡೆದಾಗ ಸಿದ್ದರಾಮಯ್ಯ ಹಾಗೂ ಅವರ ಸಂಪುಟದ ಸದಸ್ಯರು ಎಲ್ಲಿ ಹೋಗಿದ್ದರು ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನವರು ನಿಜವಾದ ಹಿಂದೂಗಳಾಗಿದ್ದರೆ ಕಠಿಣ ಕ್ರಮ ಕೈಗೊಳ್ಳುತ್ತಿದ್ದರು ಎಂದು ಅವರು ಹೇಳಿದರು.

ಎಲ್ಲಾ ಮುಖ್ಯಮಂತ್ರಿಗಳು ಮಾಡಿದ ಸಾಲಕ್ಕಿಂತ ಸಿದ್ದರಾಮಯ್ಯ ಅವರು ಮಾಡಿದ ಸಾಲವೇ ಜಾಸ್ತಿಯಾಗಿದೆ. ಸಿದ್ದರಾಮಯ್ಯ ಅವರು ಸಾಲರಾಮಯ್ಯ ಆಗಿದ್ದಾರೆ ಎಂದು ಅವರು ಟೀಕಿಸಿದರು. ಕಳೆದ ಮೂರು ವರ್ಷಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸವಾಗಿಲ್ಲ, ರಸ್ತೆ ಅಥವಾ ಕುಡಿಯುವ ನೀರಿನ ವ್ಯವಸ್ಥೆಯೂ ಸುಧಾರಿಸಿಲ್ಲ ಎಂದು ಪ್ರತಾಪಸಿಂಹ ಆರೋಪಿಸಿದರು.

ನಮ್ಮದು ಮಹಾತ್ಮ ಗಾಂಧಿ ಹಿಂದೂತ್ವ ! ಬಿಜೆಪಿಯವರದ್ದು ಗೋಡ್ಸೆ ಹಿಂದೂತ್ವ !!

ಬೆಂಗಳೂರು, ಏ.3(ಕೆಎಂಶಿ)– ಕಾಂಗ್ರೆಸ್ ಸರ್ವ–ಧರ್ಮ, ಸಕಲ ಜಾತಿಯನ್ನೂ ಜೊತೆಗೆ ಕೊಂಡೊಯ್ಯುವ ಮಹಾತ್ಮ ಗಾಂಧಿಯ ಹಿಂದೂತ್ವ, ಅಧ್ಯಾತ್ಮ ಪಾಲಿಸುವ ಪಕ್ಷವಾಗಿದ್ದು, ಬಿಜೆಪಿ ನಾಥೂರಾವ್ ಗೋಡ್ಸೆ ಹಿಂದೂತ್ವದಲ್ಲಿ ನಂಬಿಕೆ ಇರಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ. ಉಪ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮಾತನಾಡಿದ ಅವರು, ನನ್ನ ಹೆಸರಲ್ಲೇ ಶಿವ, ರಾಮ ಇದ್ದಾರೆ, ನಾನು ಹಿಂದೂ ಅಲ್ಲವೆ. ನಮ್ಮ ಜೊತೆಗಿರುವ ಸಚಿವರಾದ ಈಶ್ವರ್ ಖಂಡ್ರೆ, ಎಂ.ಸಿ.ಸುಧಾಕರ್ ಹಿಂದೂ ಅಲ್ಲವೆ ಎಂದು ಪ್ರಶ್ನಿಸಿದರು.



ಗೋಡ್ಸೆ ಹಿಂದೂತ್ವ ಹೇಳಿಕೊಂಡು ಅಧಿಕಾರಕ್ಕೆ ಬರುವುದು, ಆಮೇಲೆ ಜನರನ್ನು ಮರೆತು, ಅಭಿವೃದ್ಧಿ ಮರೆತು, ಹಣ ಲೂಟಿ ಹೊಡೆಯುತ್ತಾ, ಹಿಂದೂತ್ವ ಬಳಸಿಕೊಳ್ಳುವುದು ಬಿಜೆಪಿ ರೂಢಿ ಆಗಿದೆ.

ನಾನು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ರೈತರು ಸೇರಿ ಎಲ್ಲಾ ಶ್ರಮಿಕ ವರ್ಗಗಳ ಸಾಲ ಮನ್ನಾ ಮಾಡಿ ಜನರಿಗೆ ನೆರವಾದೆವು. ಯಡಿಯೂರಪ್ಪ ಆಡಳಿತದಲ್ಲಿ ಸಾಲ ಮನ್ನಾ ಮಾಡಿ ಎಂದು ಕೇಳಿದರೆ, 'ನಮ್ಮಲ್ಲಿ ಹಣ ಮುದ್ರಿಸುವ ಮೆಷಿನ್ ಇಲ್ಲ' ಎಂಬ ಉಡಾಫೆ ಉತ್ತರ ನೀಡಿದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗಲೂ 29,000 ಕೋಟಿ ರೂ. ಗುತ್ತಿಗೆದಾರರ ಬಾಕಿ ಉಳಿಸಿ ಹೋದರು. ಇದರಲ್ಲಿ 23,000 ಕೋಟಿ ರೂ. ತೀರಿಸಿದ್ದೇವೆ. ಉಳಿದದ್ದನ್ನೂ ತೀರಿಸುತ್ತೇವೆ. ನಾವು ನುಡಿದಂತೆ ನಡೆದು ಐದೂ ಗ್ಯಾರಂಟಿಗಳನ್ನೂ ಜಾರಿ ಮಾಡಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಹನ್ನೆರಡು ವರ್ಷಗಳ ಆಡಳಿತದಲ್ಲಿ ತಾವು ಹೇಳಿದ್ದರಲ್ಲಿ ಒಂದನ್ನೂ ಜಾರಿ ಮಾಡಲಿಲ್ಲ. ಕೇವಲ ಅದಾನಿ ಮತ್ತು ಅಂಬಾನಿ ಇಬ್ಬರಿಗೆ ಮಾತ್ರ ಲಾಭ ಮಾಡಿಕೊಟ್ಟರು ಎಂದರು.

ಇಂದು ಹಾರ್ಮುಜ್ ಕುರಿತು ಯುಎನ್‌ಎಸ್‌ಸಿ ನಿರ್ಣಯ; ಬಹ್ರೇನ್ ನೇತೃತ್ವದಲ್ಲಿ ಕರಡು

ವಿಶ್ವಸಂಸ್ಥೆ, ಏ.3– ಇರಾನ್ ಯುದ್ಧದ ನಡುವೆಯೇ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವ ಕುರಿತು ನಾಳೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಮಹತ್ವದ ಮತದಾನ ನಡೆಯಲಿದೆ.

ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವ ಕುರಿತು ಬಹ್ರೇನ್ ಶನಿವಾರ ಪ್ರಸ್ತಾಪಿಸಿದ ಕರಡು ನಿರ್ಣಯದ ಮೇಲೆ ಯುಎನ್ ಭದ್ರತಾ ಮಂಡಳಿ ಮತ ಚಲಾಯಿಸಲಿದೆ. ಖಾಯಂ ಸದಸ್ಯ ರಾಷ್ಟ್ರಗಳಾದ ಚೀನಾ ಮತ್ತು ರಷ್ಯಾ ದೇಶಗಳು ಬಲಪ್ರಯೋಗಕ್ಕೆ ಅವಕಾಶ ನೀಡುವ ಪಠ್ಯದ ಹಿಂದಿನ ಆವೃತ್ತಿಗಳಿಗೆ ವಿರೋಧದ ನಡುವೆಯೇ ನಾಳೆ ಈ ಮಹತ್ವದ ನಿರ್ಣಯದ ಕುರಿತು ಮತದಾನ ನಡೆಯುತ್ತಿದೆ.

ಕರಡು ಭದ್ರತಾ ಮಂಡಳಿಯ ನಿರ್ಣಯವು ಹಾರ್ಮುಜ್ ಜಲಸಂಧಿಯು ಎಲ್ಲಾ ಸಾರಿಗೆ ಮಾರ್ಗಗಳಿಗೆ ಮುಕ್ತವಾಗಿದೆ ಎಂದು ದೃಢಪಡಿಸುತ್ತದೆ. ಅಂತೆಯೇ ಯಾವುದೇ ರಾಷ್ಟ್ರವು ಅದನ್ನು ಮುಚ್ಚುವ ಅಥವಾ ನಿಯಂತ್ರಿಸುವ ಹಕ್ಕನ್ನು ಹೊಂದಿಲ್ಲ.

ಸಾರಿಗೆ ಮಾರ್ಗವನ್ನು ಸುರಕ್ಷಿತಗೊಳಿಸಲು ಮತ್ತು ಜಲಸಂಧಿಯ ಮೂಲಕ ಅಂತಾರಾಷ್ಟ್ರೀಯ ಸಂಚರಣೆಗೆ ಅಡ್ಡಿಯಾಗುವ ಯಾವುದೇ ಕೃತ್ಯಗಳನ್ನು ತಡೆಯಲು 'ವಿಶೇಷ ರಕ್ಷಣಾತ್ಮಕ ಕ್ರಮಗಳನ್ನು' ತೆಗೆದುಕೊಳ್ಳಲು ಇದು ರಾಜ್ಯಗಳಿಗೆ ಅಧಿಕಾರ ನೀಡುತ್ತದೆ ಎಂದು ಹೇಳಲಾಗಿದೆ.


ಅಲ್ಲದೆ ಅಂತರರಾಷ್ಟ್ರೀಯ ಕಾನೂನು ಮತ್ತು ಅಂತರರಾಷ್ಟ್ರೀಯ ಮಾನವೀಯ ಕಾನೂನನ್ನು ಅನುಸರಿಸುವಾಗ ಸುರಕ್ಷಿತ ಮಾರ್ಗವನ್ನು ಸಜ್ಜುಗೊಳಿಸಲು ಮತ್ತು ಬೆಂಬಲಿಸಲು ಎಲ್ಲಾ ರಾಜ್ಯಗಳಿಗೆ ಇದು ಸ್ಪಷ್ಟ ಕಾನೂನು ಆಧಾರವನ್ನು ಒದಗಿಸುತ್ತದೆ. ಈ ಅಧಿ ಕಾರವನ್ನು ಬಳಸುವ ದೇಶಗಳು ಅಂತರರಾಷ್ಟ್ರೀಯ ಕಾನೂನಿಗೆ ಪಾರದರ್ಶಕತೆ ಮತ್ತು ಅನುಸರಣೆಯನ್ನು ಖಚಿತಪಡಿಸಿಕೊಂಡು ವಿಶ್ವಸಂಸ್ಥೆಗೆ ತಿಳಿಸಬೇಕು ಮತ್ತು ವರದಿ ಮಾಡಬೇಕು ಎಂದು ಕರಡು ನಿರ್ಣಯವು ಹೇಳುತ್ತದೆ. ಹೊಸ ಬೆಳವಣಿಗೆಗಳ ಆಧಾರದ ಮೇಲೆ ಯುಎನ್ ಭದ್ರತಾ ಮಂಡಳಿಯು ಮುಂದಿನ ಕ್ರಮ ಕೈಗೊಳ್ಳಬಹುದಾದಂತೆ ಯುಎನ್ ಕಾರ್ಯದರ್ಶಿಯ ಮಾಸಿಕ ವರದಿ ಯೊಂದಿಗೆ ಇದು ಮೇಲ್ವಿಚಾರಣಾ ಕಾರ್ಯ ವಿಧಾನವನ್ನು ರಚಿಸುತ್ತದೆ ಎಂದು ವಿಶ್ವಸಂಸ್ಥೆಗೆ ಯುಎಇಯ ಶಾಶ್ವತ ಮಿಷನ್ ಹೇಳಿದೆ.

ಜಿಸಿಸಿ ಮತ್ತು ಜೋರ್ಡಾನ್ ಬೆಂಬಲದೊಂದಿಗೆ ಬಹ್ರೇನ್, ಹಾರ್ಮುಜ್ ಜಲಸಂಧಿಯ ಕುರಿತಾದ ಭದ್ರತಾ ಮಂಡಳಿಯ ನಿರ್ಣಯವನ್ನು ಪ್ರಸ್ತಾಪಿಸಿದ್ದು, ಇದನ್ನು ಶನಿವಾರ 15 ರಾಷ್ಟ್ರಗಳ ಭದ್ರತಾ ಮಂಡಳಿಯಲ್ಲಿ ಮತಕ್ಕೆ ಹಾಕಲಾಗುವುದು. ಪ್ರಸ್ತುತ ಏಪ್ರಿಲ್ ತಿಂಗಳಿನ ಮಂಡಳಿಯ ಅಧ್ಯಕ್ಷಸ್ಥಾನ ಬಹ್ರೇನ್‌ನಲ್ಲಿದೆ. ಕರಡು ನಿರ್ಣಯದ ಆರಂಭಿಕ ಆವೃತ್ತಿಯು ಹಾರ್ಮುಜ್ ಜಲಸಂಧಿ, ಕೊಲ್ಲಿ ಮತ್ತು ಒಮಾನ್ ಕೊಲ್ಲಿಯಲ್ಲಿ "ಅಗತ್ಯವಿರುವ ಎಲ್ಲಾ ವಿಧಾನಗಳನ್ನು ಬಳಸಲು" ದೇಶಗಳಿಗೆ ನಿರ್ಣಾಯಕ ಚಾಕ್‌ಪಾಯಿಂಟ್‌ನಲ್ಲಿ ಹಾದು ಹೋಗುವುದನ್ನು ಖಚಿತಪಡಿಸಿಕೊಳ್ಳಲು ಅವಕಾಶ ನೀಡುವ ಭಾಷೆಯನ್ನು ಹೊಂದಿತ್ತು ಎಂದು ತಿಳಿದುಬಂದಿದೆ.

ಬಿಸಿಲಿನ ತಾಪ ಹೆಚ್ಚಳ:

ಹೈಕೋರ್ಟ್ ಸಮಯ ಬದಲಾವಣೆ

ಬೆಂಗಳೂರು, ಏ.3– ಬಿಸಿಲಿನ ತಾಪ ಹೆಚ್ಚಿರುವ ಹಿನ್ನೆಲೆಯಲ್ಲಿ ಇದೇ 6ರಿಂದ ಮೇ ಅಂತ್ಯದವರಗೆ ಹೈಕೋರ್ಟ್ ಕಲಬುರಗಿ ಪೀಠಗಳ ಕಾರ್ಯ ಕಲಾಪದ ಸಮಯ ಬದಲಾವಣೆ ಮಾಡಲಾಗಿದೆ.



ಈ ಕುರಿತಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಆದೇಶಕ್ಕೆ ಅನುಗುಣವಾಗಿ ರಿಜಿಸ್ಟ್ರಾರ್ ಜನರಲ್ ಕೆ.ಎಸ್. ಭರತ್ ಕುಮಾರ್ ಅಧಿಸೂಚನೆ ಹೊರಡಿಸಿದ್ದಾರೆ.

ಕಲಬುರಗಿ ಹೈಕೋರ್ಟ್ ಪೀಠದ ಕಲಾಪವು ಇದೇ 6ರಿಂದ ಮೇ ಅಂತ್ಯದವರೆಗೆ ನಿತ್ಯ ಬೆಳಿಗ್ಗೆ 8 ರಿಂದ 11 ಗಂಟೆ, ನಂತರ ಬೆಳಿಗ್ಗೆ 11.30ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ.

ಬೆಳಿಗ್ಗೆ 11ರಿಂದ 11.30ರವರೆಗೆ ವಿರಾಮ ಇರಲಿದೆ. ಕಚೇರಿ ಸಮಯ ಶನಿವಾರವನ್ನು ಹೊರತುಪಡಿಸಿ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 2ಗಂಟೆಯವರೆಗೆ ಕಾರ್ಯ ನಿರ್ವಹಿಸಲಿದೆ. ಶನಿವಾರ ಬೆಳಿಗ್ಗೆ 7.30ರಿಂದ 11 ಗಂಟೆಯವರೆಗೆ ಕಚೇರಿ ಕಾರ್ಯ ನಿರ್ವಹಿಸಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕಲಬುರಗಿ ವಿಭಾಗ ವ್ಯಾಪ್ತಿಯ ಬಳ್ಳಾರಿ, ಬೀದರ್, ಕೊಪ್ಪಳ, ರಾಯಚೂರು, ಕಲಬುರಗಿ, ವಿಜಯನಗರ, ಯಾದಗಿರಿ ಮತ್ತು ಬೆಳಗಾವಿ ವ್ಯಾಪ್ತಿಗೆ ಒಳಪಡುವ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸಿವಿಲ್, ಕ್ರಿಮಿನಲ್, ಕೌಟುಂಬಿಕ ಮತ್ತು ಕಾರ್ಮಿಕ ನ್ಯಾಯಾಲಯಗಳ ಕಲಾಪದ ಸಮಯವನ್ನೂ ಇದೇ 4ರಿಂದ ಮೇ ಅಂತ್ಯದವರೆಗೆ ಬದಲಿಸಲಾಗಿದೆ.

ಈ ನ್ಯಾಯಾಲಯಗಳ ಕಲಾಪವು ಇದೇ 4ರಿಂದ ಬೆಳಿಗ್ಗೆ 8 ರಿಂದ 11 ಮತ್ತು 11.30ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ. ಮಧ್ಯಾಹ್ನ 11ರಿಂದ 1.30ರವರೆಗೆ ವಿರಾಮ ಇರಲಿದೆ. ಕಚೇರಿ ಸಮಯವು ಬೆಳಿಗ್ಗೆ 7.30ಕ್ಕೆ ಆರಂಭವಾಗಿ ಮಧ್ಯಾಹ್ನ 2ಕ್ಕೆ ಕೊನೆಯಾಗಲಿದೆ. ಇದೇ 24ರಂದು ನಾಲ್ಕನೇ ಶನಿವಾರ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನ್ಯಾಯಾಲಯಗಳು ಕಾರ್ಯ ನಿರ್ವಹಿಸಲಿವೆ ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

40 ಕೋಟಿ ವಂಚನೆ ಆರೋಪ:

ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಕಾರ

ಬೆಂಗಳೂರು, ಏ.3– ಬ್ಯಾಂಕುಗಳಿಂದ ಕೋಟ್ಯಂತರ ರೂಪಾಯಿ ಸಾಲ ಕೊಡಿಸುವುದಾಗಿ ನಂಬಿಸಿ ಕಮಿಷನ್ ಪಡೆದು 40 ಕೋಟಿ ವಂಚನೆ ಮಾಡಿದ್ದಾರೆ ಎಂಬ ಪ್ರಕರಣದ ಮೂವರು ಆರೋಪಿಗಳ ವಿರುದ್ಧದ 11 ಎಫ್‌ಐಆರ್ ಗಳನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣದ ಅಪರಾಧದ ಆರೋಪಗಳು ತನಿಖಾ ಹಂತದಲ್ಲಿವೆ. ಆರೋಪಗಳ ಬಗ್ಗೆ ತನಿಖೆ ನಡೆಯಬೇಕು ಎಂಬುದು ಕಾನೂನಿನ ಸ್ಪಷ್ಟ ನಿಯಮ. ಹಾಗಾಗಿ, ಈ ಹಂತದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಮಾಡುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಆರೋಪಿಗಳು ಹಲವು ಜನರೊಂದಿಗೆ ಆರ್ಥಿಕ ವಹಿವಾಟು ನಡೆಸಿ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆದ್ದರಿಂದ, ಇಂತಹ ಪ್ರಕರಣಗಳಲ್ಲಿ ತನಿಖೆಗೆ ಅಡ್ಡಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನ್ಯಾಯಪೀಠ ವಿವರಿಸಿದೆ.

ಆರೋಪಿಗಳಾದ ಮಂಗಳೂರಿನ ದಂಪತಿ ರೋಷನ್ ಸಲ್ಡಾನಾ, ಅವರ ಪತ್ನಿ ಡಾಫ್ನಿ ನೀತು ಡಿಸೋಜಾ ಮತ್ತು ಚಿತ್ರದುರ್ಗದ ಎನ್.ಚಂದ್ರಶೇಖರ್ ತಮ್ಮ ವಿರುದ್ಧದ 11 ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪ ನಮ್ಮ ಮೇಡಂ ಎಷ್ಟು ಚೆನ್ನಾಗಿದ್ದಾರೆ ಗೊತ್ತೆ?
ತಂದೆ : ಮಗ ಮೇಡಂ ಯಾವಾಗಲೂ ತಾಯಿ ಸಮಾನ ಕಣಪ್ಪ.
ಮಗ : ಅಪ್ಪ ನೀವು ಯಾವಾಗಲೂ ನಿಮ್ಮ ಸಂತೋಷವನ್ನೇ ನೋಡ್ತೀರಿ!

ಮೈಸೂರು ಮಿತ್ರ

ಶನಿವಾರ, ಏಪ್ರಿಲ್ 4, 2026

ಸತ್ಯೇನೋತ್ಪಥಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮೋಸಗಾರ ಎಷ್ಟೇ ದೊಡ್ಡ ಚದುರಂಗ ಆಟಗಾರನಾಗಿದ್ದರೂ 'ವಂಚನೆಯ' ಅಂತಿಮ ಫಲಿತಾಂಶ ಸೋಲು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೋಳಿಗೆ ಸುರಿದರೂ ಅಳೆದು ಸುರಿಯಬೇಕು.

ನಿಮ್ಮ ಪತ್ರಗಳು

ದುಬಾರಿಯಾದ ಮೈಸೂರು ವಿ.ವಿ ಮಕ್ಕಳ ಈಜು ತರಬೇತಿ ಶಿಬಿರದ ಶುಲ್ಕ

ಮಾನ್ಯರೆ,

ಬೇಸಿಗೆ ಬಂತೆಂದರೆ ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ. ಅಜ್ಜ, ತಾತನ ಮನೆಗೆ ಹೋಗುವುದು, ಕ್ರೀಡೆ, ಆಟಗಳಲ್ಲಿ ತೊಡಗುವುದು, ಸುಂದರ ತಾಣಗಳಿಗೆ ಪ್ರವಾಸಕ್ಕೆ ತೆರಳಿ ಕುಟುಂಬದೊಂದಿಗೆ ಖುಷಿಯಾಗಿ ಕಾಲ ಕಳೆಯುವ ಯೋಚನೆಯಲ್ಲಿರುತ್ತಾರೆ. ಹಿಂದೆ ಮನೆಯ ಮುಂದೆ, ಆಟದ ಮೈದಾನದಲ್ಲಿ ಮನಸ್ಸಿಗೆ ಮುದ ಕೊಡುವ ಕಬಡ್ಡಿ, ಖೋ ಖೋ, ಲಗೋರಿ, ಮರಕೋತಿ, ಚಿನ್ನಿದಾಂಡು, ಅಳ್ಳಗುಳಿ ಮನೆ, ಕಟ್ಟೆಮನೆ, ಹುಲಿಕುರಿ ಸೇರಿದಂತೆ ದೇಹಕ್ಕೆ, ಮನಸ್ಸಿಗೆ ಖುಷಿ ನೀಡುವ ಹಲವಾರು ಆಟಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆ ಮೂಲಕ ಮಕ್ಕಳು ಮುಂದಿನ ಶೈಕ್ಷಣಿಕ ವರ್ಷಕ್ಕೆ ಉತ್ಸಾಹದಿಂದ ಸಜ್ಜಾಗುತ್ತಿದ್ದರು.

ಆದರೆ ಇತ್ತೀಚೆಗೆ ಪೋಷಕರು ಪ್ರತಿಷ್ಠೆಗಾಗಿ ಮಕ್ಕಳನ್ನು ಬೇಸಿಗೆ ಶಿಬಿರಗಳಲ್ಲಿ ಅದರಲ್ಲೂ ದುಬಾರಿ ಶುಲ್ಕ ಕೊಟ್ಟು ಸೇರಿಸುವ ಪೈಪೋಟಿಯಲ್ಲಿ ತೊಡಗಿದ್ದಾರೆ. ಮಕ್ಕಳ ಖುಷಿಯನ್ನು ಕೇಳುವ ವ್ಯಯದಾನವಿಲ್ಲ. ಪರೀಕ್ಷೆ ಮುಗಿಸಿ ಬಂದ ಕೂಡಲೇ ಮೊದಲೇ ಹಣ ನೀಡಿ ಸೀಟುಗಳನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಖಾಸಗಿ ಶಾಲೆಗಳು ಕೂಡ ಈಗ ಇಂತಹ ಶಿಬಿರಗಳನ್ನು ಆಯೋಜಿಸುತ್ತಿವೆ. ಪ್ರತಿ ಮೊಹಲ್ಲಾಗಳಲ್ಲೂ ಮಕ್ಕಳ ಬೇಸಿಗೆ ಶಿಬಿರಗಳು ಫಿನಿಕ್ಸ್‌ನಂತೆ ಹುಟ್ಟಿಕೊಳ್ಳುತ್ತಿವೆ. ಕಲಾ ಮಂದಿರದಲ್ಲೂ ಕೂಡ ಪೋಷಕರು ಸಾಲುಗಟ್ಟಿ ನಿಂತು ಶಾಲೆಗಳಲ್ಲಿ ಸೀಟು ಪಡೆಯುವಂತೆ ದುಸ್ಸಾಹಸದಿಂದ ಅರ್ಜಿ ಪಡೆದು ಸೇರಿಸುತ್ತಾರೆ. ಅದೂ ಕೆಲವರಿಗಷ್ಟೇ ಸೀಟು ಲಭ್ಯವಾಗುತ್ತದೆ. ಸಾಮಾನ್ಯವಾಗಿ ಶಾಲೆಗಳಲ್ಲೇ ಆರಂಭದಿಂದಲೂ ಪಾಠಗಳೊಂದಿಗೆ ಈಗ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಿರುತ್ತಾರೆ. ಅದನ್ನು ಅರಿಯದೆ ಮಕ್ಕಳನ್ನು ರಜಾ ದಿನಗಳಲ್ಲೂ ಖುಷಿಯಾಗಿ, ಮಜವಾಗಿ ಕಾಲ ಕಳೆಯಲು ಬಿಡದೆ ಅವರ ಮೇಲೆ ಪ್ರತಿಷ್ಠೆಯ ಭಾರ ಹೊರಿಸುತ್ತೇವೆ.

ಪ್ರಮುಖವಾಗಿ ಇಲ್ಲಿ ಪ್ರಸ್ತಾಪಿತ ವಿಚಾರವೆಂದರೆ, ಈಗ ಮೈಸೂರು ವಿ.ವಿ ಮಕ್ಕಳ ರಜಾ ದಿನಕ್ಕಾಗಿ ನಡೆಸುವ ಈಜು ತರಬೇತಿ ಶಿಬಿರಗಳಿಗೆ ದುಬಾರಿ ಶುಲ್ಕ ವಿಧಿಸುತ್ತಿದೆ. ಇದರ ಅಡಿಯಲ್ಲಿ ನಡೆಯುವ 15 ದಿನಗಳ ಒಂದು ಬ್ಯಾಚ್‌ನ ಈಜು ಶಿಬಿರಕ್ಕೆ ಅಡ್ವಾನ್ಸ್ ಬ್ಯಾಚ್‌ಗೆ ರೂ 4750/– ಜೊತೆಗೆ GST ಶುಲ್ಕ ರೂ 855/– ಸೇರಿ 5605/– ರೂಪಾಯಿ. ನಾರ್ಮಲ್ ಬ್ಯಾಚ್‌ಗೆ 3750/– ಜೊತೆಗೆ GST ಶುಲ್ಕ 675 ರೂ ಸೇರಿ 4425/– ರೂಗಳಾಗಿದೆ. ಇದು ಸಾಮಾನ್ಯ ಜನರಿಗೆ ಅತ್ಯಂತ ದುಬಾರಿ ಎನಿಸುತ್ತದೆ. ವಿಶ್ವವಿದ್ಯಾನಿಲಯ ಮಕ್ಕಳ ರಜಾ ಶಿಬಿರಗಳಿಗೂ ಯಾವುದೇ ಕನಿಷ್ಠ ವಿನಾಯತಿ ನೀಡದೆ ವ್ಯವಹಾರಿಕ ದೃಷ್ಟಿಯಿಂದಷ್ಟೇ ನೋಡುತ್ತಾ ದುಬಾರಿ ಶುಲ್ಕ ವಿಧಿಸುತ್ತಿರುವುದು ದುರದೃಷ್ಟಕರ. ಇನ್ನು ಮುಂದಾದರೂ ಇಂತಹ ಮಕ್ಕಳ ಶಿಬಿರಗಳಿಗೆ ಕನಿಷ್ಠ ಸೇವಾ ಶುಲ್ಕ ವಿಧಿಸಿ GSTಯನ್ನು ರದ್ದುಪಡಿಸಿ ಎಲ್ಲಾ ವರ್ಗದವರಿಗೂ ಈ ಶಿಬಿರ ಉಪಯೋಗಿಸಿಕೊಳ್ಳುವಂತಾಗಲಿ. ಈ ಬಗ್ಗೆ ಸಂಬಂಧಪಟ್ಟವರು ಕ್ರಮ ಕೈ ಗೊಳ್ಳಲೆಂದೇ ನನ್ನ ಆಗ್ರಹ.

–ಎನ್ ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

ವಿದೇಶಿ ದೇಣಿಗೆ ಕಾಯ್ದೆ ಸಮಾಜ ಸೇವೆಗೆ ಮಾರಕ

ಮಾನ್ಯರೆ,

ಇತ್ತೀಚಿನ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್.ಸಿ.ಆರ್.ಎ) ತಿದ್ದುಪಡಿಗಳು ಕೇವಲ ನಿಯಮಗಳಲ್ಲ, ಅವು ದಶಕಗಳಿಂದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳ ಬೆನ್ನೆಲುಬು ಮುರಿಯುವ ಸಂಚು. ಆಡಳಿತಾತ್ಮಕ ವೆಚ್ಚವನ್ನು ಶೇ. 20ಕ್ಕೆ ಇಳಿಸಿರುವುದು ಮತ್ತು ದೆಹಲಿಯಲ್ಲೇ ಖಾತೆ ತೆರೆಯಬೇಕೆಂಬ ಕಟ್ಟುನಿಟ್ಟು, ಗ್ರಾಮೀಣ ಭಾಗದ ಕುಷ್ಠರೋಗಿ ಕೇಂದ್ರಗಳು ಹಾಗೂ ಅನಾಥಾಶ್ರಮಗಳ ಆರ್ಥಿಕ ಮೂಲವನ್ನೇ ಕತ್ತರಿಸಿವೆ. ವಿದೇಶಿ ದೇಣಿಗೆ ದುರುಪಯೋಗವಾಗುತ್ತಿದೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ. ಅಂಕಿ–ಅಂಶಗಳ ಪ್ರಕಾರ ಲಕ್ಷಾಂತರ ಬಡವರು ಈ ಸಂಸ್ಥೆಗಳ ಮೂಲಕ ಉಚಿತ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಿಗಿ ನಿಯಮಗಳು ಮಾನವೀಯ ನೆಲೆಯ ಸೇವಾ ಚಟುವಟಿಕೆಗಳನ್ನು ಹತ್ತಿಕ್ಕುತ್ತಿವೆ. ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ನಡೆಯುತ್ತಿರುವ ಈ ಕಿರುಕುಳವು ಅಂತಿಮವಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಬೇಕಾದ ಸೌಲಭ್ಯಗಳನ್ನು ಕಿತ್ತುಕೊಳ್ಳುತ್ತಿದೆ. ಸರ್ಕಾರ ಈ ಕಠಿಣ ನಿಲುವುಗಳನ್ನು ಮರುಪರಿಶೀಲಿಸುವುದು ಅತ್ಯಗತ್ಯ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಹಿರಿಯ ನಾಗರಿಕರಿಗೆ ಹಿಂದಿನಂತೆ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ನೀಡಲಿ



ಮಾನ್ಯರೆ,

ಕಳೆದ ಆರ್ಥಿಕ ವರ್ಷದಲ್ಲಿ (2025–26), ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ರೂ.449.13 ಕೋಟಿ ರೂಪಾಯಿಗೂ ಹೆಚ್ಚು ಆದಾಯ ಗಳಿಸಿರುವುದಾಗಿ ಮೈಸೂರು ರೈಲ್ವೆ ಇಲಾಖೆಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇದು ಮೈಸೂರು ವಿಭಾಗದಲ್ಲಿ ಇತಿಹಾಸದಲ್ಲೇ ಅತೀ ಹೆಚ್ಚು ಆದಾಯ ಗಳಿಸಿರುವುದಾಗಿ ಹೇಳಿದ್ದಾರೆ. ಇದು ಇಲಾಖೆಗೆ ಸಂತೋಷಕರ ವಿಚಾರವಾಗಿರಬಹುದು. ಇದೇ ರೀತಿ ಹಲವು ರೈಲ್ವೆ ವಿಭಾಗಗಳು ಲಾಭ ಗಳಿಸಿರ ಬಹುದು. ಆದರೆ ರೈಲ್ವೇ ಇಲಾಖೆಯು ಕಳೆದ ಹದಿನೈದು ವರ್ಷಗಳಿಂದ ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣದಲ್ಲಿ ನೀಡುತ್ತಿದ್ದ ಶೇ.30 ರಷ್ಟು ರಿಯಾಯಿತಿಯನ್ನು ಕಳೆದ ಐದು ವರ್ಷಗಳಿಂದ ಅಂದರೆ ದೇಶದಲ್ಲಿ ಕೊರೊನಾ ಸಾಂಕ್ರಾಮಿಕ ರೋಗ ದೇಶದಲ್ಲಿ ಕಾಣಿಸಿಕೊಂಡ ಹಿನ್ನಲೆಯಲ್ಲಿ ಹಿರಿಯ ನಾಗರಿಕರ ಈ ರಿಯಾಯಿತಿ ದರವನ್ನು ರದ್ದುಪಡಿಸಿತು. ಈಗ ದೇಶದಲ್ಲಿ ಕೊರೊನಾ ಮಾಯವಾಗಿ ಐದು ವರ್ಷಗಳೇ ಕಳೆದಿವೆ. ರೈಲ್ವೇ ಇಲಾಖೆಯ ಎಲ್ಲಾ ವಿಭಾಗಗಳು ನೂರಾರು ಕೋಟಿ ಲಾಭದಲ್ಲಿವೆ. ಆದರೂ ಹಿರಿಯ ನಾಗರಿಕರಿಗೆ ರೈಲ್ವೇ ಇಲಾಖೆಯು ಹಿಂದೆ ಇದ್ದ ರಿಯಾಯಿತಿ ದರವನ್ನು ನೀಡುತ್ತಿಲ್ಲ. ಮಾನ್ಯ ರೈಲ್ವೇ ಸಚಿವರು ಈ ಬಗ್ಗೆ ತುರ್ತು ಗಮನಹರಿಸಿ ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ನೀಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಅಕ್ಷರ ಕೊಡುಗೆಗಾಗಿ ಅನಕ್ಷರಸ್ಥನಿಗೆ ಸಂದ ಮಹಾ ಗೌರವ!







ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654.

> “ ಹರೇಕಳ ಹಾಜಬ್ಬನವರು ಅನಕ್ಷರಸ್ತ, ಜೊತೆಗೆ ಬಡವನು ಹೌದು, ಪ್ರತಿ ಹೊತ್ತಿಗೆ ದುಡಿದು ತಿನ್ನುವ ಸಾಧಾರಣ ಮನುಷ್ಯ. ನಮ್ಮ ಕನ್ನಡಿಗ ಎನ್ನುವುದು ನಮ್ಮ ಹೆಮ್ಮೆ. ಕಿತ್ತಳೆ ಹಣ್ಣು ಮಾರಾಟದಿಂದ ನಿತ್ಯ ಸಂಪಾದಿಸುತ್ತಿದ್ದ ಹಣ ಕೇವಲ ರೂ. 150 ಮಾತ್ರ, ಕಡಿಮೆ ಮೊತ್ತದ ಸಂಪಾದನೆಯಲ್ಲೇ ಉಳಿಸಿದ ಹಣದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ನಿರ್ಮಿಸಿದರು.

ಸಮಾಜದಲ್ಲಿ ಒಂದೊಳ್ಳೆ ಕೆಲಸ ಮಾಡಬೇಕೆಂದರೆ ವಿದ್ಯೆ ಕಲಿಯಲೇ ಬೇಕೆಂಬುದು ಕಡ್ಡಾಯವಲ್ಲ. ಓದು–ಬರಹ ಗೊತ್ತಿಲ್ಲದವರೂ ಸಹ ವಿದ್ಯಾವಂತರು ನಾಚುವಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ತೋರಿದ್ದಾರೆ. ನಿಜ ಹೇಳಬೇಕೆಂದರೆ ವಿದ್ಯಾವಂತರಲ್ಲದವರು ಜೀವನದಲ್ಲಿ ನೆರೆಹೊರೆಗೆ ಅಂಜಿ ಬದುಕುತ್ತಾರೆ. ಇವರು ಮೋಸ ಹೋಗುತ್ತಾರೆಯೇ ಹೊರತು ಯಾರಿಗೂ ಮೋಸ ಮಾಡುವುದಿಲ್ಲ. ಸಂಪಾದಿಸಿದ್ದು ತನಗೆ, ತನ್ನ ಕುಟುಂಬಕ್ಕೆ ಎನ್ನುವುದಿಲ್ಲ. ಅವಿದ್ಯಾವಂತರು, ಗಳಿಸಿದ್ದರಲ್ಲಿ ಸ್ವಲ್ಪ ಬೇರೆಯವರಿಗೂ ಖರ್ಚು ಮಾಡುತ್ತಾರೆ. ಇಲ್ಲಿಯೂ ಸ್ವಾರ್ಥಿಗಳು ಇಲ್ಲವೆಂದೇನಿಲ್ಲ. ಮೈಮುರಿದು ದುಡಿಯುವವನು ಒಬ್ಬನಾದರೆ, ಕುಡಿದ ನೀರು ಅಲುಗಾಡದ ಹಾಗೆ ಕುಳಿತು ಕೆಲಸ ಮಾಡುವವನು ಮತ್ತೊಬ್ಬ. ಎಲ್ಲರೂ ಎಂದು ಹೇಳಲಾಗದು, ಪ್ರಮಾಣದಲ್ಲಿ ಹೆಚ್ಚು ಸಂಖ್ಯೆಯವರು ಶಾಲೆಯ ಮೆಟ್ಟಿಲು ಹತ್ತದವರು ಇನ್ನೂ ನ್ಯಾಯನೀತಿ ಎಂಬುದನ್ನು ಇಟ್ಟುಕೊಂಡಿದ್ದಾರೆ. ವಿದ್ಯಾವಂತರ ನಡವಳಿಕೆಯು ಸರ್ಕಾರದಿಂದ ಆಗಬೇಕಿರುವ ಕೆಲಸಕ್ಕೆ ಸರ್ಕಾರಿ ಕಛೇರಿಗಳಿಗೆ ಹೋಗಿಬಂದವರಿಗೆ ಅನುಭವಕ್ಕೆ ಬಂದಿರುತ್ತದೆ. ನಂಬಿಕೆಯ ಮೇಲೆ ಅಂಗಡಿಯ ಸಾಮಾನುಗಳನ್ನು ಮಾರುತ್ತಿದ್ದ ನಮ್ಮೂರ ಶೆಟ್ಟರ ಅಂಗಡಿಯ ವ್ಯಾಪಾರದಲ್ಲಿದ್ದ ನೀತಿ, ಇಂದಿನ ಮಾರ್ಟ್ ಮತ್ತು ಮಾಲ್‌ಗಳಲ್ಲಿ ಇರುವುದಿಲ್ಲ, ಶೆಟ್ಟರು ಹೆಚ್ಚು ಓದಿದವರಲ್ಲ ಕೂಡುವ ಲೆಕ್ಕವನ್ನು ಮಾತ್ರ ಕಲಿತಿದ್ದರು, ಅವರೋ ಆಕರ್ಷಕವಾಗಿ ಪ್ರಚಾರ ಮಾಡಿಯೇ ಗ್ರಾಹಕರನ್ನು ಸೆಳೆಯುತ್ತಾರೆ, ಒಟ್ಟಿನಲ್ಲಿ ಸಮಾಜಕ್ಕಿಂತ ಸ್ವಾರ್ಥ ವಿದ್ಯಾವಂತರಲ್ಲಿ ಹೆಚ್ಚು.

ನ್ಯಾಯ–ಅನ್ಯಾಯವನ್ನು ಬದಿಗಿಟ್ಟು ಹೇಳುವುದಾದರೆ ಓದಿನಿಂದ ವಂಚಿತರಾದವರಿಗೆ ದೊಡ್ಡವರಾದ ಮೇಲೆ ನಾನು ಶಾಲೆಗೆ ಹೋಗದೆ ತಪ್ಪು ಮಾಡಿದೆ ಎಂಬ ಚಿಂತೆ ಕಾಡುತ್ತಿರುತ್ತದೆ, ನನ್ನಂತೆ ನನ್ನ ಮಕ್ಕಳು ವಿದ್ಯೆಯಿಂದ ವಂಚಿತ ರಾಗುವುದು ಬೇಡ ಎಂಬ ಮನಸ್ಥಿತಿಯಲ್ಲಿ ಇರುತ್ತಾರೆ. **ಗುಣ ಹಾಗೂ ವಿನಯಕ್ಕೆ ವಿದ್ಯೆಯ ಅವಶ್ಯಕತೆ ಇಲ್ಲ.**

ವಿದ್ಯೆ ಇಲ್ಲದೆಯೂ ತನ್ನವರಿಗೆ ಹಾಗೂ ಜನ್ಮ ನೀಡಿದ ಮಣ್ಣಿಗೆ ನಿಷ್ಠನಾಗಿ ಸಾಮರ್ಥ್ಯಕ್ಕೆ ಅನುಸಾರ ಕೊಡುಗೆ ನೀಡುತ್ತಾನೆ ಎಂಬುದನ್ನು ಇಲ್ಲೊಬ್ಬ ಅವಿದ್ಯಾವಂತ ಮನುಷ್ಯ ಮಾಡಿ ತೋರಿಸಿದ್ದಾನೆ.

ದಕ್ಷಿಣ ಕನ್ನಡ ಜಿಲ್ಲೆಯ ಹರೇಕಳ ಗ್ರಾಮದ 70 ವರ್ಷದ ಹಿರಿಯರಾದ ಕಿತ್ತಳೆ ಹಣ್ಣು ವ್ಯಾಪಾರಿ ಹಾಜಬ್ಬರವರು ಬಡವರಾದ್ದರಿಂದ ವಿದ್ಯೆ ಕಲಿಯಲಾಗಲಿಲ್ಲ. ತಾವು ಅವಿದ್ಯಾವಂತರಾದರೂ ಇವರು ಮಾಡಿದ ಮಹತ್ತರವಾದ ಸಾಧನೆಯಿಂದ ರಾಷ್ಟ್ರಪತಿ ಭವನದಲ್ಲಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಶ್ರೀಯನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರವರಿಂದ ಪಡೆದು ಬಂದಿದ್ದಾರೆ. ಅಕ್ಷರ ಸಂತ ಹರೇಕಳ ಹಾಜಬ್ಬನವರು ಬರಿ ಗಾಲಲ್ಲಿ ಪ್ರಶಸ್ತಿ ಪಡೆದದ್ದನ್ನು ನೋಡಿ ದೇಶವೇ ಆಶ್ಚರ್ಯಚಕಿತವಾಯಿತು.

ಈ ವ್ಯಕ್ತಿ ಅನಕ್ಷರಸ್ತ ಜೊತೆಗೆ ಬಡವನು ಹೌದು. ಆಹೊತ್ತಿಗೆ ದುಡಿದು ತಿನ್ನುವ ಸಾಧಾರಣ ಮನುಷ್ಯ. ನಮ್ಮ ಕನ್ನಡಿಗ ಎನ್ನುವುದು ನಮ್ಮ ಹೆಮ್ಮೆ. ಕಿತ್ತಳೆ ಹಣ್ಣು ಮಾರಾಟದಿಂದ ನಿತ್ಯ ಸಂಪಾದಿಸುತ್ತಿದ್ದ ಹಣ ಕೇವಲ ರೂ. 150 ಮಾತ್ರ ಕಡಿಮೆ ಮೊತ್ತದ ಸಂಪಾದನೆಯಲ್ಲೇ ಉಳಿಸಿದ ಹಣದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ನಿರ್ಮಿಸಿ, ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಇವರೂ ಒಬ್ಬರಾದರು.

ಹಾಜಬ್ಬರವರು ಶಾಲೆ ಕಟ್ಟಿಸಲು ಕಾರಣವಿದೆ, ಕೆಲವು ವರ್ಷಗಳ ಹಿಂದೆ ವಿದೇಶಿ ಪ್ರವಾಸಿಯೊಬ್ಬರು ಕಿತ್ತಳೆ ಹಣ್ಣಿನ ಬೆಲೆಯನ್ನು ಇಂಗ್ಲೀಷ್‌ನಲ್ಲಿ ಕೇಳಿದಾಗ, ಅವರು ಕೇಳಿದ್ದು ಅರ್ಥವಾಗದೆ ಮುಜುಗರ ಅನುಭವಿಸುತ್ತಾರೆ. ಇವರಿಗೆ ತಾವಿದ್ದ ಊರಿನಲ್ಲಿ ಯಾವುದೇ ಶಿಕ್ಷಣದ ಸವಲತ್ತುಗಳು ಇಲ್ಲದಿದ್ದ ಕಾರಣ ವಿದ್ಯೆಯಿಂದ ವಂಚಿತರಾಗುತ್ತಾರೆ. ಶಾಲೆಯೊಂದು ಇದ್ದಿದ್ದರೆ ನಾನೂ ಕೂಡ ಓದಬಹುದಿತ್ತು ಎಂಬ ಹಿನ್ನೆಲೆಯಲ್ಲಿ ಮುಜುಗರಕ್ಕೆ ಒಳಗಾದ ದಿನವೇ ಶಾಲೆ ಕಟ್ಟಿಸುವುದಾಗಿ ಪ್ರತಿಜ್ಞೆ ಮಾಡುತ್ತಾರೆ.

ಹರೇಕಳ ಹಾಜಬ್ಬರವರು ಬಹಳ ವರ್ಷಗಳಿಂದ ಶಾಲೆ ಇಲ್ಲದ ತಮ್ಮೂರಿನಲ್ಲಿ ಜೀವಮಾನದ ಉಳಿತಾಯ ಹಣದಲ್ಲಿ 2000ನೇ ಇಸವಿಯಂದು ತನ್ನ 54ನೇ ವಯಸ್ಸಿನಲ್ಲಿ ಒಂದು ಎಕರೆ ಜಮೀನಿ ನಲ್ಲಿ ಕಟ್ಟಡ ನಿರ್ಮಿಸಿ ಶಾಲೆ ಆರಂಭಿಸಿದರು.

ಸಮಾಜ ಸೇವಕ ಹಾಜಬ್ಬನವರು 17 ಅಕ್ಟೋಬರ್ 1956ರಲ್ಲಿ ಮಂಗಳೂರಿನ ಸಮೀಪದ ಹರೇಕಳ ಎಂಬ ಗ್ರಾಮದ ಬಡ ಮುಸ್ಲಿಂ ಕುಟುಂಬದಲ್ಲಿ ಜನಿಸಿದರು. ನಂತರ ಹಾಜಬ್ಬನವರು ಮಂಗಳೂರು ನಗರದಲ್ಲಿ ಕಿತ್ತಳೆ ಹಣ್ಣು ಮಾರಾಟ ಮಾಡಿ ಬದುಕು ನಡೆಸುತ್ತಿದ್ದರು. ಇಂಗ್ಲೀಷ್ ಬಾರದೇ ಇರುವ ಕಾರಣ ಅನುಭವಿಸಿದ ನೋವು ನಮ್ಮ ಊರಿನ ಮಕ್ಕಳಿಗೂ ಬಾರದೆಂಬ ಉತ್ಕಟ ಬಯಕೆಯಿಂದ ಶಾಲೆಯೇ ಇಲ್ಲದ ತನ್ನೂರಿನಲ್ಲಿ ಸಣ್ಣ ಉಳಿತಾಯದ ಮೊತ್ತದಿಂದ ಪ್ರಾಥಮಿಕ ಶಾಲೆಯನ್ನು ಕಟ್ಟಿಸಿದರು.

ಪರದೇಶದವನು ಹಣ್ಣುಗಳ ಬೆಲೆಯನ್ನು ಇಂಗ್ಲೀಷ್‌ನಲ್ಲಿ ಕೇಳಿದಾಗ ಅವರು ಏನು ಹೇಳುತ್ತಿದ್ದಾರೆ ಎನ್ನುವುದು ಶಿಕ್ಷಣದ ಕೊರತೆಯಿಂದಾಗಿ ತಿಳಿಯದೆ ಮೊದಲ ಬಾರಿಗೆ ಅಂಗವಿಕಲನಾಗಿದ್ದೇನೆ ಎಂದು ನೊಂದುಕೊಳ್ಳುತ್ತಾರೆ. ನನ್ನ ಹಳ್ಳಿಯ ಚಿಕ್ಕ ಮಕ್ಕಳು ಇಂತಹ ಪರಿಸ್ಥಿತಿಯನ್ನು ಎದುರಿಸಬಾರದು ಎಂಬ ಉದ್ದೇಶದಿಂದ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವ ಅಲೋಚನೆ ಹೊಳೆಯುತ್ತದೆ. ಅದರ ಫಲವೇ ನಿರ್ಮಾಣಕ್ಕೆ ಕಾರಣವಾಯಿತು. ಪ್ರಾರಂಭಿಸಿದ ಸಣ್ಣ ಶಾಲೆಯು ಇಂದು ಸಾರ್ವಜನಿಕರ ದೇಣಿಗೆ ಮತ್ತು ಸರ್ಕಾರದ ಸಹಕಾರದಿಂದ ಬೆಳೆದು 'ಹಾಜಬ್ಬ ಶಾಲೆ' ಎಂದು ಪ್ರಸಿದ್ಧವಾಗಿ ಹಾಜಬ್ಬನವರ ಹೆಸರು ರಾಷ್ಟ್ರಪತಿ ಭವನದ ವರೆಗೂ ಮುಟ್ಟಿತು.

ಇವರು ಮಾಡಿದ ಸಾಧನೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು ಕೂಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದೆ, ಇವರ ಮುಡಿಗೆ ಹಲವಾರು ಪ್ರಶಸ್ತಿಗಳು ಸಂದಿವೆ, ಬಿಬಿಸಿ ಮೂಲಕ ಹಾಜಬ್ಬನವರು ಹೊರದೇಶಗಳಿಗೂ ಪರಿಚಯವಾದರು.


ಇಲ್ಲಿಯವರೆಗೆ ಅವಿದ್ಯಾವಂತ ಸಣ್ಣ ವ್ಯಾಪಾರಿಯೊಬ್ಬನ ಸಾಧನೆಯನ್ನು ನೋಡಿದೆವು, ಇವರಿಂದ ಪ್ರೇರಪಣೆಗೊಂಡ ಕೆಲವರು ತನ್ನೂರಿಗೆ, ತಾನು ಓದಿದ ಶಾಲೆಗೆ ಏನಾದರೂ ಸೇವೆ ಮಾಡಬೇಕೆನ್ನುವ ಆಸೆಯು ಚಿಗುರದೆ ಇರದು. ಇದೇ ದಿಕ್ಕಿನಲ್ಲಿ ನಮ್ಮೂರಿನ ಹಿರಿಯ ವಿದ್ಯಾರ್ಥಿಗಳ ಒಕ್ಕೂಟವು ಕೆಲಸ ಮಾಡುತ್ತಿದೆ. ಹಾಜಬ್ಬರವರೊಂದಿಗೆ ಹೋಲಿಕೆ ಮಾಡಲಾಗದು, ಅವರು ಏಕಾಂಗಿಯಾಗಿ ದುಡಿದ ತನ್ನದೇ ಹಣದಿಂದ ಶಾಲೆಯನ್ನು ಕಟ್ಟಿದರು. ನಮ್ಮದು ಸಾಮೂಹಿಕ ವಂತಿಕೆ ಹಣ ಮತ್ತು ಬೆಂಬಲ. ನಾಲ್ಕೈದು ದಶಕಗಳ ಹಿಂದೆ ಓದಿದ ಶಾಲೆಯನ್ನು ಅಭಿವೃದ್ಧಿ ಪಡಿಸಬೇಕೆನ್ನುವುದು ಹಳೆಯ ವಿದ್ಯಾರ್ಥಿಗಳ ಹಂಬಲ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಕಟ್ಟಡಗಳೆರಡೂ ಅನುಪಯುಕ್ತ ವಾಗಿ ಇಂದೋ... ನಾಳೆಯೋ ಬೀಳುವಂತಿವೆ, ಶಾಲೆಗಳು ಬೇರೆ ಕಟ್ಟಡಗಳಲ್ಲಿ ನಡೆಯುತ್ತಿವೆ.

ಕಟ್ಟಡಗಳನ್ನು ನೋಡಿದಾಗಲೆಲ್ಲಾ ಕರುಳು ಕಿತ್ತು ಬರುತ್ತದೆ, ಮುರಿದ ಗೋಡೆಗಳು ತತಾನ್ ತುತಾಗಿರುವ ಛಾವಣಿ, ಮಕ್ಕಳ ನಗುವಿಲ್ಲದೆ ಸ್ಮಶಾನ ಮೌನ, ಇಣುಕಿದರೆ ಭಣಗುಡುತ್ತಿರುವ ಖಾಲಿ, ತರಗತಿಗಳು ಕೂಗಿ ಕೇಳುತ್ತವೆ; ನನ್ನನ್ನು ಉಳಿಸಿ ಭವಿಷ್ಯದ ಬೆಳಕಿಗೆ ದಾರಿ ತೋರಲು, ಮಕ್ಕಳ ಕನಸುಗಳನ್ನು ಉಳಿಸಲು. ಇಂತಹ ನೋವಿನ ಸಂದಿಗ್ದತೆಯನ್ನು ನನ್ನಂತೆಯೇ ವಯೋಮಾನದ ಹಿರಿಯ ವಿದ್ಯಾರ್ಥಿಗಳು ತಮ್ಮ ಶಾಲೆಯನ್ನು ನೋಡುವಾಗ ಅನುಭವಿಸಿರುತ್ತಾರೆ. ಸರ್ಕಾರದ ವ್ಯವಸ್ಥೆಯಲ್ಲಿ ಅನುದಾನಕ್ಕೆ ಅನುಗುಣವಾಗಿ ಹಳೆಯ ಶಾಲೆಯ ಪಕ್ಕದಲ್ಲಿ ಹೊಸ ಕೊಠಡಿಗಳನ್ನು ಮನಸ್ಸೋ ಇಚ್ಛೆ ಕಟ್ಟಿಕೊಂಡು ಹೋಗುತ್ತಾರೆ, ಆದರೆ ಹಳೆಯ ಕಟ್ಟಡಗಳು ನಿರ್ವಹಣೆ ಮಾಡುವುದಕ್ಕೆ ಮನಸ್ಸು ಮಾಡುವುದಿಲ್ಲ, ದಿನ ಕಳೆದಂತೆ ಶಿಥಿಲವಾಗುತ್ತಿರುತ್ತವೆ.

ಶಾಲೆ ಅಭಿವೃದ್ಧಿಗಾಗಿಯೇ ಒಕ್ಕೂಟ ಮಾಡಿಕೊಂಡ ಸಮಾನ ಮನಸ್ಕ ಹಿರಿಯ ವಿದ್ಯಾರ್ಥಿಗಳ ಗುಂಪಿನಲ್ಲಿ ಲಕ್ಷದಿಂದ ಕೋಟಿ ದುಡಿದವರು ಹಾಗೂ ಇನ್ನೂ ಸಂಪಾದನೆಯಲ್ಲಿ ಇರುವವರಿದ್ದಾರೆ. ಸಂಖ್ಯೆಗೆ ಲೆಕ್ಕವಿಲ್ಲ ಎಲ್ಲರಿಗೂ ಉತ್ಕಟ ಬಯಕೆ ನನ್ನೂರು ನನ್ನ ಶಾಲೆ ಎಂಬ ಅಭಿಮಾನ ಆದರೂ ಪ್ರಗತಿ ಆಮೆ ನಡಿಗೆಯಲ್ಲಿದೆ. ಹಾಜಬ್ಬ ಏಕಾಂಗಿಯಾಗಿ ಅದೂ ಅನಕ್ಷರಸ್ಥನಾಗಿ ಸಾಧಿಸಿದ್ದಾದರೂ ಹೇಗೆ ಎಂಬ ಪ್ರಶ್ನೆ ಹುಟ್ಟಿ ಕೊಳ್ಳುತ್ತದೆ. ನಮ್ಮ ಒಕ್ಕೂಟದಲ್ಲಿ ದೊಡ್ಡ ಹುದ್ದೆಯಲ್ಲಿ ಇದ್ದವರು, ಡಾಕ್ಟರೇಟ್ ಪಡೆದವರು, ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಶಿಕ್ಷಣ ತಜ್ಞರು ಹೀಗೆ ಎಲ್ಲಾ ರೀತಿಯ ಹಾಗೂ ಅನುಭವ ಇರುವ ಹಿರಿಯರು ಇದ್ದಾಗ್ಯೂ ಸಭೆ ಸಮಾರಂಭಗಳಲ್ಲೇ ಸಮಯ ಕಳೆದು ಹೋಗುತ್ತಿದೆ. ಎಲ್ಲರಲ್ಲೂ ಒಂದೇ ಗುರಿ ನಮ್ಮ ಹಳೆಯ ಶಾಲೆಯನ್ನು ಉಳಿಸಿ ಕೊಳ್ಳಬೇಕು ಮತ್ತು ಕೊಠಡಿಗಳಲ್ಲಿ ಮಕ್ಕಳು ತುಂಬಿರಬೇಕು ಎನ್ನುವುದು, ಸದ್ಯದಲ್ಲೇ ಸಾಧಿಸಿ ತೋರುತ್ತೇವೆ ಎನ್ನುವುದು ನನ್ನೂರ ಹಿರಿಯ ವಿದ್ಯಾರ್ಥಿಗಳ ಹಠ.

ಹರೇಕಳ ಹಾಜಬ್ಬನವರ ಸಾಧನೆಯ ಕಥೆ ಕೇಳಿದಾಗ ನನಗನಿಸಿದ್ದು, ಸಾಧನೆಗೆ ಸಂಖ್ಯೆ ಮುಖ್ಯವಲ್ಲ ಛಲ ಮತ್ತು ತ್ಯಾಗ ಮನೋಭಾವ ಎನ್ನುವುದು.

ಬದುಕಿಗೆ ಬೇಕಿದೆ ಬಹುಭಾಷೆ !!



> “ ನಳಂದಾ ವಿಶ್ವವಿದ್ಯಾಲಯದಲ್ಲಿ ಬಹಳ ದೊಡ್ಡದಾದ ಗ್ರಂಥ ಭಂಡಾರವೇ ಇತ್ತು. ಅದರಲ್ಲಿ ಬಹುತೇಕ ಕೈಬರಹದಿಂದ ಬರೆದ ಗ್ರಂಥಗಳೇ ಇದ್ದುವು. ಅದು ಅತ್ಯಂತ ಮಹತ್ವದ ಗ್ರಂಥಾಲಯವಾಗಿತ್ತು. ಇದು ವಿದೇಶೀ ವಿಧ್ವಂಸಕರಿಗೆ ಸಹಿಸಲಾಗಲಿಲ್ಲ, ಹಾಗಾಗಿ ವಿದೇಶಿ ದಾಳಿಕೋರ ಭಕ್ತಿಯಾರ್ ಖಿಲ್ಜಿ ಈ ವಿಶ್ವವಿದ್ಯಾಲಯದ ಮೇಲೆ ದಾಳಿ ಮಾಡಿ ನರಸಂಹಾರ ಮಾಡಿದ. ಅಷ್ಟಕ್ಕೆ ಸುಮ್ಮನಾಗದೆ ಅಲ್ಲಿನ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ. ಹೀಗೆ ಹಚ್ಚಿದ ಬೆಂಕಿ ಸುಮಾರು ನಾಲ್ಕು ತಿಂಗಳ ಕಾಲ ಉರಿಯುತ್ತಿತ್ತು ಎಂದು ಹೇಳಲಾಗುತ್ತದೆ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ನಮ್ಮ ದೇಶದ ಶಿಕ್ಷಣ ಪದ್ಧತಿ ಬಹಳ ಹೆಸರುವಾಸಿ. ಅದರಲ್ಲೂ ಪ್ರಾಚೀನ ಶಿಕ್ಷಣ ಪದ್ಧತಿ ಆ ಕಾಲದ ಆಧುನಿಕ ಶಿಕ್ಷಣ ಪದ್ಧತಿ ಎನಿಸಿಕೊಂಡಿತ್ತು. ನಮ್ಮ ನಳಂದಾ ವಿದ್ಯಾಲಯವು 5ನೆಯ ಶತಮಾನ ದಲ್ಲಿಯೇ ಅತ್ಯಂತ ಪ್ರಸಿದ್ಧ ವಿಶ್ವವಿದ್ಯಾನಿಲಯ ವಾಗಿತ್ತು. ಅದು ಬೌದ್ಧ ತತ್ವಜ್ಞಾನದ ಕೇಂದ್ರವೂ ಆಗಿತ್ತು. ಆ ಕಾಲದಲ್ಲಿಯೇ ಈ ವಿದ್ಯಾಲಯದಲ್ಲಿ ಒಮ್ಮೆಗೆ ಹತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಪ್ರಪಂಚದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಆಗಮಿಸುತ್ತಿದ್ದರು. ಇಲ್ಲಿ ಸುಮಾರು ಐದು ಸಾವಿರ ಶಿಕ್ಷಕರು ಇರುತ್ತಿದ್ದರು. ಇದೊಂದು ವಸತಿ ಶಾಲೆಯಾಗಿತ್ತು. ಅಂದರೆ ಗುರು–ಶಿಷ್ಯರು ಒಟ್ಟಾಗಿರುತ್ತಿದ್ದರು. ಅಲ್ಲಿ ಪ್ರಾಚೀನ 64 ರೀತಿಯ ಶಿಕ್ಷಣ ನೀಡಲಾಗುತ್ತಿತ್ತು.

ಅದೇ ರೀತಿ ತಕ್ಷಶಿಲಾ (ಈಗಿನ ಪಾಕಿಸ್ತಾನಕ್ಕೆ ಸೇರಿದ ರಾವಲ್ಪಿಂಡಿಯ ಬಳಿ ಇತ್ತು) ಕ್ರಿಪೂ 8ನೆಯ ಶತಮಾನದಿಂದ ಕ್ರಿಶ 5ನೆಯ ಶತಮಾನದವರೆಗೆ ಕಾರ್ಯನಿರ್ವಹಿಸಿತು. ಅಲ್ಲಿಯೂ ಹತ್ತು ಸಾವಿರ ವಿದ್ಯಾರ್ಥಿಗಳಿದ್ದರು. ಇದಲ್ಲದೆ ಹಿಂದಿನ ವಿಕ್ರಮಶಿಲಾ (ಬಿಹಾರ), ವಲ್ಲಭಿ (ಗುಜರಾತ್), ಜಗದ್ದಲ (ಈಗಿನ ಬಾಂಗ್ಲಾದೇಶ) ಮುಂತಾದ ವಿಶ್ವವಿದ್ಯಾಲಯಗಳು ಈ ದೇಶದ ಶಿಕ್ಷಣ ಪದ್ಧತಿಗೆ ತಮ್ಮದೇ ಆದ ಕೊಡುಗೆ ನೀಡಿವೆ.

ಇಂತಹ ಮಹೋನ್ನತ ಶಿಕ್ಷಣ ಪದ್ಧತಿ ಈ ದೇಶದಲ್ಲಿ ಇತ್ತು. ಅದರಲ್ಲಿ ಬೋಧಿಸುತ್ತಿದ್ದ ವಿಷಯಗಳೂ ವಿಶೇಷವಾಗಿತ್ತು. ಅಲ್ಲಿ ಕಲಿತವರು ಮುಂದೆ ವಿದ್ವಾನ್‌ಮಣಿಗಳಾಗುತ್ತಿದ್ದರು. ನಮ್ಮಲ್ಲಿನ ಗುರುಕುಲ ಪದ್ಧತಿ ವ್ಯವಸ್ಥೆಯೂ ವಿಶಿಷ್ಟವಾಗಿತ್ತು. ಅವನು ರಾಜನ ಮಗನಾಗಿರಲಿ, ಕೆಲಸದವನ ಮಗನಾಗಿರಲಿ ಎಲ್ಲರೂ ಅಲ್ಲಿ ಸಮಾನರೆ. ಅವರ ನಡುವೆ ಯಾವುದೇ ಭೇದ–ಭಾವ ಇರುತ್ತಿರಲಿಲ್ಲ. ಎಲ್ಲರೂ ಗುರುವಿನ ಆದೇಶದ ಮೇರೆಗೆ ಸ್ವಯಂಪೂರ್ಣವಾಗಿ ಶಿಕ್ಷಣ ಪಡೆಯುತ್ತಿದ್ದರು. ಆದರೆ ಈ ದೇಶದ ಮೇಲೆ ನಡೆದ ಪರಕೀಯರ ನಿರಂತರ ಆಕ್ರಮಣಗಳ ಗುರಿ ಇಲ್ಲಿನ ಸಂಪತ್ತನ್ನು ದೋಚುವುದು ಹಾಗೂ ಇಲ್ಲಿನ ಸಂಸ್ಕೃತಿಯನ್ನು ನಾಶಪಡಿಸುವುದೇ ಆಗಿತ್ತು. ಇಲ್ಲಿನ ಸಂಸ್ಕೃತಿ ಎಂದಾಗ ಅದರಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯೂ ಒಂದಾಗಿತ್ತು ಎಂಬುದು ಅರ್ಥವಾಗುವಂತಹುದು.

ಈಗಾಗಲೇ ತಿಳಿಸಿದಂತೆ ನಳಂದಾ ವಿಶ್ವವಿದ್ಯಾಲಯದಲ್ಲಿ ಬಹಳ ಬೃಹತ್ ಗ್ರಂಥ ಭಂಡಾರವೇ ಇತ್ತು. ಅದರಲ್ಲಿ ಬಹುತೇಕ ಕೈಬರಹದಿಂದ ಬರೆದ ಗ್ರಂಥಗಳೇ ಇದ್ದವು. ಅದು ಅತ್ಯಂತ ಮಹತ್ವದ ಗ್ರಂಥಾಲಯವಾಗಿತ್ತು. ಇದು ವಿದೇಶಿ ವಿಧ್ವಂಸಕರಿಗೆ ಸಹಿಸಲಾಗಲಿಲ್ಲ, ಹಾಗಾಗಿ ವಿದೇಶಿ ದಾಳಿಕೋರ ಭಕ್ತಿಯಾರ್ ಖಿಲ್ಜಿ ಈ ವಿಶ್ವವಿದ್ಯಾಲಯದ ಮೇಲೆ ದಾಳಿ ಮಾಡಿ ನರಸಂಹಾರ ಮಾಡಿದ. ಅಷ್ಟಕ್ಕೆ ಸುಮ್ಮನಾಗದೆ ಅಲ್ಲಿನ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ. ಹೀಗೆ ಹಚ್ಚಿದ ಬೆಂಕಿ ಸುಮಾರು ನಾಲ್ಕು ತಿಂಗಳ ಕಾಲ ಉರಿಯುತ್ತಿತ್ತು ಎಂದು ಹೇಳಲಾಗುತ್ತದೆ. ಈ ದಾಳಿಯ ಹಿಂದೆ ಆಗ ಪ್ರಖರವಾಗಿದ್ದ ಬೌದ್ಧ ಧರ್ಮದ ಪ್ರಭಾವ ಕಡಿಮೆ ಮಾಡಬೇಕು ಎಂಬ ಉದ್ದೇಶವೂ ಇತ್ತು ಎಂದು ಹೇಳಲಾಗುತ್ತದೆ. ಇದರ ಪರಿಣಾಮ ಅಪೂರ್ವವಾದ ಗ್ರಂಥಾಲಯ ಉರಿದು ಬೂದಿಯಾಗಿ ಹೋಯಿತು.

ಇತ್ತೀಚೆಗೆ ನಂಜನಗೂಡು ಸತ್ಯನಾರಾಯಣ ಅವರು ಬರೆದ 'ವೇದಗಳಲ್ಲಿ ವಿಜ್ಞಾನ' ಪುಸ್ತಕ (ಮರು ಮುದ್ರಣ) ಬಿಡುಗಡೆಯಾಯಿತು. ಪುಟ್ಟದಾದ ಈ ಪುಸ್ತಕದಲ್ಲಿ ನಮ್ಮ ಪ್ರಾಚೀನ ವೇದಗಳ ಕಾಲದಲ್ಲಿಯೇ ಬಹುದೊಡ್ಡ ವಿಜ್ಞಾನಿಗಳು ಇದ್ದರು ಎಂಬುದನ್ನು ತಿಳಿಸಲಾಗಿದೆ. ಅದರಲ್ಲೂ ಅವುಗಳಲ್ಲಿ ವಿಜ್ಞಾನ–ತಂತ್ರಜ್ಞಾನ, ಗಣಿತ. ಖಗೋಳ ವಿಜ್ಞಾನ, ರಸವಿದ್ಯೆ, ವೈದ್ಯಕೀಯ ವಿಜ್ಞಾನ ಇವುಗಳನ್ನು ನಮ್ಮ ಪ್ರಾಚೀನರು ಅರಿತುಕೊಂಡಿದ್ದರು ಎಂದು ವಿವರಿಸಲಾಗಿದೆ. ಈ ಬಗ್ಗೆ ನಮ್ಮ ದೇಶಕ್ಕಿಂತ ವಿದೇಶಿಯರು ಹೆಚ್ಚು ಅಧ್ಯಯನ ನಡೆಸಿದ್ದಾರೆ ಎಂದೂ ಅದರಲ್ಲಿ ತಿಳಿಸಲಾಗಿದೆ. ಈಗ ನಾವು ಹೆಚ್ಚಾಗಿ ವಿಜ್ಞಾನ ತಂತ್ರಜ್ಞಾನದ ಬಗ್ಗೆ ಮಾತನಾಡುತ್ತೇವೆ. ಆದರೆ ಅಷ್ಟು ಹಿಂದೆಯೇ ಅದು ನಮ್ಮ ದೇಶದಲ್ಲಿತ್ತು ಎಂಬುದು ಹೆಮ್ಮೆಯ ಸಂಗತಿ. ಆದರೆ ಇಂದು ನಮಗೆ ನಮ್ಮ ಪದ್ಧತಿಗಿಂತ ಪಾಶ್ಚಾತ್ಯ ಪದ್ಧತಿಯೇ ಶ್ರೇಷ್ಠ ಎಂಬ ಮನೋಭಾವ ಬಂದಿರುವುದರಿಂದ ಹಾಗೂ ಹಿತ್ತಲಗಿಡ ಮದ್ದಲ್ಲ ಎಂಬಂತೆ ನಾವು ವಿದೇಶದವರು ಹೇಳಿದ್ದನ್ನು ಸಾರಾಸಗಟಾಗಿ ನಂಬುತ್ತೇವೆ!

ಈ ಪುಸ್ತಕದಲ್ಲಿ ನಾವು ಸೂರ್ಯ ಚಂದ್ರರ ಬಗ್ಗೆ ಅನ್ವೇಷಣೆ ಮಾಡುತ್ತಿದ್ದೇವೆ. ಆದರೆ, ವೇದಗಳ ಕಾಲದಲ್ಲಿಯೇ ಶ್ಲೋಕಗಳ ಮೂಲಕ ಇದರ ಬಗ್ಗೆ ವಿವರಿಸಲಾಗಿದೆ. ಸೂರ್ಯನ ಬಗ್ಗೆ ಅದರಲ್ಲಿ ನಿಖರವಾದ ಮಾಹಿತಿ ಇದೆ. ಹಾಗೆಯೇ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ ಸೀಸ, ಸತು ಮೊದಲಾದ ಲೋಹಗಳ ಸಂಪೂರ್ಣ ವಿವರ ಇದೆ. ಚಿನ್ನವನ್ನು ಅದುರಿನಿಂದ ಶುದ್ಧೀಕರಿಸುವ ವಿಧಾನ ಮೊದಲಾದವು ಗಳನ್ನು ಇದರಲ್ಲಿ ವಿವರಿಸಲಾಗಿದೆ. ಇತ್ತೀಚೆಗೆ ಜನಪ್ರಿಯವಾಗುತ್ತಿರುವ ವೇದ ಗಣಿತ (Vedic Mathematics) ಬಹಳ ಪ್ರಾಚೀನವಾಗಿದ್ದು ಅದರ ಬಗ್ಗೆ ವಿವರಗಳಿವೆ.

ಇಂದು ವಿಶ್ವದ ಬೇರೆಬೇರೆ ಭಾಗದ ಜನರು ಸಂಶೋಧನೆ ನಡೆಸಿ, ತಾವು ಹೊಸದಾಗಿ ಕಂಡುಹಿಡಿದಿರುವುದಾಗಿ ಪ್ರಸಿದ್ಧಿಗೆ ಬರುತ್ತಿದ್ದಾರೆ, ಹಾಗೂ ವಿಶ್ವಮಟ್ಟದ ಪ್ರಶಸ್ತಿಗಳಿಗೆ ಭಾಜನರಾಗುತ್ತಿದ್ದಾರೆ. ಆದರೆ ಅವೆಲ್ಲಾ ನಮ್ಮ ಪ್ರಾಚೀನ ವೇದಗಳಲ್ಲಿ ಉಲ್ಲೇಖವಾಗಿವೆ. ಇಂದು ವೇದಗಳನ್ನು ನಾವು ಸರಿಯಾಗಿ ಅಧ್ಯಯನ ಮಾಡಿದರೆ ನಮ್ಮ ಜ್ಞಾನ ಭಂಡಾರವನ್ನು ವಿಸ್ತರಿಸಿಕೊಳ್ಳಬಹುದು ಹಾಗೂ ಭಾರತದ ಸಾಧನೆ ಮತ್ತೊಂದು ಮಜಲಿಗೆ ತಲುಪುವ ಬಗ್ಗೆ ಯಾವ ಸಂಶಯವೂ ಇಲ್ಲ.

ಹಾಗಾದರೆ ಇಷ್ಟೊಂದು ಜ್ಞಾನ ಭಂಡಾರವಿದ್ದರೂ ಅದು ಏಕೆ ಇಂದು ಅಷ್ಟಾಗಿ ಬೆಳಕಿಗೆ ಬರುತ್ತಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ವಿದೇಶಿ ಆಕ್ರಮಣಕಾರರು, ಕೊನೆಯದಾಗಿ ಬ್ರಿಟಿಷರು ಇಲ್ಲಿ ಆಡಳಿತ ಸೂತ್ರ ಹಿಡಿದಿದ್ದರಿಂದ ನಮ್ಮ ಜ್ಞಾನಭಂಡಾರ ನಮಗೆ ಉಪಯೋಗಕ್ಕೆ ಬರದಂತೆ ನೋಡಿಕೊಂಡರು ಎಂದು ಹೇಳಬಹುದಾದರೂ, ದೇಶಕ್ಕೆ ಸ್ವಾತಂತ್ರ್ಯ ಬಂದು ಎಂಟು ದಶಕಗಳಾಗುತ್ತಾ ಬಂದರೂ ಈಗಲೂ ಏಕೆ ನಮಗೆ ನಮ್ಮ ಪಾರಂಪರಿಕ ಜ್ಞಾನದ ಬಗ್ಗೆ ಅಭಿಮಾನ ಮೂಡುತ್ತಿಲ್ಲ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮ ದೇಶ ಬಹುಭಾಷೆಗಳ ದೇಶ. ಒಂದು ಅಂದಾಜಿನ ಪ್ರಕಾರ ಈ ದೇಶದಲ್ಲಿ 19000 ಕ್ಕೂ ಮಿಕ್ಕಿದ ಭಾಷೆ, ಉಪಭಾಷೆಗಳಿವೆ. ಇದನ್ನು ನಮ್ಮ ದೇಶದ 2011ರ ಜನಗಣತಿಯಲ್ಲಿ ಉಲ್ಲೇಖ ಮಾಡಲಾಗಿದೆ. ಈ ಪೈಕಿ 121 ಭಾಷೆಗಳು ಹತ್ತು ಸಾವಿರಕ್ಕಿಂತ ಹೆಚ್ಚು ಮಾತ ನಾಡುವವರನ್ನು ಹೊಂದಿದೆ. ನಮ್ಮ ಸಂವಿಧಾನದ ಅನುಸೂಚಿಯಲ್ಲಿ 22 ಭಾಷೆಗಳನ್ನು ಉಲ್ಲೇಖಿಸಲಾಗಿದೆ. ಭಾರತದಲ್ಲಿ ಹಿಂದಿ, ಕನ್ನಡ, ಮರಾಠಿ, ತೆಲುಗು, ತಮಿಳು, ಮಲೆಯಾಳಂನಂತಹ ಹತ್ತಕ್ಕಿಂತ ಹೆಚ್ಚು ಭಾಷೆಗಳನ್ನು ಹೆಚ್ಚು ಜನರು ಮಾತನಾಡು ತ್ತಾರೆ. ಈ ಪೈಕಿ ಶಾಸ್ತ್ರೀಯ ಭಾಷಾ ಸ್ಥಾನಮಾನ 6 ಭಾಷೆಗಳಿಗೆ ದೊರೆಕಿದೆ. (ಕನ್ನಡವೂ ಸೇರಿ ದಂತೆ). ಶಾಸ್ತ್ರೀಯ ಭಾಷೆ ಎಂದರೆ ಅದು 1000–2000 ವರ್ಷಗಳ ಹಿಂದಿನ ಭಾಷೆಯಾಗಿರಬೇಕು ಎಂಬ ಮಾನದಂಡವಿದೆ.

ಇನ್ನು ಹಿಂದಿ ಭಾಷೆಯ ಬಗ್ಗೆ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಹೆಚ್ಚು ಚರ್ಚೆ ನಡೆಯುತ್ತಿದೆ. ಹಿಂದಿಯನ್ನು ಒಂದು ಭಾಷೆಯಾಗಿ ಈವರೆವಿಗೆ ಕಲಿಸಲಾಗುತ್ತಿತ್ತು. ಹಿಂದೆ ಒಂದರಿಂದ ನಾಲ್ಕನೇ ತರಗತಿಯವರೆಗೆ ಕನ್ನಡ ಭಾಷೆ, ಐದನೆ ತರಗತಿಯಲ್ಲಿ ಇಂಗ್ಲಿಷ್ ಭಾಷೆ, ಆರನೇ ತರಗತಿಯಲ್ಲಿ ಹಿಂದಿ ಭಾಷೆ ಕಲಿಸಲಾಗುತ್ತಿತ್ತು. ಮಕ್ಕಳು ಅದರಂತೆ ಕಲಿಯುತ್ತಿದ್ದರು. ಭಾಷೆ ಕಲಿಯುವುದು ಎಂದಿಗೂ ಒಳ್ಳೆಯದೇ. ಕವಿ ಪಂಜೆ ಮಂಗೇಶರಾಯರಿಗೆ ಹತ್ತಾರು ಭಾಷೆಗಳು ಓದಲು, ಬರೆಯಲು ಬರುತ್ತಿತ್ತು. ಭಾರತದ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾಯರಿಗೆ 17 ಭಾಷೆಗಳು ಬರುತ್ತಿತ್ತು, ಅಷ್ಟೂ ಭಾಷೆಗಳಲ್ಲಿ ಅವರು ಮಾತನಾಡಬಲ್ಲವರಾಗಿದ್ದರು, ಸ್ವಾಮಿ ವಿವೇಕಾನಂದರಿಗೆ ಭಾರತದ ಹಲವಾರು ಭಾಷೆಗಳನ್ನು ಮಾತನಾಡಲು ಬರುತ್ತಿತ್ತು ಎಂದು ಕೇಳಿದ್ದೇವೆ. ಅದು ಹೇಗೆ ಸಾಧ್ಯವಾಯಿತು? ಎಂದರೆ, ಅವರು ಎಲ್ಲಾ ಭಾಷೆಗಳ ಬಗ್ಗೆ ಅಭಿರುಚಿ ಹೊಂದಿದ್ದರು ಎಂಬ ವಿಷಯ ನಮ್ಮ ಗಮನಕ್ಕೆ ಬರುತ್ತದೆ. ನಾವು ಕೆಲವೊಮ್ಮೆ ಸಾಮಾಜಿಕ ಜಾಲತಾಣದಲ್ಲಿ ಅವಿದ್ಯಾವಂತರಾಗಿದ್ದರೂ ಹಲವು ಭಾಷೆಗಳನ್ನು ಮಾತನಾಡುವ ಗೈಡ್‌ಗಳನ್ನು ನೋಡಿದ್ದೇವೆ. ಹೊರ ದೇಶದಿಂದ ಬಂದವರೊಡನೆ ಅವರದ್ದೇ ಭಾಷೆಯಲ್ಲಿ ಮಾತನಾಡುವವರು ಸಿಕ್ಕಾಗ ಜನ ಸಹಜವಾಗಿಯೇ ಅಂಥವರನ್ನು ಇಷ್ಟಪಟ್ಟು ಅಪೇಕ್ಷಿಸಿದ್ದಕ್ಕಿಂತ ಹೆಚ್ಚು ಹಣ ನೀಡಿ ಹೋಗುವುದನ್ನು ನಾವು ಗಮನಿಸಬಹುದು. ಭಾಷೆ ಎಂಬುದು ಎಲ್ಲರಿಗೂ ಒಲಿಯಬಲ್ಲುದು. ಅದನ್ನು ಕಲಿಯಬೇಕಷ್ಟೇ.

ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂಬುದು ನಾವೆಲ್ಲಾ ಒಪ್ಪಿರುವ ಸಂಗತಿಯೇ. ಆದರೆ ಇಂದು ಪ್ರಪಂಚ ವೇಗವಾಗಿ ಬದಲಾಗುತ್ತಿರುವ ಕಾಲದಲ್ಲಿ ನಮಗೆ ಒಂದು ಭಾಷೆಯ ತಿಳುವಳಿಕೆ ಸಾಕಾಗುತ್ತಿಲ್ಲ. ಇಂದು ಅನೇಕ ಊರುಗಳಲ್ಲಿ ರಷ್ಯನ್ ಭಾಷೆ, ಜಪಾನಿ ಭಾಷೆ, ಫ್ರೆಂಚ್ ಭಾಷೆ ಮೊದಲಾದ ಭಾಷೆಗಳನ್ನು ಕಲಿಸುವ ಕೇಂದ್ರಗಳಿವೆ. ಅಲ್ಲಿಗೆ ಜನರು ಹೋಗಿ ಕಲಿಯುತ್ತಾರೆ. ಮುಂದೆ ಆ ದೇಶಗಳಲ್ಲಿ ಕೆಲಸ ಮಾಡುವ ಅವಕಾಶ ದೊರಕಿದರೆ, ಅವರಿಗೆ ಭಾಷೆ ಅನುಕೂಲವಾಗುತ್ತದೆ ಎಂಬುದು ಧನಾತ್ಮಕವಾದ ಅಂಶವಾಗುತ್ತದೆ. ಕಲಿಯುವ ಆಸಕ್ತಿ ಇದ್ದರೆ ಎಲ್ಲವನ್ನೂ ಕಲಿಯಬಹುದು. ಸರ್ಕಾರದ ಕೆಲಸ ಎಂದರೆ ಮಕ್ಕಳು ಕಲಿಯಲು ಇಚ್ಚಿಸುವ ಭಾಷೆಗಳನ್ನು ಕಲಿಸುವುದೇ ಆಗಿದೆ. ಭಾಷೆ ಕಲಿಕೆ ಕಷ್ಟವೇ ಆದರೂ. ಕಲಿಯಲಾಗುವುದಿಲ್ಲ ಎಂದಲ್ಲ. ಇಂದು ಉತ್ತರ ಭಾರತಕ್ಕೆ ಪ್ರವಾಸ ಹೋದರೆ ಹಿಂದಿ ಭಾಷೆ ಮಾತನಾಡುವುದು ಅನಿವಾರ್ಯವಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿರಲಿ

ರಂಗಭೂಮಿ ಕಲಾವಿದ ಪ್ರಕಾಶ್ ಶೆಣೈ ಸಲಹೆ



'ಎಳೆಯರ ಮೇಳ' ಬೇಸಿಗೆ ಶಿಬಿರಕ್ಕೆ ರಂಗಭೂಮಿ ಕಲಾವಿದ ಪ್ರಕಾಶ್ ಶೆಣೈ ಚಾಲನೆ ನೀಡಿದರು.

ಮೈಸೂರು, ಏ.3(ಎಸ್‌ಪಿಎನ್)– ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ರೀತಿಯಲ್ಲಿ ಬೇಸಿಗೆ ಶಿಬಿರಗಳನ್ನು ನಡೆಸಬೇಕು ಎಂದು ರಂಗಭೂಮಿ ಕಲಾವಿದ ಪ್ರಕಾಶ್ ಶೆಣೈ ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಕಲಾಮಂಟಪ ಸಹಯೋಗದಲ್ಲಿ ಆಯೋಜಿಸಿರುವ 'ಎಳೆಯರ ಮೇಳ' ಬೇಸಿಗೆ ಶಿಬಿರಕ್ಕೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯದ ಶ್ರೀಮಂತ್ರ ಮಹರ್ಷಿ ಸಭಾಂಗಣದಲ್ಲಿ ಶುಕ್ರವಾರ ಚಾಲನೆ ನೀಡಿ, ಮಾತನಾಡಿದರು.

ಬೇಸಿಗೆ ರಜೆಯಲ್ಲಿ ಇಂತಹ ಶಿಬಿರಗಳ ಮೂಲಕ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಅನಾವರಣಗೊಳಿಸುತ್ತಿರುವುದು ಉತ್ತಮ ಕಾರ್ಯವಾಗಿದೆ. ಎಲ್ಲ ಮಕ್ಕಳಲ್ಲೂ ಒಂದಿಲ್ಲೊಂದು ಪ್ರತಿಭೆ ಸುಪ್ತವಾಗಿರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹಿಸುವುದರ ಜೊತೆಗೆ ಅನಾವರಣಕ್ಕೂ ಸೂಕ್ತ ವೇದಿಕೆ ಕಲ್ಪಿಸಿಕೊಡುವುದು ಬಹಳ ಮುಖ್ಯ. ಅದೆಷ್ಟೋ ಪ್ರತಿಭಾವಂತ ಮಕ್ಕಳು ಪ್ರೋತ್ಸಾಹ ಹಾಗೂ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದರು.

ಈ ಮೇಳದಲ್ಲಿ ರಂಗದಾಟಗಳು, ಜಾನಪದ ಹಾಡು, ನೃತ್ಯ, ನಾಟಕ, ಚಿಂತಕರೊಂದಿಗೆ ಸಂವಾದ, ಕವಿತೆ ರಚನೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಮುಖವಾಡ ತಯಾರಿಕೆ, ಜೇಡಿಮಣ್ಣಿನ ಕಲೆ, ಕರಕುಶಲ ವಸ್ತು ತಯಾರಿಕೆ, ಪವಾಡ ರಹಸ್ಯ ಬಯಲು, ಪರಿಸರ ವೀಕ್ಷಣೆ, ಮಕ್ಕಳ ಸಂತೆ, ಇನ್ನಿತರ ಕ್ರಿಯಾಶೀಲ ಚಟುವಟಿಕೆಗಳನ್ನು ಪರಿಚಯಿಸುತ್ತಿರುವುದು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ನಾಂದಿಯಾಗಲಿದೆ. ಎಲ್ಲಾ ಶಿಬಿರಗಳಲ್ಲೂ ಇಂತಹ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಭಾರ ನಿರ್ದೇಶಕ ಎಂ.ಶಿವಮಾದಪ್ಪ, ಎಳೆಯರ ಮೇಳದ ಸಂಚಾಲಕರಾದ ಚಂದ್ರಶೇಖರಾಚಾರ್, ಎಂ.ಗುರುಸ್ವಾಮಿ, ಬಿ.ಪ್ರಶಾಂತ್, ಮಂಜುನಾಥ (ಕಾಚಕ್ಕಿ), ಶಕುಂತಲ ಹೆಗಡೆ, ಬಿ.ಜೀವನ್‌ಕುಮಾರ್, ಪಿ.ಜಿ.ಸವಿತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಸಿಎಫ್‌ಟಿಆರ್‌ಐ ಅಮೃತ ಮಹೋತ್ಸವ ಸಮಾರೋಪ

• ಆಹಾರ ತಂತ್ರಜ್ಞಾನ ಮಾಹಿತಿಯ ಯುವಪೀಳಿಗೆಗೆ ತಲುಪಿಸಲು ಸಾಮಾಜಿಕ ಜಾಲತಾಣ ಸೂಕ್ತ ವೇದಿಕೆ • ಕೇಂದ್ರ ವಿಜ್ಞಾನ, ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಸಲಹೆ • ಡಿಜಿಟಲ್ ವೇದಿಕೆಯನ್ನು ಸಮರ್ಥವಾಗಿ ಸದ್ಬಳಕೆ ಮಾಡಿಕೊಳ್ಳಿ; ಸಾಂಪ್ರದಾಯಿಕತೆ ಜೊತೆಗೆ ಆಧುನಿಕ ಸ್ಪರ್ಶ ನೀಡಿ



ಮೈಸೂರಿನ ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಶುಕ್ರವಾರ ಸಂಸ್ಥೆಯ ಅಮೃತ ಮಹೋತ್ಸವದ ಸಮಾರೋಪದ ವೇಳೆ ಆಹಾರ ವಸ್ತುಗಳ ಪ್ರದರ್ಶನವನ್ನು ಕೇಂದ್ರ ವಿಜ್ಞಾನ, ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ವೀಕ್ಷಿಸಿದರು.

ಮೈಸೂರು, ಏ.3(ಬಿಎಲ್‌ಯು)– ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ)ದಲ್ಲಿ ನಡೆಯುವ ಆಹಾರ ತಂತ್ರಜ್ಞಾನ ಆವಿಷ್ಕಾರಗಳ ಪ್ರಯೋಜನವನ್ನು ಸಾರ್ವಜನಿಕರಿಗೆ ಪರಿಪೂರ್ಣವಾಗಿ ತಲುಪಿಸುವ ಉದ್ದೇಶದಿಂದ ಸಾಮಾಜಿಕ ಜಾಲತಾಣವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಕೇಂದ್ರ ವಿಜ್ಞಾನ, ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಸೂಚನೆ ನೀಡಿದರು.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಂಸ್ಥೆಯ ಅಮೃತ ಮಹೋತ್ಸವ ಆಚರಣೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದಲ್ಲಿ 35 ವರ್ಷ ವಯಸ್ಸಿನ ಶೇಕಡ 60ರಷ್ಟು ಜನರಿದ್ದಾರೆ. ಈ ವರ್ಗಕ್ಕೆ ಇಲ್ಲಿನ ತಂತ್ರಜ್ಞಾನದ ಬೆಳವಣಿಗೆಯ ಪ್ರಯೋಜನವನ್ನು ತಲುಪಿಸುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣವನ್ನು ಸಮರ್ಥವಾಗಿ ಬಳಸಿಕೊಳ್ಳಿ ಎಂದರು.

ಇಂದಿನ ಯುವಪೀಳಿಗೆ ಮಾಹಿತಿ ತಂತ್ರಜ್ಞಾನದ ಸಂಪರ್ಕದಲ್ಲಿದೆ. ಈ ಹಿನ್ನೆಲೆಯಲ್ಲಿ ಅವರು ಆಕರ್ಷಣೆಗೊಂಡಿರುವ ವೇದಿಕೆ ಮೂಲಕ ನಿಮ್ಮ ತಂತ್ರಜ್ಞಾನದ ಆವಿಷ್ಕಾರವನ್ನು ಅವರಿಗೆ ಪರಿಚಯಿಸಬೇಕು. ಪೌಷ್ಟಿಕಾಂಶಯುಕ್ತ ಆರೋಗ್ಯಕರ ಆಹಾರ ಹಾಗೂ ರೆಡಿ ಟು ಈಟ್ ಆಹಾರ ಸೇರಿದಂತೆ ಇಲ್ಲಿನ ಆವಿಷ್ಕಾರಗಳ ಬಗ್ಗೆ ಯುವ ಪೀಳಿಗೆಗೆ ಅರಿವು ಮೂಡಿಸಬೇಕು. ಇಲ್ಲಿಗೆ ಮಾತ್ರ ಸೀಮಿತವಾಗುವಂತೆ ಬೃಹತ್ ಪುಸ್ತಕಗಳನ್ನು ಮುದ್ರಿಸಿ ಬಿಡುಗಡೆ ಮಾಡಿದರೆ ಹೆಚ್ಚು ಪ್ರಯೋಜನವಾಗದು. ಈ ಕಾರ್ಯದ ಜೊತೆಗೆ ಇಲ್ಲಿನ ತಂತ್ರಜ್ಞಾನ ಹಾಗೂ ಆವಿಷ್ಕಾರದ ಚಿಕ್ಕ ವೀಡಿಯೊ ತುಣುಕುಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಬೇಕು. ಡಿಜಿಟಲ್ ವೇದಿಕೆ ಮೂಲಕ ಜನ ಸಾಮಾನ್ಯರಿಗೆ ಸುಲಭವಾಗಿ ತಲುಪಿಸಬೇಕು ಎಂದು ಕಿವಿಮಾತು ಹೇಳಿದರು.

ಉದಾಹರಣೆಗೆ ಉದ್ಯೋಗಸ್ಥ ಮಹಿಳೆಯರು ಉಪಹಾರ, ಮಧ್ಯಾಹ್ನದ ಭೋಜನ ತಯಾರಿಸಿ ಬೇಗ ಕೆಲಸಕ್ಕೆ ಹೋಗಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅವರಿಗೆ ಅವಶ್ಯವಿರುವ 'ರೆಡಿ ಟು ಈಟ್' ಆಹಾರದ ಬಗ್ಗೆ ತಿಳುವಳಿಕೆ ಮೂಡಿಸಿದರೆ ಖಂಡಿತ ಪಾಲಿಸುತ್ತಾರೆ. ಅಲ್ಲದೆ ಪೌಷ್ಟಿಕಾಂಶ ಆಹಾರ ಸೇವಿಸುವ ಬಗ್ಗೆ ಗರ್ಭಿಣಿ ಸ್ತ್ರೀಯರಲ್ಲಿ ಗೊಂದಲವಿರುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಆವಿಷ್ಕಾರಗೊಂಡಿರುವ ಪೌಷ್ಟಿಕಾಂಶಯುಕ್ತ ಆಹಾರದ ಬಗ್ಗೆ ಗರ್ಭಿಣಿ ಸ್ತ್ರೀಯರಿಗೆ ಅರಿವು ಮೂಡಿಸಬೇಕು. ಇತ್ತೀಚಿಗೆ ಮ್ಯಾಕ್ ಡೋನಾಲ್ಡ್‌ನಲ್ಲಿ ಪೌಷ್ಟಿಕಾಂಶಯುಕ್ತ ಬನ್ ಯುವ ಪೀಳಿಗೆಯನ್ನು ಆಕರ್ಷಿಸಿತು. ಇಂತಹ ಆಹಾರವನ್ನು ಹೆಚ್ಚಾಗಿ ಪರಿಚಯಿಸಬೇಕು ಎಂದು ಡಾ.ಜಿತೇಂದ್ರ ಸಿಂಗ್ ಸಲಹೆಯಿತ್ತರು.

ಹಾಗೆಂದು ಸಿಎಫ್‌ಟಿಆರ್‌ಐನ ಸಾಂಪ್ರದಾಯಿಕ ಆಹಾರ ಆವಿಷ್ಕಾರದಿಂದ ಹೊರಗೆ ಬನ್ನಿ ಎಂದು ನಾನು ಹೇಳುವುದಿಲ್ಲ. ಇದರ ಜೊತೆಗೆ ಆಧುನಿಕ ತಂತ್ರಜ್ಞಾನದಿಂದ ಆಹಾರ ಆವಿಷ್ಕಾರಕ್ಕೆ ಸ್ಪರ್ಶ ನೀಡುವುದು ಮುಖ್ಯವಾಗಿದೆ. ಈ ಮೂಲಕ ದೇಶದಲ್ಲಿ ಹೆಚ್ಚಾಗಿರುವ ಯುವ ಪೀಳಿಗೆಯನ್ನು ಆಕರ್ಷಿಸಬಹುದು ಎಂದು ಮನದಟ್ಟು ಮಾಡಿದರು.

ಪಂಜಾಬ್‌ನಲ್ಲಿ ಹೆಚ್ಚಾಗಿ ಆಹಾರದಲ್ಲಿ ಚೀಸ್ ಬಳಕೆ ಮಾಡುತ್ತಾರೆ. ಆದರೆ ಚೀಸ್ ಹೆಚ್ಚು ಸಮಯ ಸಂಗ್ರಹಿಸಿಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಿಎಫ್‌ಟಿಆರ್‌ಐನವರು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಚೀಸ್ ಅನ್ನು ಹೆಚ್ಚು ಸಮಯ ಕೆಡದಂತೆ ಇಡುವ ವಿಧಾನವನ್ನು ಆವಿಷ್ಕಾರ ಮಾಡಬೇಕು. ಇಂತಹ ಹೊಸ ಹೊಸ ಆಲೋಚನೆಗಳನ್ನು ಸಾಧಿಸಬೇಕು. ಇಲ್ಲಿನ ಆಹಾರ ತಂತ್ರಜ್ಞಾನ ಬಳಸಿಕೊಂಡು ಸ್ಥಾಪನೆಗೊಂಡಿರುವ ಉದ್ಯಮಗಳು ದೀರ್ಘಕಾಲದವರೆಗೆ ಅಸ್ತಿತ್ವ ಕಾಪಾಡಿಕೊಳ್ಳುವಂತೆ ಗಮನಹರಿಸಬೇಕು. ದೆಹಲಿಯ ಸಿಎಸ್‌ಐಆರ್ ಮಾದರಿಯಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐನಲ್ಲೂ ರೈತರೊಂದಿಗೆ ಸಮಾಲೋಚನಾ ಸಭೆ ನಡೆಸಬೇಕು. ರೈತರ ಅಭಿಪ್ರಾಯ ಆಲಿಸಿ, ಇಲ್ಲಿನ ಆಹಾರ ತಂತ್ರಜ್ಞಾನದ ಬೆಳವಣಿಗೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕು ಎಂದು ಡಾ.ಜಿತೇಂದ್ರ ಸಿಂಗ್ ಸಲಹೆ ನೀಡಿದರು.

ಈ ವೇಳೆ ಸಿಎಸ್‌ಐಆರ್ ಮಹಾ ನಿರ್ದೇಶಕಿ ಡಾ.ಎನ್.ಕಲೈಸೆಲ್ವಿ ಅವರು ಮಾತನಾಡಿ, ಸ್ಪೇಸ್ ಫುಡ್ ಸಿಸ್ಟಂ(ಬಾಹ್ಯಾಕಾಶ ಆಹಾರ ವ್ಯವಸ್ಥೆ) ಆವಿಷ್ಕಾರದಲ್ಲೂ ಹೆಚ್ಚು ಸಾಧನೆ ಮಾಡಬೇಕಿದೆ ಎಂದರು.

ವರ್ಚುವಲ್ ಮೂಲಕ ಮಾತನಾಡಿದ ಸಂಸದ ಯದುವೀರ್, ಸಿಎಫ್‌ಟಿಆರ್‌ಐ ಸ್ಥಾಪನೆಯಲ್ಲಿ ಮೈಸೂರು ರಾಜಮನೆತನದ ಉತ್ತೇಜನದ ಬಗ್ಗೆ ವಿವರಿಸುವುದರ ಜೊತೆಗೆ 75 ವರ್ಷ ಪೂರೈಸಿರುವ ಸಂಸ್ಥೆ ಮತ್ತಷ್ಟು ಸಾಧನೆ ಮಾಡಲಿ ಎಂದು ಹಾರೈಸಿದರು.

ಇದೇ ವೇಳೆ ಮೈಸೂರಿನ 'ಸಿಎಫ್‌ಟಿಆರ್‌ಐ 75' ಸಂಭ್ರಮದ ಹಿನ್ನೆಲೆಯಲ್ಲಿ ಸಚಿವ ಡಾ.ಜಿತೇಂದ್ರ ಸಿಂಗ್ ಅಂಚೆ ಚೀಟಿ ಬಿಡುಗಡೆ ಮಾಡಿದರು. ಅಲ್ಲದೆ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಹಲವು ಸ್ಮರಣ ಸಂಚಿಕೆಗಳನ್ನು ಬಿಡುಗಡೆ ಮಾಡಿದರು.

ಬಿಐಆರ್‌ಎಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಜಿತೇಂದ್ರ ಕುಮಾರ್, ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಹಿರಿಯ ಅಧಿಕಾರಿ ಚಿನ್ನಿ ವಾಸುದೇವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಕೆಎಸ್‌ಎ 7' ಎ ಸೈಡ್ ಹಾಕಿ ಪಂದ್ಯಾವಳಿ





ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಕೊಡವ ವಿದ್ಯಾರ್ಥಿಗಳ ಸಂಘದ ವತಿಯಿಂದ ಆಯೋಜಿಸಿರುವ 'ಕೆಎಸ್‌ಎ 7'ಎ ಸೈಡ್ ಹಾಕಿ ಪಂದ್ಯಾವಳಿಗೆ ಅಂತರರಾಷ್ಟ್ರೀಯ ಹಾಕಿಪಟು, ಏಕಲವ್ಯ ಪ್ರಶಸ್ತಿ ಪುರಸ್ಕೃತ ಆಭರಣ್ ಸುದೇವ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೊಡವ ಸಮಾಜದ ಯೂತ್ ಕೌನ್ಸಿಲ್ ಅಧ್ಯಕ್ಷ ಹೆಚ್.ವರುಣ್ ನಂಜಪ್ಪ, ಕೊಡವ ಸಮಾಜ ಮೈಸೂರು ಅಧ್ಯಕ್ಷ ಪಿ.ಎ.ಗಣಪತಿ, ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಕೆ.ಮನು ಸೋಮಯ್ಯ, ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಈಶ್ವರಿ ಪ್ರಿಂಟರ್ಸ್‌ನ ದೀಪಾಂಕರ್, ಕೊಡವ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಂ.ರವಿ ಕಾರ್ಯಪ್ಪ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಡಾಮಿನೇಟರ್ಸ್ ವೈಟ್ ಮತ್ತು ಮಾರ್ನಿಂಗ್ ಬಾಯ್ಸ್ ತಂಡದ ನಡುವಿನ ಹಾಕಿ ಪಂದ್ಯವನ್ನು ಕಾಣಬಹುದು.

ಇರಾನ್‌ಗೆ ಶಾಕ್: ನೌಕಾಪಡೆ ಉಪ ಗುಪ್ತಚರ ಮುಖ್ಯಸ್ಥ ಬೆಹ್ನಾಮ್ ರೆಝಾಯ್ ಹತ್ಯೆ

ಟೆಹ್ರಾನ್, ಏ.3– ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಇರಾನ್‌ನ ನೌಕಾಪಡೆಯ ಉಪ ಗುಪ್ತಚರ ಮುಖ್ಯಸ್ಥ ಬೆಹ್ನಾಮ್ ರೆಝಾಯ್ ಅವರ ಹತ್ಯೆಯಾಗಿದೆ. ಈ ಬಗ್ಗೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ದೃಢಪಡಿಸಿದೆ



ಬೆಹ್ನಾಮ್ ರೆಝಾಯ್ ಅವರು ಇರಾನ್‌ನ ಮಿಲಿಟರಿ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಸಮುದ್ರ ಬೆದರಿಕೆಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಪ್ರಾದೇಶಿಕ ಸಮುದ್ರದಾದ್ಯಂತ ಕಾರ್ಯತಂತ್ರದ ಮಾಹಿತಿಯನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಹಾಗೂ ಗುಪ್ತಚರ ಕಾರ್ಯಾಚರಣೆಗಳನ್ನು ಮುನ್ನಡೆಸಿದ್ದರು.

ಇರಾನ್‌ನಲ್ಲಿ ಇಲ್ಲಿವರೆಗೆ ಯುದ್ಧದಿಂದ ಹಿರಿಯ ಅಧಿಕಾರಿ ಗಳು ಮತ್ತು ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಸೇರಿದಂತೆ 1,340ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ಅಮೆರಿಕದ ದಾಳಿಗೆ ಪ್ರತಿಯಾಗಿ ಇರಾನ್ ಸಹ ಇಸ್ರೇಲ್, ಜೋರ್ಡಾನ್, ಇರಾಕ್ ಮತ್ತು ಅಮೆರಿಕದ ಮಿಲಿಟರಿ ಸ್ವತ್ತುಗಳನ್ನು ಹೊಂದಿರುವ ಹಲವಾರು ಗಲ್ಫ್ ರಾಷ್ಟ್ರಗಳನ್ನು ಗುರಿಯಾಗಿಸಿ ಕೊಂಡು ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸುತ್ತಿದೆ. ಇದರಿಂದಾಗಿ ಸಾವುನೋವುಗಳು, ಮೂಲಸೌಕರ್ಯ ಹಾನಿ ಮತ್ತು ಜಾಗತಿಕ ಮಾರುಕಟ್ಟೆಗಳಿಗೆ ತೀವ್ರ ಸಮಸ್ಯೆ ಎದುರಾಗಿದೆ.

ನಾಟ್ಯಾಚಾರ್ಯ ರಾಮಮೂರ್ತಿ ರಾವ್ ಅವರಿಗೆ ನಾಳೆ 'ಪ್ರಣಾಮ'

ಮೈಸೂರು, ಏ.3– ಮೈಸೂರಿನ ಭಾರತೀಯ ನೃತ್ಯಕಲಾ ಪರಿಷತ್ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ನಾಟ್ಯಾಚಾರ್ಯ ಕೆ.ರಾಮಮೂರ್ತಿ ರಾವ್ ಅವರಿಗೆ 'ಪ್ರಣಾಮ' ಸನ್ಮಾನ ಸಮಾರಂಭವನ್ನು ಕುವೆಂಪುನಗರ ವೀಣೆ ಶೇಷಣ್ಣ ಭವನದ ಗಾನಭಾರತಿ ಸಭಾಂಗಣದಲ್ಲಿ ಏ.5ರಂದು ಸಂಜೆ 6ಕ್ಕೆ ಏರ್ಪಡಿಸಲಾಗಿದೆ.




ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಸಮಾರಂಭವನ್ನು ಉದ್ಘಾಟಿಸಲಿದ್ದು, ನೃತ್ಯಾಲಯ ಟ್ರಸ್ಟ್‌ನ ನಿರ್ದೇಶಕಿ ವಿದುಷಿ ಡಾ.ತುಳಸಿ ರಾಮಚಂದ್ರ, ಪ್ರಸಿದ್ಧ ವೈದ್ಯ ಡಾ.ಸಿ.ಜಿ.ಪ್ರಹ್ಲಾದ ರಾವ್, ಪರಿಷತ್ತಿನ ಅಧ್ಯಕ್ಷರಾದ ಗುರು ವಿದುಷಿ ಡಾ.ಶೀಲಾ ಶ್ರೀಧರ್, ಗೌರವ ಉಪಾಧ್ಯಕ್ಷರಾದ ವಿದುಷಿ ಡಾ.ಕೃಪಾ ಫಡ್ಕೆ, ಗೌರವ ಕಾರ್ಯದರ್ಶಿ ವಿದುಷಿ ಡಾ.ಕುಮುದಿನಿ ಅಚ್ಚಿ, ಗೌರವ ಖಜಾಂಚಿ ವಿದುಷಿ ಎಂ.ಎನ್.ಸುಶ್ಮಿತಾ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಸಭಾ ಕಾರ್ಯಕ್ರಮಕ್ಕೂ ಮುನ್ನ ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ವಿದುಷಿ ಶ್ರೀ ವಿದ್ಯಾರಾವ್ ಅವರ ಶಿಷ್ಯವೃಂದದಿಂದ ಭರತನಾಟ್ಯ, ನಂತರ ನಾಟ್ಯಾಚಾರ್ಯ ಕೆ.ರಾಮಮೂರ್ತಿ ರಾವ್ ಅವರ ಶಿಷ್ಯವೃಂದ ಹಾಗೂ ವಿದುಷಿ ಪದ್ಮಿನಿ ಅಚ್ಚಿ ಅವರ ಶಿಷ್ಯ ವೃಂದದಿಂದ ನೃತ್ಯ ನಮನ ಕಾರ್ಯಕ್ರಮ ನಡೆಯಲಿದೆ.

ನಾಟ್ಯಾಚಾರ್ಯ ಕೆ.ರಾಮಮೂರ್ತಿ ರಾವ್ ಅವರ ನೃತ್ಯಕ್ಷೇತ್ರದ ಬಹುಮುಖ ಸೇವೆಯನ್ನು ಪರಿಗಣಿಸಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2005–2006ನೇ ಸಾಲಿನಲ್ಲಿ 'ಗೌರವ ಪ್ರಶಸ್ತಿ' ನೀಡಿ ಅಭಿನಂದಿಸಿದೆ. ಹಲವಾರು ಸಂಘ ಸಂಸ್ಥೆಗಳು 'ನೃತ್ಯ ಭೂಷಣ', 'ನೃತ್ಯಸಿರಿ', 'ಕಲಾವತಂಸ', 'ಆದರ್ಶ ಸೇವಾರತ್ನ', 'ಗುಣನಿಧಿ' 'ರಂಗಭೂಮಿಯ ನಕ್ಷತ್ರ' ಸೇರಿದಂತೆ ಹತ್ತಾರು ಪ್ರಶಸ್ತಿಗಳೊಂದಿಗೆ ಗೌರವಿಸಿವೆ.

ರಂಗಭೂಮಿ ಜನಜೀವನವನ್ನು ಪ್ರತಿಬಿಂಬಿಸುವ ಜೀವಂತ ಕ್ಷೇತ್ರ

ಹಿರಿಯ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಅಭಿಮತ



'ಪಾರ್ಟಿ' ನಾಟಕ ಪ್ರದರ್ಶನಕ್ಕೆ ಹಿರಿಯ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಚಾಲನೆ ನೀಡಿ, ಮಾತನಾಡುತ್ತಿರುವುದು.

ಮೈಸೂರು, ಏ.3(ಎಸ್‌ಪಿಎನ್)– ರಂಗಭೂಮಿ ಜನಜೀವನವನ್ನು ಪ್ರತಿಬಿಂಬಿಸುವ ಜೀವಂತ ಕ್ಷೇತ್ರ ಎಂದು ಹಿರಿಯ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅಭಿಪ್ರಾಯಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನಿರಂತರ ಫೌಂಡೇಶನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಏರ್ಪಡಿಸಿದ್ದ ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರು ಅನುವಾದಿತ 'ಪಾರ್ಟಿ' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಂಗಭೂಮಿ ಜನರ ಸುಖ–ದುಃಖವನ್ನು ಪ್ರತಿಬಿಂಬಿಸುವ ಜೀವಂತ ಕ್ಷೇತ್ರವಾಗಿದ್ದು, ಇದನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ರಂಗಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಂಗಭೂಮಿಯಲ್ಲಿ ಜನಪರ ಚಿಂತನೆ, ಸಾಂಸ್ಕೃತಿಕ ಹೊಣೆಗಾರಿಕೆ ಆಧಾರಿತ ನಾಟಕಗಳು ಹೆಚ್ಚು ಪ್ರದರ್ಶನ ಕಾಣಬೇಕು. ಈ ನಿಟ್ಟಿನಲ್ಲಿ ನಿರಂತರ ಫೌಂಡೇಶನ್ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದೆ. ಪಾರ್ಟಿ ನಾಟಕವನ್ನು ಹಿರಿಯ ರಂಗಕರ್ಮಿ ಚಿದಂಬರರಾವ್ ಜಂಬೆ ಅವರು ಮನೋಜ್ಞವಾಗಿ ನಿರ್ದೇಶಿಸಿದ್ದಾರೆ. ಇಂದಿನ ಸಮಾಜದಲ್ಲಿನ ಚಟುವಟಿಕೆಗಳೇ ಈ ನಾಟಕದ ಕಥಾವಸ್ತುವಾಗಿರುವುದು ಉತ್ತಮ ಸಂಗತಿ ಎಂದರು.

ರಂಗಭೂಮಿ ಕ್ಷೇತ್ರದಲ್ಲಿ ಕಳೆದ ಐದು ದಶಕಗಳ ಪ್ರಾವಿಣ್ಯತೆ ಹೊಂದಿರುವ ಜಂಬೆ ಅವರು, ರಂಗಾಯಣ ನಿರ್ದೇಶಕರಾಗಿ, ನಿನಾಸಂ, ಸಾಣೆಹಳ್ಳಿ ರಂಗಶಾಲೆಗಳಲ್ಲಿ ಕೆಲಸ ಮಾಡಿದ್ದಾರೆ. ಆ ವೇಳೆ ನೂರಾರು ಕಲಾವಿದರನ್ನು ಸೃಷ್ಟಿಸಿದ್ದಾರೆ. ಪಾರ್ಟಿ ನಾಟಕದ ಪಾತ್ರಗಳಲ್ಲೂ ಅವರ ಅಪಾರ ಅನುಭವವನ್ನು ಗುರುತಿಸಬಹುದು ಎಂದು ಹೇಳಿದರು.

ಈ ವೇಳೆ ಹಿರಿಯ ಕಲಾವಿದರಾದ ರಾಮೇಶ್ವರಿ ವರ್ಮಾ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ನಿರಂತರ ಸಂಸ್ಥೆಯ ಎಂ.ಎಂ.ಸುಗುಣ, ನಿವೃತ್ತ ಪ್ರಾಂಶುಪಾಲ ಪ್ರೊ.ಕಾಳಚನ್ನೇಗೌಡ, ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ, ಲೇಖಕ ವಡ್ಡಗೆರೆ ಚಿನ್ನಸ್ವಾಮಿ, ರತ್ನ ಮಿರ್ಲೆ, ನಿರಂತರ ಶ್ರೀನಿವಾಸ್, ಡಾ.ರೇಖಾ, ರಘುರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಅಮೆರಿಕದ ಬಲಿಷ್ಠ ಫೈಟರ್ ಜೆಟ್ ಹೊಡೆದುರುಳಿಸಿದ ಇರಾನ್

ವಿಮಾನದಿಂದ ಧುಮುಕಿದ ಪೈಲಟ್‌ಗಾಗಿ ಶೋಧ; ಬಹುಮಾನ ಘೋಷಣೆ

ಟೆಹ್ರಾನ್, ಏ.3– ಅಮೆರಿಕದ ಯುದ್ಧ ವಿಮಾನದ ಒಬ್ಬ ಪೈಲಟ್ ನೈರುತ್ಯ ಇರಾನ್‌ನಲ್ಲಿ ವಿಮಾನದಿಂದ ಪ್ಯಾರಶೂಟ್ ಮೂಲಕ ಹೊರಬಿದ್ದಿದ್ದಾನೆ ಎಂದು ಇರಾನ್ ಮಾಧ್ಯಮಗಳನ್ನು ಉಲ್ಲೇಖಿಸಿ ಎಪಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಸ್ಥಳೀಯ ಇರಾನಿಯನ್ ವಾಹಿನಿಯ ಒಬ್ಬ ನಿರೂಪಕ ಪ್ರಕಟಣೆ ಓದಿ, ಶತ್ರು ಪೈಲಟ್ ಅಥವಾ ಪೈಲಟ್‌ಗಳನ್ನು ಜೀವಂತವಾಗಿ ಬಂಧಿಸಿ ಪೊಲೀಸ್ ಅಥವಾ ಸೈನಿಕರಿಗೆ ಒಪ್ಪಿಸಿದರೆ, ನಿಮಗೆ ಮೌಲ್ಯವಾದ ಬಹುಮಾನ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಬೇರೆ ಒಂದು ಸ್ಕ್ರೋಲ್ ಸಂದೇಶದಲ್ಲಿ ಜನರಿಗೆ ಅವರನ್ನು ನೋಡಿದರೆ ಗುಂಡಿಕ್ಕಿ ಎಂದು ಕರೆ ನೀಡಲಾಗಿದೆ. ಇರಾನ್‌ನ ಸರ್ಕಾರಿ ಪ್ರಸಾರ ಸಂಸ್ಥೆ ಐಆರ್‌ಐಬಿ ಕೂಡ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಅಪಘಾತ ಸ್ಥಳದತ್ತ ನಾಗರಿಕರು ಖಾಸಗಿ ಕಾರುಗಳಲ್ಲಿ ತೆರಳುತ್ತಿರುವುದಾಗಿ ತಿಳಿಸಿದೆ.

ನೈರುತ್ಯ ಇರಾನ್‌ನ ಅನೇಕ ಜನರು ಅಮೆರಿಕನ್ ಯುದ್ಧ ವಿಮಾನ ಪತನಗೊಂಡ ಪ್ರದೇಶದ ಸುತ್ತಮುತ್ತ ಖಾಸಗಿ ಕಾರುಗಳಲ್ಲಿ ತೆರಳಿ ಅಮೆರಿಕನ್ ಪೈಲಟ್‌ನ್ನು ಬಂಧಿಸಲು ಪ್ರಯತ್ನಿಸುತ್ತಿದ್ದಾರೆ. ಪೈಲಟ್ ಜೊತೆ ಯಾರೂ ಅನುಚಿತವಾಗಿ ವರ್ತಿಸಬಾರದು ಎಂದು ಇರಾನ್ ಸಶಸ್ತ್ರ ಪಡೆಗಳು ಜನರಿಗೆ ಮನವಿ ಮಾಡಿವೆ ಎಂದು ಮಾಧ್ಯಮಗಳು ವರದಿ ಪ್ರಕಟಿಸಿವೆ.

ಎಫ್–35 ಮತ್ತು ಎಫ್–15 ಹೊಡೆದುರುಳಿಸಿದ್ದೇವೆ: ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಕೇಂದ್ರ ಇರಾನ್ ಮೇಲೆ ಹಾರುತ್ತಿದ್ದ ಒಂದು ಎಫ್–35 ಸ್ಟೆಲ್ತ್ ಯುದ್ಧ ವಿಮಾನವನ್ನು ಹೊಡೆದುರುಳಿಸಿದೆ ಎಂದು ಇರಾನಿಯನ್ ಮಾಧ್ಯಮಗಳು ಹೇಳಿವೆ. ಇರಾನ್‌ನ ತಸ್ನೀಮ್ ಸುದ್ದಿ ಸಂಸ್ಥೆ, ಅಮೆರಿಕನ್ ಜೆಟ್ ಅವಶೇಷಗಳೆಂದು ಹೇಳಲಾದ ಚಿತ್ರಗಳನ್ನು ಪ್ರಕಟಿಸಿ, ಪೈಲಟ್ ಬದುಕಿರುವ ಸಾಧ್ಯತೆ ಕಡಿಮೆ ಎಂದು ವರದಿ ಮಾಡಿದೆ.

ಐಆರ್‌ಐಬಿ ಪ್ರತ್ಯೇಕವಾಗಿ, ಬ್ರಿಟನ್‌ನ ಆರ್‌ಎಎಫ್ ಲೇಕನ್‌ಹೀತ್ ಠಾಣದಲ್ಲಿ ನೆಲೆಯೂರಿರುವ 494ನೇ ಫೈಟರ್ ಸ್ಕ್ವಾಡ್ರನ್‌ಗೆ ಸೇರಿದ ಎಫ್–15ಇ ಸ್ಟ್ರೈಕ್ ಈಗಲ್ ವಿಮಾನವನ್ನೂ ಹೊಡೆದುರುಳಿಸಲಾಗಿದೆ ಎಂದು ಹೇಳಿದೆ ತೋಗಲಿನ ಅವಶೇಷಗಳು ವಿಮಾನ ಪತನವನ್ನು ದೃಢಪಡಿಸುತ್ತವೆ. ಪೈಲಟ್‌ಗಳ ಭವಿಷ್ಯ ಇನ್ನೂ ಸ್ಪಷ್ಟವಾಗಿಲ್ಲ ಎಂದು ಅದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ದೇಶ - ವಿದೇಶ

ಬಂದೂಕು ತೋರಿಸಿ ಚಿನ್ನಾಭರಣ ಕದ್ದೊಯ್ದ ಬುರ್ಖಾಧಾರಿ ಮಹಿಳೆ

ಉತ್ತರ ಪ್ರದೇಶ: ಬುರ್ಖಾ ಧರಿಸಿದ್ದ ಮಹಿಳೆ ಬಂದೂಕು ತೋರಿಸಿ ಚಿನ್ನಾಭರಣದ ಅಂಗಡಿಯಲ್ಲಿ ನೆಕ್ಲೆಸ್ ಕದ್ದೊಯ್ದಿರುವ ಘಟನೆ ಉತ್ತರ ಪ್ರದೇಶದ ಅಯೋಧ್ಯಾದಲ್ಲಿ ನಡೆದಿದೆ.

ಈ ಘಟನೆಯು ಗುರುವಾರ(ಏ.2) ಮಧ್ಯಾಹ್ನ ಸುಮಾರು 2 ಗಂಟೆ ಸಮಯದಲ್ಲಿ ನಡೆದಿದ್ದು, ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವ ಈ ದರೋಡೆಯ ವಿಡಿಯೋ ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಬುರ್ಖಾ ಧರಿಸಿ ಅಂಗಡಿಯನ್ನು ಪ್ರವೇಶಿಸಿದ ಮಹಿಳೆ ಕೌಂಟರ್ ಮೇಲೆ ಇರಿಸಿದ್ದ ಒಂದು ಚಿನ್ನದ ನೆಕ್ಲೆಸ್ ಅನ್ನು ಕೈಯಿಂದ ಬಾಚಿಕೊಂಡಿದ್ದಾಳೆ. ಇದರಿಂದ ಸ್ವಲ್ಪ ಆತಂಕಗೊಂಡ ಮಾಲೀಕ ಏರು ಧ್ವನಿಯಲ್ಲಿ ಮಾತನಾಡುತ್ತಿದ್ದಂತೆ ಬುರ್ಖಾದಲ್ಲಿ ಬಚ್ಚಿಟ್ಟುಕೊಂಡಿದ್ದ ಬಂದೂಕನ್ನು ಮಾಲೀಕನಿಗೆ ತೋರಿಸಿ ಅಲ್ಲಿಂದ ಪರಾರಿಯಾಗಿದ್ದಾಳೆ.

ನಂತರ ಅಂಗಡಿ ಮಾಲೀಕ ರುಡೌಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನನ್ವಯ ಕದ್ದೊಯ್ದ ನೆಕ್ಲೆಸ್ ಸುಮಾರು 26 ಗ್ರಾಂ ಇದ್ದು, ಇದರ ಬೆಲೆ 3,80,000 ಎಂದು ನಮೂದಿಸಲಾಗಿದೆ. ಪ್ರಕರಣವನ್ನು ದಾಖಲಿಸಿಕೊಂಡಿರುವ ಪೊಲೀಸರು ಸಿಸಿಟಿವಿ ಫೂಟೇಜ್ ಮೂಲಕ ಕಳ್ಳಿಯ ಪತ್ತೆಗೆ ಕ್ರಮ ವಹಿಸಿದ್ದಾರೆ.

ತಮಿಳುನಾಡು ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ; ಅಣ್ಣಾಮಲೈಗೆ ಶಾಕ್




ಚೆನ್ನೈ: ಏಪ್ರಿಲ್‌ನಲ್ಲಿ ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಅಣ್ಣಾಮಲೈಗೆ ನಿರಾಸೆಯಾಗಿದೆ.

ನವದೆಹಲಿಯಲ್ಲಿರುವ ಪಕ್ಷದ ಪ್ರಧಾನ ಕಚೇರಿಯಿಂದ ಬಿಡುಗಡೆಯಾದ ಪಟ್ಟಿಯಲ್ಲಿ ಹಲವಾರು ಪ್ರಮುಖ ನಾಯಕರುಗಳ ಹೆಸರಿದ್ದು, ರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ಬಲಪಡಿಸುವ ಉದ್ದೇಶದಿಂದ ಗೆಲ್ಲುವ ಅಭ್ಯರ್ಥಿಗಳನ್ನು ಬಿಜೆಪಿ ಆಯ್ಕೆ ಮಾಡಿದೆ.

ಆದರೆ ಇಂದು ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ತಮಿಳುನಾಡು ಬಿಜೆಪಿ ಮುಖ್ಯಸ್ಥ ಅಣ್ಣಾಮಲೈ ಅವರಿಗೆ ಟಿಕೆಟ್ ನೀಡದೆ, ಶಾಕ್ ನೀಡಿದೆ. ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಬಿಜೆಪಿಯಿಂದ ಹಾಲಿ ಶಾಸಕಿ ವನತಿ ಶ್ರೀನಿವಾಸನ್ ಪ್ರತಿನಿಧಿಸುವ ಕೊಯಮತ್ತೂರು (ಉತ್ತರ) ಕ್ಷೇತ್ರವನ್ನು ಬಯಸುತ್ತಿದ್ದಾರೆಂದು ಹೇಳಲಾಗಿತ್ತು. ಆದರೆ ಬಿಜೆಪಿ ಇಂದು ಪ್ರಕಟಿಸಿದ ಅಂತಿಮ ಅಭ್ಯರ್ಥಿ ಪಟ್ಟಿಯಲ್ಲಿ ಅವರ ಹೆಸರಿಲ್ಲ. ಕೇಂದ್ರ ಸಚಿವ ಎಲ್.ಮುರುಗನ್ ಅವರನ್ನು ಅವಿನಾಶಿ(ಎಸ್‌ಸಿ) ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ, ತೆಲಂಗಾಣದ ಮಾಜಿ ರಾಜ್ಯಪಾಲೆ ತಮಿಳಿಸೈ ಸೌಂದರರಾಜನ್ ಮೈಲಾಪುರ ಸ್ಥಾನದಿಂದ ಸ್ಪರ್ಧಿಸಲಿದ್ದಾರೆ. ಬಿಜೆಪಿ ಅನುಭವಿ ಮತ್ತು ಜನಪ್ರಿಯ ನಾಯಕರಿಗೆ ನಿರ್ಣಾಯಕ ಕ್ಷೇತ್ರಗಳಲ್ಲಿ ಟಿಕೆಟ್ ನೀಡುವ ಮೂಲಕ ಕಾರ್ಯತಂತ್ರ ರೂಪಿಸುತ್ತಿದೆ.


ಎಸ್‌ಐಆರ್ ಸಿಬ್ಬಂದಿಗೆ ದಿಗ್ಬಂಧನ ಪ್ರಕರಣ; ಮಾಸ್ಟರ್‌ಮೈಂಡ್ ಬಂಧನ



ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಏಳು ಜನ ಎಸ್‌ಐಆರ್ ಅಧಿಕಾರಿಗಳನ್ನು ಸುಮಾರು ಒಂಬತ್ತು ಗಂಟೆಗಳ ಕಾಲ ದಿಗ್ಬಂಧನದಲ್ಲಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎಐಎಂಐಎಂ ನಾಯಕ ಮೊಫಕ್ಕೆರುಲ್ ಇಸ್ಲಾಂರನ್ನು ಪಶ್ಚಿಮ ಬಂಗಾಳ ಪೊಲೀಸರು ಶುಕ್ರವಾರ ಬಂಧಿಸಿರುವುದಾಗಿ ವರದಿಯಾಗಿದೆ. ಪ್ರಕರಣ ಗಂಭೀರ ಸ್ವರೂಪ ಪಡೆದ ಹಿನ್ನೆಲೆಯಲ್ಲಿ ರಾಜ್ಯದಿಂದ ಪಲಾಯನ ಮಾಡಲು ಯತ್ನಿಸುತ್ತಿದ್ದ ಇಸ್ಲಾಂನನ್ನು ಬಾಗ್ಡೋಗ್ರಾ ವಿಮಾನ ನಿಲ್ದಾಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಾಲ್ಡಾ ಜಿಲ್ಲೆಯ ಕಲಿಯಾಚಕ್‌ನಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಭಾಗವಾಗಿ ಮತದಾರರ ಪಟ್ಟಿಯಿಂದ ಲಕ್ಷಾಂತರ ಹೆಸರುಗಳನ್ನು ಅಳಿಸಿಹಾಕುತ್ತಿರುವುದನ್ನು ವಿರೋಧಿಸಿ ಬೃಹತ್ ಪ್ರತಿಭಟನೆ ಭುಗಿಲೆದ್ದಿತು. ಪ್ರತಿಭಟನಾಕಾರರು ಮೊದಲು ನ್ಯಾಯಾಂಗ ಅಧಿಕಾರಿಗಳೊಂದಿಗೆ ಚರ್ಚಿಸಲು ಕೋರಿದ್ದರು. ಇದಕ್ಕೆ ಅಧಿಕಾರಿಗಳು ಒಪ್ಪದಿದ್ದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿ, ಸಂಜೆ 4 ಗಂಟೆ ಸುಮಾರಿಗೆ ಬಿಡಿಒ ಕಚೇರಿಗೆ ಮುತ್ತಿಗೆ ಹಾಕಿದ ಗುಂಪು, ಅಧಿಕಾರಿಗಳನ್ನು ಹೊರಬರದಂತೆ ತಡೆದು ಒತ್ತೆಯಾಳಾಗಿ ಇರಿಸಿಕೊಂಡಿತು ಎನ್ನಲಾಗಿದೆ. ಈ ಘಟನೆಯ ಹಿಂದೆ ಮೊಫಕ್ಕೆರುಲ್ ಇಸ್ಲಾಂ ಅವರ ಕೈವಾಡವಿದ್ದು, ಇವರೇ ಈ ಕೃತ್ಯದ ಮಾಸ್ಟರ್ ಮೈಂಡ್ ಎಂದು ಪೊಲೀಸರು ತಿಳಿಸಿದ್ದಾರೆ.

ಅಮೆರಿಕ ಸೇನಾ ಮುಖ್ಯಸ್ಥ ರ್‍ಯಾಂಡಿ ಜಾರ್ಜ್ ವಜಾ!



ವಾಷಿಂಗ್ಟನ್ ಡಿಸಿ: ಮಧ್ಯಪ್ರಾಚ್ಯದಲ್ಲಿ ಭೀಕರ ಯುದ್ಧ ಮುಂದುವರೆದಿರುವುದರ ನಡುವೆ ಅಮೆರಿಕದ ರಕ್ಷಣಾ ಕೇಂದ್ರ ಪೆಂಟಗನ್‌ನಲ್ಲಿ ಭಾರೀ ಗೊಂದಲಗಳು ಸೃಷ್ಟಿಯಾಗಿದೆ.

ಯುದ್ಧದ ತಂತ್ರಗಾರಿಕೆ ಹೆಣೆಯಬೇಕಿದ್ದ ಅಮೆರಿಕದ ಸೇನಾ ಮುಖ್ಯಸ್ಥ ಜನರಲ್ ರ್‍ಯಾಂಡಿ ಜಾರ್ಜ್ ಅವರನ್ನು, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ದಿಢೀರನೆ ಸೇವೆಯಿಂದ ವಜಾಗೊಳಿಸಿದ್ದಾರೆ.

ಇರಾನ್ ಮೇಲೆ 2–3 ವಾರಗಳಲ್ಲಿ ಭೀಕರ ದಾಳಿ ಮಾಡುವುದಾಗಿ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ ಈ ದಾಳಿಗಳನ್ನು ಯೋಜಿಸಬೇಕಾದ ಸೇನಾ ಮುಖ್ಯಸ್ಥರನ್ನೇ ಪೀಟ್ ಹೆಗ್ಸೆತ್ ತಕ್ಷಣದಿಂದ ಜಾರಿಗೆ ಬರುವಂತೆ ವಜಾಗೊಳಿಸಿರುವುದು ಕುತೂಹಲ ಸೃಷ್ಟಿಸಿದೆ. ಕೇವಲ ರ್‍ಯಾಂಡಿ ಜಾರ್ಜ್ ಮಾತ್ರವಲ್ಲದೇ, ಆರ್ಮಿ ಟ್ರಾನ್ಸ್‌ಫಾರ್ಮೇಶನ್ ಮತ್ತು ಟ್ರೈನಿಂಗ್ ಕಮಾಂಡ್ ಮುಖ್ಯಸ್ಥ ಜನರಲ್ ಡೇವಿಡ್ ಹಾಡ್ನೆ ಹಾಗೂ ಆರ್ಮಿ ಚಾಪ್ಲಿನ್ ಕಾರ್ಪ್ಸ್ ಮುಖ್ಯಸ್ಥ ಮೇಜರ್ ಜನರಲ್ ವಿಲಿಯಂ ಗ್ರೀನ್ ಜೂನಿಯರ್ ಅವರನ್ನೂ ಹೊರಗೆ ಕಳುಹಿಸಲಾಗಿದೆ.

ಜನರಲ್ ರ್‍ಯಾಂಡಿ ಜಾರ್ಜ್ ಅವರ ಅಧಿಕಾರಾವಧಿ 2027ರಲ್ಲಿ ಪೂರ್ಣಗೊಳ್ಳಬೇಕಿತ್ತು. ಆದರೆ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರು ರ್‍ಯಾಂಡಿ ಅವರನ್ನು ತಕ್ಷಣವೇ ರಾಜೀನಾಮೆ ನೀಡಿ ನಿವೃತ್ತರಾಗುವಂತೆ ಸೂಚಿಸಿದ್ದಾರೆ.

33 ವರ್ಷಗಳ ಬಳಿಕ ಒಂದಾದ ಚೀನಾದ ಅಕ್ಕ–ತಮ್ಮ



ಬೀಜಿಂಗ್: ಕೇವಲ ಒಂದು ತುಂಡು ಬ್ರೆಡ್‌ಗಾಗಿ ತನ್ನ ಕಣ್ಣೆದುರೇ ಕಳೆದುಹೋದ ತಮ್ಮನನ್ನು ಹುಡುಕಲು ಸಹೋದರಿ ನಡೆಸಿದ ಹೋರಾಟ ಅಂತಿಮವಾಗಿ 33 ವರ್ಷಗಳ ನಂತರ ಸುಖಾಂತ್ಯ ಕಂಡಿದೆ. ಹರಿದು ಹೋದ ಒಂದು ಹಳೆಯ ಫೋಟೋ ಹಿಡಿದು ಚೀನಾದ ಎಲ್ಲೆಡೆ ಅಲೆದಾಡಿದ ಆಕೆಯ ಶ್ರಮಕ್ಕೆ ಇದೀಗ ಪ್ರತಿಫಲ ಸಿಕ್ಕಿದೆ.

ಲೀ ಲಿನ್(44) ಮತ್ತು ಆಕೆಯ ಸಹೋದರ ಲೀ ಕ್ಸಿನ್ ಬಾಲ್ಯದಲ್ಲೇ ಅನಾಥರಾದವರು. 11 ವರ್ಷದ ಲೀ ಲಿನ್ ಮತ್ತು 7 ವರ್ಷದ ತಮ್ಮ ಲೀ ಕ್ಸಿನ್ ಹೊಟ್ಟೆಪಾಡಿಗಾಗಿ ರಸ್ತೆಯಲ್ಲಿ ಕಸ ಆಯುವ ಕೆಲಸ ಮಾಡುತ್ತಿದ್ದರು. ಒಂದು ದಿನ ಮಳೆಯಿಂದ ರಕ್ಷಣೆ ಪಡೆಯಲು ಇಬ್ಬರೂ ನಿಂತಿದ್ದ ಲಾರಿಯೊಂದರಲ್ಲಿ ಆಕಸ್ಮಿಕವಾಗಿ ಅಪರಿಚಿತ ನಗರಕ್ಕೆ ತಲುಪಿದರು. ಅಲ್ಲಿ ಹಸಿವಿನಿಂದ ಕಂಗೆಟ್ಟಿದ್ದ ಈ ಮಕ್ಕಳಿಗೆ ಮಹಿಳೆಯೊಬ್ಬಳು ಬ್ರೆಡ್ ನೀಡುವುದಾಗಿ ಆಮಿಷ ಒಡ್ಡಿ, ಬಾಲಕನನ್ನು ಅಪಹರಿಸಿದ್ದಳು. ಮಾಧ್ಯಮಗಳ ಮುಂದೆ ಹೇಳಿಕೊಳ್ಳುವ ಮೂಲಕ ಶುರುವಾದ ಲೀ ಲಿನ್ ಹುಡುಕಾಟ ನಿಲ್ಲಲೇ ಇಲ್ಲ. ತನ್ನ ಇಡೀ ಜೀವನದ ಗಳಿಕೆ ಸುಮಾರು 1 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ತಮ್ಮನ ಹುಡುಕಾಟಕ್ಕಾಗಿ ಖರ್ಚು ಮಾಡಿದ್ದಾರೆ. ಜಿಯಾಂಗ್ಕ್ಸಿ

ಅಧಿಕಾರದ ರುಚಿ ನೋಡಿರುವ ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಗದ್ದುಗೆ ಬಿಟ್ಟುಕೊಡಲ್ಲ

ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ಸಿದ್ದರಾಮ್ಮಯ್ಯಗೆ ಇಲ್ಲ : ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ

ಪಾಂಡವಪುರ, ಏ.3– ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಕಿಡಿಕಾರಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಅಧಿಕಾರದ ರುಚಿ ನೋಡಿರುವ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂದರು.

ತಾಲೂಕಿನ ಟಿ.ಎಸ್.ಛತ್ರ ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಸರಕಾರಿ ಶಾಲೆಯ ಕಟ್ಟಡ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರ ರೊಂದಿಗೆ ಮಾತನಾಡಿದರು.


ಟಿ.ಎಸ್.ಛತ್ರ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿ ಇರುವ ಸರಕಾರಿ ಪ್ರೌಢಶಾಲೆಯ ಕಟ್ಟಡ ಕಾಮಗಾರಿಯನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವೀಕ್ಷಿಸಿದರು.

ಸಿದ್ದರಾಮಯ್ಯ ಅವರ ಮೊದಲ ಮಗ ಇದ್ದಾಗ ಅವರನ್ನು ಬೆಳೆಸಿದ್ದು, ಆತನ ಅಕಾಲಿಕ ಮರಣದ ನಂತರ ಅವರ ಎರಡನೇ ಮಗನನ್ನು ಬೆಳೆಸುತ್ತಿದ್ದಾರೆ. ಯಾತಕ್ಕಾಗಿ ತಮ್ಮ ಎರಡನೇ ಮಗನಿಗೆ ಅಧಿಕಾರ ಕೊಟ್ಟು ಕೂರಿಸಿದ್ದೀರಿ, ನಿಮ್ಮ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕುಟುಂಬದಲ್ಲಿ ಕುಟುಂಬ ರಾಜಕೀಯ ಇಲ್ಲವೇ? ಅವರ ಕುಟುಂಬದಲ್ಲಿ ಹಲವು ಮಂದಿ ರಾಜಕೀಯದಲ್ಲಿದ್ದಾರೆ. ಇದೀಗ ಅವರ ಕುಟುಂಬದ ಸದಸ್ಯರನ್ನು ಕೆಎಂಎಫ್ ಅಧ್ಯಕ್ಷರನ್ನಾಗಿ ಮಾಡಲು ಹೊರಟಿದ್ದಾರೆ. ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬದ ಎರಡು–ಮೂರು ಮಂದಿ ಶಾಸಕರಾಗಿರುವ ಕುಟುಂಬಗಳಿಲ್ಲವೇ? 2018ರಲ್ಲಿ ದೇವೇಗೌಡರು ನನ್ನ ಮಗನನ್ನು ಮುಖ್ಯಮಂತ್ರಿ ಮಾಡಿ ಎಂದು ಅರ್ಜಿ ಹಿಡಿದುಕೊಂಡು ಹೋಗಿದ್ರ . ಹೀಗಿರುವಾಗ ನನ್ನ ಕುಟುಂಬದ ಕುಟುಂಬ ರಾಜಕೀಯದ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ ಎಂದು ಹರಿಹಾಯ್ದರು.

ಮುಖ್ಯಮಂತ್ರಿ ಅಧಿಕಾರದ ರುಚಿ ನೋಡಿರುವ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡೋದಿಲ್ಲ. 2013ರ ಚುನಾವಣೆಯ ವೇಳೆ ಇದೇ ನನ್ನ ಕೊನೆಯ ಚುನಾವಣೆ ಎಂದು ಹೇಳಿದ್ದರು. ಇದೀಗ ಕೊನೆಯವರೆಗೂ ಚುನಾವಣಾ ರಾಜಕೀಯದಿಂದ ದೂರ ಆಗೋದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಬಿಜೆಪಿ ಆಡಳಿತದ ಬಗ್ಗೆ ಆರೋಪಿಸುವ ಸಿದ್ದರಾಮಯ್ಯ ಅವರು ಇವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ ಬಳಿಕ 2018ರ ಚುನಾವಣೆಗೆ ಹೋದಂತಹ ಸಂದರ್ಭದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯನ್ನು ದಿವಾಳಿ ಮಾಡಿದ್ದರು. ಆರ್ಥಿಕ ಸಂಕಷ್ಟದ ನಡುವೆಯೂ ಆ ನಂತರ ಮುಖ್ಯಮಂತ್ರಿಯಾದ ನಾನು ಆಡಳಿತ ನಡೆಸಲು ಎಷ್ಟು ಕಷ್ಟವಾಯಿತು, ರಾಜ್ಯದ ರೈತರ ಸಾಲಮನ್ನಾ ಮಾಡಿ ಆಡಳಿತ ನಡೆಸಿದ್ದೇನೆ ಎಂದು ಗುಡುಗಿದರು.

ಉಪ ಚುನಾವಣೆ ಹಿನ್ನೆಲೆಯಲ್ಲಿ 4ರಂದು ಸಂಜೆ ದಾವಣಗೆರೆಗೆ ಹೋಗುತ್ತಿದ್ದೇನೆ, 5ರಂದು ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆ ಪ್ರಚಾರದಲ್ಲಿ ಭಾಗವಹಿಸುತ್ತಿದ್ದೇನೆ, 6ರಂದು ಮಂಡ್ಯದಲ್ಲಿ ದಿಶಾ ಕಮಿಟಿ ಸಭೆ ನಡೆಸಲಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಎಆರ್‌ಐ ಸಂಸ್ಥೆಯನ್ನು ಮಂಡ್ಯಕ್ಕೆ ತರಬೇಕು ಎನ್ನುವುದು ನನ್ನ ಕನಸ್ಸಾಗಿದೆ. ಅದಕ್ಕೆ ಸಂಬಂಧಿಸಿದಂತೆ ನನ್ನ ಇಲಾಖೆಯಿಂದ ಟೆಕ್ನಿಕಲಿ ಎಲ್ಲಾ ಕೆಲಸವನ್ನು ಪೂರ್ಣಗೊಳಿಸಲಾಗಿದೆ. ಈಗಾಗಲೆ ಅಧಿಕಾರಿಗಳ ತಂಡ ಸ್ಥಳಕ್ಕೆ ಆಗಮಿಸಿ ಭೂಮಿ ಪರಿಶೀಲನೆ ಸಹ ನಡೆಸಿದೆ. ಈ ಕುರಿತು ಅದರ ವರದಿಯನ್ನು ಜಿಲ್ಲಾಧಿಕಾರಿಗಳು ಸರಕಾರಕ್ಕೆ ತಿಳಿಸಬೇಕು, ಅದು ಸರಕಾರದ ಕ್ಯಾಬಿನೆಟ್‌ನಲ್ಲಿ ಅನುಮೋದನೆಯಾಗಬೇಕು, ಆ ಕೆಲಸ ಎಲ್ಲಿಗೆ ಬಂದಿದೆ ಎನ್ನುವುದನ್ನು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಬೇಕು, ಈಗಾಗಲೆ ಎಆರ್‌ಐ ಸ್ಥಾಪನೆಗಾಗಿ 750 ಕೋಟಿ ಅನುದಾನವನ್ನು ಸಹ ಮೊದಲ ಹಂತದಲ್ಲಿ ಬಿಡುಗಡೆ ಮಾಡಿಸಲಾಗುವುದು, ಎಆರ್‌ಐ ಸಂಸ್ಥೆಯೂ ಆರಂಭಗೊಂಡರೆ ಜಿಲ್ಲೆಯ 25 ಸಾವಿರ ಮಂದಿಗೆ ಉದ್ಯೋಗ ದೊರೆಯುತ್ತದೆ ಎಂದರು.

ಪಾಂಡವಪುರ ಪಟ್ಟಣದ ಬೈಪಾಸ್ ವಿಚಾರವಾಗಿ ಈಗಾಗಲೆ ಕೇಂದ್ರ ಲೋಕೋಪಯೋಗಿ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಚರ್ಚಿಸಿದ್ದೇನೆ, ಸ್ವಲ್ಪ ತಾಂತ್ರಿಕ ಸಮಸ್ಯೆ ಇರುವುದರಿಂದ ಸ್ವಲ್ಪ ತಡವಾಗಿದೆ. ಈ ಸಂಬಂಧವಾಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ನಿರಂತರವಾಗಿ ಸಂಪರ್ಕದಲ್ಲಿದ್ದಾರೆ. ಈ ವಿಚಾರವಾಗಿ ಪ್ರಧಾನಿ ನರೇಂದ್ರಮೋದಿ ಅವರೊಂದಿಗೆ ಚರ್ಚಿಸಲಾಗುವುದು ಎಂದು ಉತ್ತರಿಸಿದರು.

ಟಿ.ಎಸ್.ಛತ್ರ ಗ್ರಾಮವು ಮೂರು ಮಂದಿ ನ್ಯಾಯಾಧೀಶರನ್ನು ಕೊಟ್ಟಿದೆ. ಸಿ.ಎಸ್.ಪುಟ್ಟರಾಜು ಶಾಸಕರಾಗಿದ್ದಾಗ ಈ ಗ್ರಾಮಕ್ಕೆ ಅವರು ಸರಕಾರಿ ಪ್ರೌಢಶಾಲೆ ಮಂಜೂರು ಮಾಡಿಸಿದರು. ಇದೀಗ ಆ ಶಾಲೆಯ ಹೊಸಕಟ್ಟಡವನ್ನು ನಿರ್ಮಾಣ ಮಾಡಿಸಿದ್ದಾರೆ. ಆ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಎರಡು ಕೋಟಿಯಷ್ಟು ಹಣದ ಅವಶ್ಯಕತೆ ಇರುವುದರಿಂದ ಮುಂದಿನ ದಿನಗಳಲ್ಲಿ ಅವರ ಜತೆಗೂಡಿ ಶಾಲಾಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ರವಿ, ಎಚ್.ಮಂಜುನಾಥ್, ಮನ್‌ಮುಲ್ ನಿರ್ದೇಶಕರಾದ ಸಿ.ಶಿವಕುಮಾರ್, ರಾಮಚಂದ್ರು, ಡಾಲು ರವಿ, ಜೆಡಿಎಸ್ ಕಾರ್ಯಕಾರಿ ಸಮಿತಿ ಸದಸ್ಯ ಪುಟ್ಟೇಗೌಡ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಅನುಪಮ, ಅಧಿಕಾರಿಗಳು ಹಾಜರಿದ್ದರು.

ಮಾನವೀಯತೆ ಮೆರೆದ ಸಿಎಸ್‌ಪಿ ಅಣ್ಣನ ಮಗ

ಪಾಂಡವಪುರ, ಏ.3– ಬೈಕ್‌ಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ ತೀವ್ರವಾಗಿ ಗಾಯಗೊಂಡು ಬಿದ್ದಿದ್ದ ಮಹಿಳೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಣ್ಣನ ಮಗ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸಿ ಕೊಡುವ ಮೂಲಕ ಮಾನವೀಯತೆ ಮೆರೆದ ಘಟನೆ ತಾಲೂಕಿನ ಟಿ.ಎಸ್.ಛತ್ರ ಗ್ರಾಮದ ಸಮೀಪ



ಶುಕ್ರವಾರ ಸಂಜೆ ನಡೆದಿದೆ. ಟಿ.ಎಸ್.ಛತ್ರ ಗ್ರಾಮದ ಬಳಿ ಜಕ್ಕನಹಳ್ಳಿ ಕಡೆಯಿಂದ ಬರುತ್ತಿದ್ದ ಬೈಕ್ ಮತ್ತೊಬ್ಬ ಬೈಕ್ ಸವಾರ ಅಡ್ಡ ಬಂದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ದರಸಗುಪ್ಪೆ ಗ್ರಾಮದ ನಿವಾಸಿಗಳಾದ ಅಮ್ಮ ಮಗ ಹಾಗೂ ಅಡ್ಡಲಾಗಿ ಬಂದ ಮತ್ತೊಬ್ಬ ಬೈಕ್ ಸವಾರ ಮೂವರಿಗೂ ತೀವ್ರ ಗಾಯವಾಗಿತ್ತು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಕಾರ್ಯಕ್ರಮ ಮುಗಿಸಿ ಅದೇ ರಸ್ತೆಯಲ್ಲಿ ಬರುತ್ತಿದ್ದ ಜಿಪಂಮಾಜಿ ಸದಸ್ಯ ಸಿ.ಅಶೋಕ್, ಸೋದರ ಮನ್ ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರು ಕಾರು ನಿಲ್ಲಿಸಿ ಗಾಯಾಳುಗಳನ್ನು ಸಮಾಧಾನಪಡಿಸಿ ಕುಡಿಯಲು ನೀರು ಕೊಟ್ಟು ಧೈರ್ಯ ತುಂಬಿದರು. ಬಳಿಕ ಅಲ್ಲಿಯೇ ಇದ್ದ ರಾಜ್ಯ ರೈತಸಂಘ(ರೈತಬಣ)ದ ರಾಜ್ಯಾಧ್ಯಕ್ಷ ಕೃಷ್ಣ ಅವರ ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಶ್ರೀ ಚೆಲುವನಾರಾಯಣ ಸ್ವಾಮಿಯ ಮಹಾಭಿಷೇಕದಲ್ಲಿ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಭಾಗಿ

ಪಾಂಡವಪುರ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಶುಕ್ರವಾರ ಮೇಲುಕೋಟೆಗೆ ಆಗಮಿಸಿ ವೈರಮುಡಿ ಜಾತ್ರಾ ಮಹೋತ್ಸವ ಮುಕ್ತಾಯವಾದ ಮರುದಿನ ನಡೆದ ಶ್ರೀ ಚೆಲುವನಾರಾಯಣ ಸ್ವಾಮಿಯ ಮಹಾಭಿಷೇಕದಲ್ಲಿ ಪಾಲ್ಗೊಂಡು ವಿಶೇಷಪೂಜೆ ನೆರವೇರಿಸಿದರು. ಬಳಿಕ ಶ್ರೀ ಮಹಾಲಕ್ಷ್ಮಿ ಅಮ್ಮನವರ ಸನ್ನಿಧಿ ಹಾಗೂ ರಾಮಾನುಜಾಚಾರ್ಯರ ಸನ್ನಿಧಿಗೆ ತೆರಳಿ ಸಚಿವರು ಪೂಜೆ ಸಲ್ಲಿಸಿದರು.


ದೇವಸ್ಥಾನದ ಪೂಜೆಯಲ್ಲಿ ಪಾಲ್ಗೊಂಡಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ.

ಧಾರ್ಮಿಕ ಮುಖಂಡರ ಸಲಹೆಯಂತೆ ಮೇಲುಕೋಟೆ ಮಹಾಭಿಷೇಕದಲ್ಲಿ ಭಾಗವಹಿಸಿದ ಕೇಂದ್ರ ಸಚಿವರು ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ದೇವಾಲಯದಲ್ಲಿ ಇದ್ದು ಪೂಜೆ ಸಲ್ಲಿಸಿದರು. ಮಹಾಭಿಷೇಕದ ವೇಳೆ ದೇಗುಲದಲ್ಲಿ ಕೇಂದ್ರ ಸಚಿವರು ಪೂಜೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ಹೊರಗಡೆ ವರ್ಷಧಾರೆ ಸುರಿದದ್ದು ಶುಭಶುಚನೆಯೆಂದೆ ಭಕ್ತರು ಭಾವಿಸಿದರು. ಪೂಜೆಯ ನಂತರ ಮೂರನೇ ಸ್ಥಾನಿಕರಾದ ಸ್ಥಾನಾಚಾರ್ಯ ಸಜ್ಜೆಹಟ್ಟಿ ತಿರುನಾರಾಯಣ ಅಯ್ಯಂಗಾರ್ ಮನೆಯಲ್ಲಿ ಭೋಜನ ಸ್ವೀಕರಿಸಿದ ಹೆಚ್‌ಡಿಕೆ ಪು.ತಿ.ನ ಕಲಾಮಂದಿರ ವೀಕ್ಷಿಸಿ ತೆರಳಿದರು.

ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ದೇಶದಲ್ಲಿಯೇ ಅತ್ಯಂತ ಪ್ರಮುಖ ವಿಷ್ಣು ದೇವಾಲಯಗಳಲ್ಲಿ ಒಂದಾಗಿರುವ ಮೇಲುಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿಗೆ ನಾನು ಮೊದಲಿನಿಂದಲೂ ಶ್ರದ್ಧೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೇನೆ. ಅಲ್ಲದೆ ದೇವರ ಅನುಗ್ರಹದಿಂದ ಮಂಡ್ಯ ಸಂಸದನಾಗಿ ಆಯ್ಕೆಯಾಗಿ ಪ್ರಧಾನಿ ಮೋದಿ ಸಂಪುಟದಲ್ಲಿ ಸಚಿವನಾಗಿದ್ದೇನೆ. ಇದೆಲ್ಲಕ್ಕೂ ಶ್ರೀ ಚೆಲುವನಾರಾಯಣ ಸ್ವಾಮಿ ಅನುಗ್ರಹ ಎಂದು ಭಾವಿಸಿದ್ದೇನೆ ಮೇಲು ಕೋಟೆಯ ಅಭಿವೃದ್ಧಿ ಮತ್ತು ಶತಮಾನದ ಸಂಸ್ಕೃತ ಪಾಠಶಾಲೆ ಮತ್ತು ಪು.ತಿ.ನ ವ್ಯಾಸಂಗ ಮಾಡಿದ ಶತಮಾನದ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಸಹಕಾರ ನೀಡುತ್ತೇನೆ ಎಂದರು.

ಗೃಹಿಣಿ ನಾಪತ್ತೆ

ಭಾರತೀನಗರ, ಏ.3– ಗೃಹಿಣಿಯೊಬ್ಬರು ನಾಪತ್ತೆಯಾಗಿರುವ ಘಟನೆ ಆಲಭುಜನಹಳ್ಳಿ ಗ್ರಾಮದಲ್ಲಿ ಜರುಗಿದೆ.


ಜಿ.ನಿವೇದಿತಾ

ಆಲಭುಜನಹಳ್ಳಿ ಗ್ರಾಮದ ಕಿರಣ್ ಕುಮಾರ್ ಅವರ ಪತ್ನಿ ಜಿ.ನಿವೇದಿತಾ (27)ನಾಪತ್ತೆಯಾಗಿರುವ ಮಹಿಳೆ. ಈಕೆಗೆ 6 ವರ್ಷದ ಮಗಳಿದ್ದಾಳೆ.

ಈಕೆ ಫೆ.24 ರಂದು ಮಧ್ಯಾಹ್ನ 3 ಗಂಟೆಗೆ ಮನೆಯಿಂದ ಹೊರ ಹೋಗಿ ವಾಪಸ್ ಬಂದಿಲ್ಲ. ಅವರ ಬಗ್ಗೆ ಸಂಬಂಧಿಕರು ಮತ್ತು ಸ್ನೇಹಿತರನ್ನು ವಿಚಾರಿಸಿದರೂ ಕೂಡ ಈಕೆ ಸುಳಿವು ಸಿಕ್ಕಿಲ್ಲ ಎಂದು ಪತಿ ಕಿರಣ್‌ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಈಕೆ 5.4 ಅಡಿ ಎತ್ತರ, ಗೋದಿ ಮೈಬಣ್ಣ, ಸಾಧಾರಣ ಮೈಕಟ್ಟು, ಕನ್ನಡ ಮಾತನಾಡುತ್ತಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈಕೆಯ ಸುಳಿವು ಯಾರಿಗಾದರು ಸಿಕ್ಕಲ್ಲಿ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಕೋರಲಾಗಿದೆ.

ಪಿಹೆಚ್.ಡಿ ಪದವಿ

ಮೈಸೂರು, ಏ.3– ಡಾ.ಕೆ.ನಾಗೇಂದ್ರ ಬಾಬು ಅವರ ಮಾರ್ಗದರ್ಶನದಲ್ಲಿ ಹೆಚ್.ಎಲ್.ವಿಷಕಂಠ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಇಂಗ್ಲಿಷ್ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ವಿವಿಯ ಕುಲಸಚಿವ ಪ್ರೊ.ಎನ್.ನಾಗರಾಜ ತಿಳಿಸಿದ್ದಾರೆ.



ಮಗನ ಜಗಳ ತಾಳಲಾರದೆ ಮನೆ ಬಿಟ್ಟು ಹೋದ ತಾಯಿ ಆತ್ಮಹತ್ಯೆ

ತಾಯಿ ಕಾಣದೆ ಮಗನೂ ಸಾವಿಗೆ ಶರಣು

ಕೆ.ಆರ್.ಪೇಟೆ, ಏ.3–ಮಗನ ಜಗಳದಿಂದ ಬೇಸತ್ತ ತಾಯಿಯೊಬ್ಬಳು ಮನೆ ಬಿಟ್ಟು ಹೋಗಿ ಆತ್ಮಹತ್ಯೆಗೆ ಶರಣಾದರೆ, ತಾಯಿ ಕಾಣುತ್ತಿಲ್ಲ ಎಂದು ಮಗನೂ ವಿಷ ಸೇವಿಸಿ ಸಾವಿಗೆ ಶರಣಾಗಿರುವ ಘಟನೆ ತಾಲೂಕಿನ ಮೂಕಹಳ್ಳಿ ಕೊಪ್ಪಲಿನಲ್ಲಿ ಸಂಭವಿಸಿದೆ.


ಮಹದೇವಮ್ಮ


ಸುಭಾಷ್

ಗ್ರಾಮದ ವಾಸಿ ಹುಚ್ಚೇಗೌಡರ ಪತ್ನಿ ಮಹದೇವಮ್ಮ(75), ಈಕೆಯ ಪುತ್ರ ಸುಭಾಷ್(42) ಎಂಬುವರೇ ಸಾವಿಗೆ ಶರಣಾದವರಾಗಿದ್ದಾರೆ. ಸುಭಾಷ್ ತನ್ನ ತಾಯಿ ಜೊತೆ ದಿನ ನಿತ್ಯ ಸಣ್ಣಪುಟ್ಟ ವಿಚಾರಕ್ಕೆ ಜಗಳ ಮಾಡುತ್ತಿದ್ದ ಇದನ್ನು ನೋಡಿ ನೋಡಿ ಸಾಕಾದ ತಾಯಿ ಮಹದೇವಮ್ಮ ಈಗ 25 ದಿನಗಳಿಂದ ಮನೆ ಬಿಟ್ಟು ಹೊರಟು ಹೋದರು. ಸುಭಾಷ್ ತಾಯಿ ಗಾಗಿ ಸಂಬಂಧಿಕರು ಮತ್ತು ಆಪ್ತರ ಮನೆಯಲ್ಲೆಲ್ಲಾ ಹುಡುಕಾಟ ನಡೆಸಿದರೂ ಸಿಗಲಿಲ್ಲ. ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದ. ಆದರೂ ತಾಯಿಯ ಬಗ್ಗೆ ಮಾಹಿತಿ ಸಿಗಲಿಲ್ಲ.

ಇದರಿಂದ ಮನ ನೊಂದ ಸುಭಾಷ್ ಮಂಗಳವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಂಬಂಧಿಕರೆಲ್ಲ ಸೇರಿ ಅಂತ್ಯಕ್ರಿಯೆ ನೆರವೇರಿಸಿ ಮನೆಗೆ ಬಂದಾಗ, ತಾಯಿಯ ಶವ ಕೊಳೆತ ಸ್ಥಿತಿಯಲ್ಲಿ ಕಬ್ಬಿನ ಗದ್ದೆಯಲ್ಲಿ ಸಿಕ್ಕಿದ್ದು, ಗ್ರಾಮಾಂತರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮಗನ ಗಲಾಟೆಯಿಂದ ಮನ ನೊಂದು ಮಹದೇವಮ್ಮ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಒಂದನೇ ಪುಟದಿಂದ

ವಂದೇ ಭಾರತ್ ಡಿಪೋ ನಿರ್ಮಾಣ

ಸದ್ಯ ಬೆಂಗಳೂರಿನಲ್ಲಿದ್ದು, ಇದನ್ನು ವಿಕೇಂದ್ರಿಕರಣಗೊಳಿಸುವ ನಿಟ್ಟಿನಲ್ಲಿ ಮೈಸೂರಿನಲ್ಲೂ ಸ್ಥಾಪಿಸಲು ಯೋಜಿಸಲಾಗಿದೆ. ಈ ಮೂಲಕ ವಂದೇ ಭಾರತ್ ರೈಲುಗಳ ಸಂಖ್ಯೆ ಹೆಚ್ಚಿದರೂ ನಿರ್ವಹಣೆ ತ್ವರಿತವಾಗಿರಲಿದೆ ಎಂದು ಮುದಿತ್ ಮಿತ್ತಲ್ ಅಭಿಪ್ರಾಯಿಸಿದರು.

ಎರಡು ವರ್ಷಗಳಲ್ಲಿ ಕಾಮಗಾರಿ ಪೂರ್ಣ: ಇನ್ನು ಎರಡು ವರ್ಷದೊಳಗೆ ಮೈಸೂರು ರೈಲ್ವೆ ಯಾರ್ಡ್‌ನಲ್ಲಿರುವ ಗತಿಶಕ್ತಿ ಯೋಜನೆಯ ಕಾಮಗಾರಿ ಪೂರ್ಣ ಗೊಳಿಸುವ ಗುರಿ ಹೊಂದಲಾಗಿದ್ದು, ಯಾರ್ಡ್‌ನಲ್ಲಿ ಹೊಸದಾಗಿ ಮೂರು ರೈಲ್ವೆ ಮಾರ್ಗಗಳನ್ನು ಅಳವಡಿಸಲಾಗುವುದು. ಈಗಾಗಲೇ ಮೊದಲ ಹಂತದ ಕಾಮಗಾರಿ ಭರದಿಂದ ಸಾಗುತ್ತಿದೆ. ರೈಲ್ವೆ ಯಾರ್ಡ್‌ನಲ್ಲಿರುವ ಹಳೆಯ ಕಟ್ಟಡಗಳನ್ನು ನೆಲಸಮಗೊಳಿಸಿ, ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುವುದು. ಈ ಮೂಲಕ ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ವಿದ್ಯುದ್ದೀಕರಣ: ಮಧ್ಯ ಪ್ರಾಚ್ಯ ಯುದ್ಧದ ಪರಿಣಾಮ ಡೀಸೆಲ್ ಹಾಗೂ ಪೆಟ್ರೋಲ್‌ಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ 44 ಲೋಕೋಮೋಟಿವ್ (ರೈಲ್ವೆ ಇಂಜಿನ್) ಡೀಸೆಲ್‌ನಿಂದ ಎಲೆಕ್ಟ್ರಿಕ್‌ಗೆ ಬದಲಾಯಿಸಲಾಗಿದೆ. ಹೀಗೆ ವಿದ್ಯುತ್‌ಗೆ ಬದಲಾಯಿಸಿರುವುದರಿಂದ ಒಂದು ಪಾಯಿಂಟ್‌ನಿಂದ ಮತ್ತೊಂದು ಪಾಯಿಂಟ್‌ಗೆ ತಗುಲುವ ವೆಚ್ಚ ಸುಮಾರು 12 ರಿಂದ 26 ಲಕ್ಷ ರೂಪಾಯಿ ಉಳಿತಾಯವಾಗಲಿದೆ ಎಂದರು.

45 ಸಿಸಿಟಿವಿ ಕ್ಯಾಮರಾ: ಮೈಸೂರು ರೈಲ್ವೆ ನಿಲ್ದಾಣದಲ್ಲಿ 45 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ತಾಂತ್ರಿಕ ದೋಷವಿರುವ ಕ್ಯಾಮರಾಗಳನ್ನು ಇನ್ನು ಮೂರು ದಿನದಲ್ಲಿ ಸರಿಪಡಿಸಲಾಗುವುದು. ಕೆ.ಜಿ.ಕೊಪ್ಪಲ್ ಬಳಿಯ ರೈಲ್ವೆ ಅಂಡರ್ ಪಾಸ್ ಅಗಲೀಕರಣ ಯೋಜನೆಗೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ. ಅಲ್ಲಿ ಅಂಗಡಿ–ಮುಂಗಟ್ಟು ಹಾಗೂ ವಾಸದ ಮನೆಗಳಿವೆ. ಇದರಿಂದ ಅಂಡರ್ ಪಾಸ್ ನಿರ್ಮಾಣಕ್ಕೆ ಅಡ್ಡಿಯಾಗಿದೆ ಎಂದು ಮುದಿತ್ ಮಿತ್ತಲ್ ತಿಳಿಸಿದರು.

ರೈಲ್ವೆ ವಿಭಾಗಕ್ಕೆ 449 ಕೋಟಿ ಆದಾಯ

ಬಂದಿದೆ ಎಂದರು. ವಿದ್ಯುತ್ ಇಲಾಖೆಯಲ್ಲಿಯೂ ಮಹತ್ವದ ಪ್ರಗತಿ ಕಂಡು ಬಂದಿದ್ದು, ಶಕ್ತಿ ಬಳಕೆಯನ್ನು 91.34 ಎಂಯುನಿಂದ 90.53 ಎಂಯುಗೆ ಕಡಿಮೆ ಮಾಡಲಾಗಿದೆ. ಸೌರ ಶಕ್ತಿ ಸಾಮರ್ಥ್ಯವು 125 ರಿಂದ 326 ಕಿಲೋವ್ಯಾಟ್ ಪೀಕ್(KWp) ಹೆಚ್ಚಾಗಿರುವುದರಿಂದ ವಾರ್ಷಿಕ ಉಳಿತಾಯ 11ರಿಂದ 26 ಲಕ್ಷಕ್ಕೆ ಹೆಚ್ಚಾಗಿದೆ. ಕ್ರಿಯಾ ಸಾಮರ್ಥ್ಯದಲ್ಲಿ ಕೂಡ ಸುಧಾರಣೆ ಕಂಡು ಬಂದಿದ್ದು, ಅನರ್ಹ ಕೋಚ್‌ಗಳ ಸಂಖ್ಯೆಯನ್ನು ಕಡಿಮೆ ಮಾಡ ಲಾಗಿದೆ. ಮೈಸೂರು ವಿಭಾಗದಲ್ಲಿ ಕಳೆದ ವರ್ಷ 34.11 ಮಿಲಿಯನ್ ಮಂದಿ ಪ್ರಯಾಣಿಸಿದ್ದಾರೆ. ಉತ್ತಮ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದು, 117 ಕೋಟಿ ವಸ್ತುಗಳನ್ನು ಪ್ರಯಾಣಿಕರಿಗೆ ವಾಪಾಸು ನೀಡಲಾಗಿದೆ. 132 ಮಕ್ಕಳನ್ನು ರಕಿಸಿ, ವಾರಸುದಾರರಿಗೆ ಒಪ್ಪಿಸಲಾಗಿದೆ ಎಂದು ಮುದಿತ್ ಮಿತ್ತಲ್ ಮಾಹಿತಿ ನೀಡಿದರು.

ಯುವತಿ ಕೊಡಗಿನ ಬೆಟ್ಟದಲ್ಲಿ ನಾಪತ್ತೆ

60ಕ್ಕೂ ಹೆಚ್ಚು ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿದರೂ ಶರಣ್ಯ ಪತ್ತೆಯಾಗಿಲ್ಲ. ಶುಕ್ರವಾರವೂ ಅರಣ್ಯ ಸಿಬ್ಬಂದಿ ಹಾಗೂ ಪೊಲೀಸರು, ಗ್ರಾಮಸ್ಥರ ಜೊತೆ ಗೂಡಿ ಶ್ವಾನದಳ ಸಹಿತ ಶೋಧ ಕಾರ್ಯಾಚರಣೆ ನಡೆಸಿದರೂ ಫಲಕಾರಿಯಾಗದೆ ಸಂಜೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದಾರೆ.

ದಟ್ಟ ಕಾಡು, ಕಣಿವೆ ಪ್ರದೇಶಗಳಿಂದ ಕೂಡಿರುವ ತಡಿಯಂಡಮೋಳ್ ಪ್ರದೇಶದಲ್ಲಿ ಡ್ರೋಣ್ ಬಳಸಿ ಕಾರ್ಯಾಚರಣೆ ನಡೆಸಲಾಗಿದೆ. ಶರಣ್ಯ ಸಹೋದರ ಶ್ಯಾಮ್ ಕೂಡ ಶೋಧ ಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಶರಣ್ಯ ಈ ಹಿಂದೆಯೂ ಏಕಾಂಗಿಯಾಗಿ ಚಾರಣಕ್ಕೆ ಬಂದಿ ದ್ದರು ಎನ್ನಲಾಗಿದೆ. ಶೋಧ ಕಾರ್ಯಾಚರಣೆ ಶನಿವಾರವೂ ಮುಂದುವರೆಯಲಿದೆ. ಶ್ಯಾಂ ನೀಡಿದ ದೂರಿನ ಮೇರೆಗೆ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ರಾಘವೇಂದ್ರ, ದೂರು ದಾಖಲಿಸಿಕೊಂಡಿದ್ದಾರೆ. ತಡಿಯಂಡಮೋಳ್ ಬೆಟ್ಟ ವ್ಯಾಪ್ತಿಯಲ್ಲಿ ಕಾಡಾನೆ, ಕಾಡು ಕೋಣ, ಹುಲಿ ಮತ್ತಿತರೆ ಅಪಾಯಕಾರಿ ಕಾಡು ಪ್ರಾಣಿಗಳಿದ್ದು, ಯುವತಿಯ ಸುರಕ್ಷತೆ ಬಗ್ಗೆ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಸದ್ಯ ಶರಣ್ಯಳ ಪತ್ತೆಗೆ ಅರಣ್ಯ ಮತ್ತು ಪೊಲೀಸ್ ಇಲಾಖೆಯ ನಾಲ್ಕು ತಂಡ ಶೋಧ ಮುಂದುವರೆಸಿವೆ ಆದರೆ ಯಾವುದೇ ಸುಳಿವು ಸಿಗದೆ ನಿರಾಶೆ ಮೂಡಿದೆ. ಶರಣ್ಯ ಸುರಕ್ಷಿತವಾಗಿ ಮರಳಿ ಬರಲೆಂದು ಬೆಟ್ಟ ಪ್ರದೇಶದಲ್ಲಿ ವಾಸಿಸುವ ಕುಡಿಯ ಜನಾಂಗ ಮಲೆ ತಮ್ಮಚ್ಚ ದೇವರಿಗೆ ಹರಕೆ ಹೊತ್ತಿದ್ದಾರೆ. ಇನ್ನು ತಡಿಯಂಡಮೋಳ್ ಬೆಟ್ಟದಲ್ಲಿ ದಟ್ಟ ಮಳೆ ಮೋಡ ಕವಿದಿದ್ದು, ಆತಂಕ ಮನೆಮಾಡಿದೆ.

ಶರಣ್ಯ ನಾಪತ್ತೆ ಪ್ರಕರಣದ ಬಗ್ಗೆ ಸ್ಥಳೀಯರು ಮಾತ ನಾಡಿದ್ದು, ದಾರಿ ತಪ್ಪುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ದಾರಿ ತಪ್ಪುವಂತಹ ದುರ್ಗಮ ಹಾದಿ ಏನೂ ಅಲ್ಲ ಎಂದು ಹೇಳುತ್ತಿದ್ದಾರೆ. ಸದ್ಯ ಶೋಧ ಕಾರ್ಯಕ್ಕೆ ಯವಕಪಾಡಿ ಗ್ರಾಮಸ್ಥರು, ಯುವಕರು ಸಾಥ್ ನೀಡಿದ್ದಾರೆ.

ವಾಹನಗಳಿಗೆ ಕಡ್ಡಾಯ!

ಅಧಿಕತತೆ ಹಾಗೂ ಯಾವುದೇ ವಂಚನೆ ಚಟುವಟಿಕೆಗಳನ್ನು ತಡೆಯುವ ಉದ್ದೇಶದಿಂದ ಸಾರಿಗೆ ಇಲಾಖೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಕಡಾಯಗೊಳಿಸಿತ್ತು. ಆದರೆ ಸಾರಿಗೆ ಇಲಾಖೆಯ ನಿಯಮಕ್ಕೆ ರಾಜ್ಯದ ವಾಹನ ಸವಾರರು ಮಣೆ ಹಾಕಿಲ್ಲ. ಈ ನಂಬರ್ ಪ್ಲೇಟ್ ಅಳವಡಿಕೆಗೆ ಸುಮಾರು 1.41 ಕೋಟಿ ವಾಹನ ಸವಾರರ ನಿರಾಸಕ್ತಿ ತೋರಿದ ಹಿನ್ನೆಲೆಯಲ್ಲಿ ನಿಯಮದಲ್ಲಿ ಬದಲಾವಣೆ ತರಲಾಗಿದೆ ಎಂದು ಹೇಳಲಾಗಿದೆ.

ಯೋಜನೆಯ ಜಾರಿಯಲ್ಲೂ ಕೆಲ ಗೊಂದಲವಿದ್ದು, ಅನುಷ್ಠಾನದಲ್ಲೂ ವಿಫಲವಾಗಿದೆ. ಎಷ್ಟು ಬಾರಿ ಗಡುವು ವಿಸ್ತರಣೆ ಮಾಡಿದರೂ ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ವಾಹನ ಸವಾರರು ಆಸಕ್ತಿ ತೋರಿಸಿಲ್ಲ. ಹೀಗೆ ಹಲವು ಬಾರಿ ಗಡುವು ವಿಸ್ತರಣೆಯೂ ಜನರ ನಿರ್ಲಕ್ಷ್ಯಕ್ಕೆ ಕಾರಣ ಎನ್ನಲಾಗಿದೆ. ಈವರೆಗೆ ರಾಜ್ಯದಲ್ಲಿ 2 ಕೋಟಿ ಹಳೆ ವಾಹನಗಳಲ್ಲಿ 59 ಲಕ್ಷ ವಾಹನಗಳಲ್ಲಷ್ಟೇ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಆಗಿದ್ದು, ಇನ್ನೂ 1.41ಕೋಟಿ ವಾಹನಗಳ ಮಾಲೀಕರು ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಪರಿಣಾಮ ಹಳೇ ವಾಹನಗಳಿಗೆ ಸಂಬಂಧಿಸಿದಂತೆ ನಿಯಮವನ್ನೇ ಸಡಿಲಗೊಳಿಸಲಾಗಿದ್ದು, ಹೊಸ ವಾಹನಗಳಿಗೆ ಕಡ್ಡಾಯವಾಗಿ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಗುತ್ತಿಗೆ ಒಪ್ಪಂದವಾಗಿಲ್ಲ

ಜಯಲಕ್ಷ್ಮೀ ವಿಲಾಸ ಅರಮನೆ ಖಾಸಗಿ ಸಂಸ್ಥೆಗೆ ಲೀಸ್‌ಗೆ ನೀಡಲಾಗಿದೆ ಎಂದು ಆರೋಪಿಸಿ ಕಳುಹಿಸಿರುವ ಇ–ಮೇಲ್‌ಗೆ ಸ್ಪಷ್ಟನೆ ನೀಡಿರುವ ಕುಲಸಚಿವರಾದ ಎಂ.ಕೆ.ಸವಿತಾ, ಮಾ.27ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಜಯಲಕ್ಷ್ಮೀ ವಿಲಾಸ ಅರಮನೆ ಕಟ್ಟಡದ ಉದ್ದೇಶಿತ ಒಡಂಬಡಿಕೆ ಕುರಿತು ಚರ್ಚೆ ನಡೆಯುವ ವೇಳೆ ನೀವು ಮೊಬೈಲ್‌ನಲ್ಲಿ ಮಾತನಾಡಲೆಂದು ಹೊರ ಹೋಗಿದ್ದಿರಿ. ಅದರಿಂದ ಸಭೆಯಲ್ಲಾದ ಚರ್ಚೆಗಳ ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲ. ಆದರೂ 40 ವರ್ಷಗಳ ಲೀಸ್‌ಗೆ ನೀಡಲಾಗಿದೆ ಎಂದು ಆಧಾರ ರಹಿತ ಆರೋಪ ಮಾಡಿದ್ದೀರಿ. ವಾಸ್ತವಾಂಶ ಪರಿಶೀಲಿಸದೇ, ಸಿಂಡಿಕೇಟ್ ಸಭೆಯ ನಡಾವಳಿ ಗಮನಿಸದೇ ಪೂರ್ವಾಗ್ರಹ ಪೀಡಿತ ಆರೋಪ ಮಾಡಿದ್ದೀರಿ. ಯಾವುದೇ ಆರೋಪ ಮಾಡುವ ಮುನ್ನ ಸಂಬಂಧಪಟ್ಟವರಿಂದ ಸ್ಪಷ್ಟನೆ ಪಡೆದು ಪರಿಶೀಲಿಸಿ ಎಂದು ಹಿಂಬರಹದಲ್ಲಿ ಸಲಹೆ ನೀಡಿದ್ದಾರೆ.

ವಾಹನ ಉಪಕರ ಹಿಂದಕ್ಕೆ

ಗಾಯದ ಮೇಲೆ ಬರೆಗೆ ಮುಂದಾಗಿತ್ತು: ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ, ಪೂರೈಕೆಯಲ್ಲಿನ ವ್ಯತ್ಯಯದಿಂದ ಕಂಗಾಲಾಗಿರುವ ಜನರಿಗೆ ಮೈಸೂರು ಮಹಾನಗರ ಪಾಲಿಕೆ ಗಾಯದ ಮೇಲೆ ಬರೆ ಎಳೆಯಲು ಮುಂದಾಗಿತ್ತು. ನೀರಿನ ಶುಲ್ಕ, ಆಸ್ತಿ ತೆರಿಗೆ ಏರಿಕೆಯ ಜೊತೆಗೆ ನೀರಿನ ದರದ ಒಟ್ಟು ಮೊತ್ತದ ಶೇ.40ರಷ್ಟು ಒಳಚರಂಡಿ ಶುಲ್ಕವನ್ನೂ ವಿಧಿಸಲಾಗಿದೆ. ಇಷ್ಟು ಸಾಲದೆಂಬಂತೆ ಹೊಸದಾಗಿ ವಾಹನ ಉಪಕರ ಸಂಗ್ರಹಕ್ಕೂ ಪಾಲಿಕೆ ಮುಂದಾಗಿತ್ತು. ಹೊಸ ವಸೂಲಿ ಘೋಷಣೆ ಮೂಲಕ ಹೊಸ ವರ್ಷದ ಮೊದಲ ದಿನವೇ ನಾಗರಿಕರಿಗೆ ಶಾಕ್ ನೀಡಿತ್ತು.

ಪಾಲಿಕೆಯ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಮನೆಗಳಿಗೆ ಆಸ್ತಿಯ ಗುರುತಿನ (ಪಿಐಡಿ) ಸಂಖ್ಯೆ ಆಧಾರದ ಮೇಲೆ ದ್ವಿಚಕ್ರ ವಾಹನಕ್ಕೆ 100 ರೂ., ತ್ರಿಚಕ್ರ ವಾಹನಕ್ಕೆ 200 ರೂ. ಮತ್ತು ನಾಲ್ಕು ಚಕ್ರ ವಾಹನಕ್ಕೆ 500 ರೂ.ನಂತೆ ನಿಯಮಾನುಸಾರ ಮೋಟಾರ್ ವಾಹನ ಉಪಕರ ವಿಧಿಸಲು ಪಾಲಿಕೆ ನಿರ್ಧರಿಸಿತ್ತು. ಅದರಂತೆ 2026–27ರ ಆರ್ಥಿಕ ವರ್ಷದಿಂದ ಆಸ್ತಿ ತೆರಿಗೆ ವಸೂಲಾತಿಯಲ್ಲಿ ವಾಹನ ಉಪಕರಗಳನ್ನು ವಿಧಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಸಂಬಂಧ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಸುವ ಸಂದರ್ಭದಲ್ಲಿ ತಾವು ಹೊಂದಿರುವ ವಾಹನಗಳ ಮಾಹಿತಿಯನ್ನೂ ನೀಡಬೇಕೆಂದು ಪಾಲಿಕೆ ಸೂಚಿಸಿತ್ತು.


ಆದರೆ ಪಾಲಿಕೆಯ ಈ ಹೊಸ ವರಸೆಗೆ ನಾಗರಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಶೇ.5ರ ವಿನಾಯಿತಿ ಅಡಿಯಲ್ಲಿ ಆಸ್ತಿ ತೆರಿಗೆ ಪಾವತಿಸುವ ಸಂದರ್ಭದಲ್ಲಿ ಅನೇಕ ಮಂದಿ ವಾಹನ ಉಪಕರ ಸಂಗ್ರಹಕ್ಕೆ ಮುಂದಾಗಿರುವ ಪಾಲಿಕೆ ನಡೆಯನ್ನು ಪ್ರಶ್ನಿಸಿದ್ದರು. ಒಂದೆಡೆ ಕೇಂದ್ರ ಸರ್ಕಾರವು ಟೋಲ್ ಶುಲ್ಕ ಏರಿಕೆ ಜೊತೆಗೆ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ಹೊಸ ನಿಯಮಗಳ ಮೂಲಕ ಆತಂಕ ಸೃಷ್ಟಿಸಿದೆ. ಮತ್ತೊಂದೆಡೆ ರಾಜ್ಯ ಸರ್ಕಾರ ವಿದ್ಯುತ್ ದರ ಏರಿಕೆ, ಆಸ್ತಿ ತೆರಿಗೆ ಪರಿಷ್ಕರಣೆ ಮೂಲಕ ಹೊರೆ ಹೆಚ್ಚಿಸಿದೆ. ಇದರ ಜೊತೆಗೆ ಸ್ಥಳೀಯ ಸಂಸ್ಥೆಯೂ ಹೊಸ ರೀತಿಯ ವಸೂಲಿಗೆ ಮುಂದಾದರೆ ಜೀವನ ನಡೆಸುವುದಾದರೂ ಹೇಗೆ ಎಂದು ಹತಾಷೆ ವ್ಯಕ್ತಪಡಿಸುತ್ತಿದ್ದರು. ಈ ಜನಾಕ್ರೋಶ ಗಂಭೀರ ಸ್ವರೂಪ ಪಡೆಯಬಹುದೆಂಬ ಮುನ್ಸೂಚನೆ ಅರಿತ ನಗರ ಪಾಲಿಕೆ ಸದ್ಯ ವಾಹನ ಉಪಕರ ಸಂಗ್ರಹದಿಂದ ಹಿಂದೆ ಸರಿದಿದೆ.

ಸಂತೋಷ್ ಹೆಗ್ಡೆ ಆರೋಗ್ಯ ಸುಧಾರಣೆ

ಎರಡು ಬಾರಿ ವಾಂತಿಯಾಗಿದ್ದು, ತೀವ್ರ ಸುಸ್ತು ಅನುಭವಿಸಿದ್ದಾರೆ. ಇದರಿಂದ ಅವರು ಮನೆಗೆ ಮರಳಲು ನಿರ್ಧರಿಸಿ ವೇದಿಕೆಯಿಂದ ಇಳಿದು ಹೋಗುತ್ತಿದ್ದಾಗ ದಿಢೀರ್ ಕುಸಿದುಬಿದ್ದರು. ಈ ವೇಳೆ ಅಲ್ಲಿಯೇ ಇದ್ದ ವೈದ್ಯರಾದ ರಮೇಶ್ ಬಾಬು ಅವರು ಕೂಡಲೇ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ.

ಯು.ಟಿ. ಖಾದರ್ ಸಮಯಪ್ರಜ್ಞೆ: ಸಂತೋಷ್ ಹೆಗ್ಡೆ ಅವರು ಕುಸಿದುಬಿದ್ದ ಸಂದರ್ಭದಲ್ಲಿ ಸ್ಥಳದಲ್ಲಿ ಆಂಬುಲೆನ್ಸ್ ವ್ಯವಸ್ಥೆ ಇರಲಿಲ್ಲ. ತಡ ಮಾಡುವುದು ಅಪಾಯ ಎಂದು ಭಾವಿಸಿದ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು, ತಮ್ಮ ಅಧಿಕೃತ ಸರ್ಕಾರಿ ವಾಹನದಲ್ಲೇ ಸಂತೋಷ್ ಹೆಗ್ಡೆ ಅವರನ್ನು ಮಿಲರ್ಸ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ಕರೆತಂದರು. ಸಂತೋಷ್ ಹೆಗ್ಡೆ ಅವರಿಗೆ ವಾಂತಿಯಾಗಿ ಕುಸಿದುಬಿದ್ದಾಗ ತಕ್ಷಣ ಆಸ್ಪತ್ರೆಗೆ ಸೇರಿಸುವುದು ಅನಿವಾರ್ಯವಾಗಿತ್ತು. ಈಗ ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಆರಾಮವಾಗಿದ್ದಾರೆ ಎಂದು ಯು.ಟಿ. ಖಾದರ್ ತಿಳಿಸಿದ್ದಾರೆ.

ಆಸ್ಪತ್ರೆಯ ಅಧಿಕೃತ ಮಾಹಿತಿ: ಮಣಿಪಾಲ್ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ರುದ್ರೇಶ್, ಸಂತೋಷ್ ಹೆಗ್ಡೆ ಅವರ ಆರೋಗ್ಯದ ಬಗ್ಗೆ ಮಾಹಿತಿ ನೀಡಿ, ನ್ಯಾಯಮೂರ್ತಿಗಳು ಸಂಪೂರ್ಣ



ವಾಗಿ ಸುಧಾರಿಸಿಕೊಂಡಿದ್ದಾರೆ. ಅವರಿಗೆ ಯಾವುದೇ ಗಂಭೀರವಾದ ಹೃದಯಾಘಾತ ಸಂಭವಿಸಿಲ್ಲ. ಕೇವಲ ಸುಸ್ತಾಗಿದ್ದರಿಂದ ಗಿಡ್ಡಿನೆಸ್ (ತಲೆಸುತ್ತು) ಉಂಟಾಗಿ ಕುಸಿದುಬಿದ್ದಿದ್ದರು. ವಿಶೇಷವೆಂದರೆ, ಇಂದು ಬೆಳಿಗ್ಗೆಯಷ್ಟೇ ಅವರು ನಿಯಮಿತ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಬಂದಿದ್ದರು. ಅವರ ಬಿಪಿ ಮತ್ತು ಶುಗರ್ ಎಲ್ಲವೂ ನಾರ್ಮಲ್ ಇದೆ. ಮುಂದಿನ 30 ನಿಮಿಷಗಳಲ್ಲಿ ಅವರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗುವುದು ಎಂದು ವೈದ್ಯರು ತಿಳಿಸಿದ್ದಾರೆ.

ಕುಟುಂಬಸ್ಥರು ಹಾಜರಿ: ಸದ್ಯ ಆಸ್ಪತ್ರೆಯಲ್ಲಿ ಸಂತೋಷ್ ಹೆಗ್ಡೆ ಅವರ ಕುಟುಂಬಸ್ಥರು ಹಾಜರಿದ್ದರು. ನಾಡಿನ ಒಬ್ಬ ಪ್ರಾಮಾಣಿಕ ನಿವೃತ್ತ ನ್ಯಾಯಮೂರ್ತಿಗಳು ಸುರಕ್ಷಿತವಾಗಿದ್ದಾರೆ ಎಂಬ ಸುದ್ದಿ ಕೇಳಿ ಅವರ ಅಭಿಮಾನಿಗಳು ಮತ್ತು ಹಿತೈಷಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಗೆ ಗ್ರೇಡಿಂಗ್ ನಿರ್ಧಾರ ಪುನರ್‌ಪರಿಶೀಲಿಸಿ

ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರ ಪತ್ರ!

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂರನೇ ಭಾಷೆ ಹಿಂದಿಗೆ ಅಂಕ ನೀಡದೆ ಕೇವಲ ಗ್ರೇಡ್ ನೀಡುವ ನಿರ್ಧಾರದ ಬಗ್ಗೆ ಇರುವ ಕಳವಳಗಳನ್ನು ಸಮಗ್ರವಾಗಿ ಪರಿಶೀಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ.

ಈ ಕುರಿತು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಪತ್ರ ಬರೆದಿದ್ದು, ಸರ್ಕಾರದ ನಿರ್ಧಾರವನ್ನು ಮರು ಪರಿಶೀಲನೆ ಮಾಡುವಂತೆ ತಿಳಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕಗಳನ್ನು ನೀಡದೆ ಕೇವಲ ಗ್ರೇಡ್ ನೀಡುವ ನಿರ್ಧಾರವನ್ನು ಮರು ಪರಿಶೀಲಿಸಿ. ಭಾಷಾವೈವಿಧ್ಯತೆ, ಜಾಗೃತಿ, ಬೌದ್ಧಿಕ ಬೆಳವಣಿಗೆಯನ್ನು ಬೆಳೆಸುವಲ್ಲಿ ತೃತೀಯ ಭಾಷೆಯು ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಗ್ರೇಡ್ ನೀಡಿದರೆ ಶೈಕ್ಷಣಿಕ ಪ್ರಾಮುಖ್ಯತೆ ಕಡಿಮೆ ಮಾಡಬಹುದು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಅಲ್ಲದೆ ಸರ್ಕಾರದ ಈ ನಿರ್ಧಾರ ವಿದ್ಯಾರ್ಥಿಗಳು ಕಲಿಯುವ ಆಸಕ್ತಿಯ ಮೇಲೆ ಪರಿಣಾಮ ಬೀರಬಹುದು. ಶಿಕ್ಷಣದ ಮೇಲೆ ಬೀರುವ ಪರಿಣಾಮದ ಬಗ್ಗೆ ಪೋಷಕರಿಗೂ ಆತಂಕ ಇದ್ದು, ರಾಜ್ಯಪಾಲರು ಈ ವಿಷಯವನ್ನು ಗಮನಿಸಿದ್ದಾರೆ.

ಹೀಗಾಗಿ ಶೈಕ್ಷಣಿಕ, ಆಡಳಿತಾತ್ಮಕ ಅಂಶ ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸಂಬಂಧಿತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಶೈಕ್ಷಣಿಕ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳಿ ಎಂದು ಸಿಎಸ್‌ಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿರುವ ನಡುವೆ ರಾಜ್ಯಪಾಲರ ಈ ಪತ್ರ ಹೆಚ್ಚು ಮಹತ್ವ ಪಡೆದಿದೆ.

ಸಮಸ್ಯೆಗಳನ್ನು ರಾಜ್ಯಪಾಲರು ಗಮನಿಸಿದ್ದಾರೆ ಮತ್ತು ಶಿಕ್ಷಣ ಕ್ಷೇತ್ರದಾದ್ಯಂತ ಅದರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಬೇಕೆಂದು ಬಯಸುತ್ತಾರೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಈ ವಿಷಯವನ್ನು ಪರಿಶೀಲಿಸಲು ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿ ಮತ್ತು ರಾಜ್ಯದ ಶೈಕ್ಷಣಿಕ ಉದ್ದೇಶಗಳಲ್ಲಿ ಸೂಕ್ತವೆಂದು ಪರಿಗಣಿಸಲಾದ ಕ್ರಮವನ್ನು ತೆಗೆದುಕೊಳ್ಳಲು ಮುಖ್ಯ ಕಾರ್ಯದರ್ಶಿಗೆ ತಿಳಿಸಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮತ್ತಿನ ಔಷಧ ನೀಡಿ ಅತ್ಯಾಚಾರ ಮಾಡಿದ ಸಮೀರ್ ಮುಲ್ಲಾ: ಸಂತ್ರಸ್ತೆ ಹೇಳಿಕೆ

ಹುಬ್ಬಳ್ಳಿ: ಹುಬ್ಬಳ್ಳಿ ಜಿಮ್ ಟ್ರೈನರ್ ಲವ್ ಜಿಹಾದ್ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ದೊರೆತಿದ್ದು, ಇದು ಲವ್ ಜಿಹಾದ್ ಅಲ್ಲ. ಕೌಟುಂಬಿಕ ಕಲಹ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಜಿಮ್ ತರ ಬೇತುದಾರನ ಮೇಲಿನ ಹಲ್ಲೆ ಪ್ರಕರಣಕ್ಕೆ ಮಹತ್ವದ ಟ್ವಿಸ್ಟ್ ದೊರೆತಿದ್ದು, ಈ ಪ್ರಕರಣದ ಸಂತ್ರಸ್ತ ಯುವತಿ ವಿಡಿಯೋ ಹೇಳಿಕೆ ಬಿಡುಗಡೆ ಮಾಡುವ ಪ್ರಕರಣಕ್ಕೆ ಟ್ವಿಸ್ಟ್ ನೀಡಿದ್ದಾರೆ. ಅಜ್ಞಾತ ಸ್ಥಳದಿಂದ ಸಂತ್ರಸ್ತ ಯುವತಿ ವಿಡಿಯೋವೊಂದನ್ನ ಬಿಡುಗಡೆ ಮಾಡಿದ್ದು, ವಿಡಿಯೋದಲ್ಲಿ ಸಮೀರ್ ಮುಲ್ಲಾ ಮತ್ತಿನ ಔಷಧ ನೀಡಿ ತನ್ನ ಮೇಲೆ ಅತ್ಯಾಚಾರ ವೆಸಗಿದ ಎಂದು ಆರೋಪಿಸಿದ್ದಾರೆ.

ಜಿಮ್ ಟ್ರೈನರ್ ಸಮೀರ್ ವಿರುದ್ಧ ರೇಪ್ ಆರೋಪ ಮಾಡಿರುವ ಸಂತ್ರಸ್ತೆ ಸಮೀರ್ ಅತ್ಯಾಚಾರದ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಸಮೀರ್ ಅಕ್ಕ ತೈಸೀಮ್ ಮುಲ್ಲಾ ನನ್ನ ಸ್ನೇಹಿತೆ ಆಕೆಯಿಂದ ಸಮೀರ್ ಪರಿಚಯವಾಗಿತ್ತು. ತೈಸೀಮ್ ಜೊತೆಗೆ ಸ್ನೇಹಿತೆಯಾಗಿ ಹಲವಾರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇವೆ. ಬರ್ತ್‌ಡೇ ಪಾರ್ಟಿ, ವೀಕೆಂಡ್ ಪಾರ್ಟಿಗೆ ಹೋಗಿದ್ದೆವು. ಸಮೀರ್ ಸಹ ಅಲ್ಲಿಗೆ ಬಂದಿದ್ದ, ಇದಾದ ಮೇಲೆ ಸಮೀರ್ ಆತ್ಮೀಯನಾದ ಎಂದು ಸಂತ್ರಸ್ತೆ ಹೇಳಿದ್ದಾರೆ.

ಲವ್ ಜಿಹಾದ್ ಅಲ್ಲ ಎಂದ ಪೊಲೀಸರು!

ಒಂದು ದಿನ ಸಮೀರ್ ತನ್ನ ಮನೆಗೆ ಕರೆದುಕೊಂಡು ಹೋಗಿದ್ದ. ಆಗ ನನಗೆ ಮತ್ತು ಜ್ಯೂಸ್‌ನಲ್ಲಿ ಬರುವ ಔಷಧ ಬೆರೆಸಿ ಕೊಟ್ಟು ನನ್ನ ಮೇಲೆ ಅತ್ಯಾಚಾರ ಮಾಡಿ ವಿಡಿಯೋ ಮಾಡಿಕೊಂಡಿದ್ದ ಎಂದು ಸಂತ್ರಸ್ತೆ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಲವ್ ಜಿಹಾದ್ ಅಲ್ಲ: ಇನ್ನು ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ಪೊಲೀಸರು ಇದು ಲವ್ ಜಿಹಾದ್ ಪ್ರಕರಣ ಎಂಬ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿರುವ ನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಈ ಘಟನೆ ಎರಡು ಕುಟುಂಬಗಳ ನಡುವಿನ ವೈಯಕ್ತಿಕ ಕಲಹದಿಂದ ಉಂಟಾಗಿದ್ದು, ಕೆಲವು ಗುಂಪುಗಳು ಆರೋಪಿಸಿದಂತೆ ಲವ್ ಜಿಹಾದ್‌ಗೆ ಸಂಬಂಧಿಸಿಲ್ಲ ಎಂದು ಹೇಳಿದ್ದಾರೆ.

ಚಲಿಸುತ್ತಿದ್ದ ಬಸ್‌ನ ಬ್ಯಾಟರಿಯಲ್ಲಿ ಬೆಂಕಿ; ಚಾಲಕನ ಸಮಯಪ್ರಜ್ಞೆಯಿಂದ ತಪ್ಪಿದ ಅನಾಹುತ



ದಟ್ಟಹೊಗೆ ಕಾಣಿಸಿಕೊಂಡ ಕೂಡಲೇ ಬ್ಯಾಟರಿ ಸಂಪರ್ಕ ಕಡಿತಗೊಳಿಸುತ್ತಿರುವ ಚಾಲಕ

ಮೈಸೂರು, ಏ.3(ವಿವಿಹೆಚ್)– ಮೈಸೂರಿನಲ್ಲಿ ಚಲಿಸುತ್ತಿದ್ದ ನಗರ ಸಾರಿಗೆ ಬಸ್‌ನ ಬ್ಯಾಟರಿಯಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ಭಾರೀ ಅವಘಡ ತಪ್ಪಿದೆ.

ಶುಕ್ರವಾರ ಸಂಜೆ 6 ಗಂಟೆ ವೇಳೆಗೆ ಅರಮನೆ ದಕ್ಷಿಣ ದ್ವಾರದ ಬಳಿ ಚಲಿಸುತ್ತಿದ್ದ ಕೆಎ–42–ಎಫ್–1974 ನಗರ ಸಾರಿಗೆ ಬಸ್‌ನ ಎಡಬದಿಯಲ್ಲಿ ದಟ್ಟ ಹೊಗೆ ಆವರಿಸಿದೆ. ಇದನ್ನು ಗಮನಿಸಿದ ಚಾಲಕ, ತಕ್ಷಣ ಬಸ್‌ನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಕೆಳಗಿಳಿಸಿದ್ದಾರೆ. ನಂತರ ಬ್ಯಾಟರಿ ಬಳಿ ಹೊಗೆಯನ್ನು ಗಮನಿಸಿ, ಕೂಡಲೇ ವೈರ್ ಸಂಪರ್ಕ ಕಡಿತಗೊಳಿಸಿ ಆಗಬಹುದಿದ್ದ ಭಾರೀ ಅನಾಹುತವನ್ನು ತಪ್ಪಿಸಿದ್ದಾರೆ. ಚಾಲಕನ ಸಮಯಪ್ರಜ್ಞೆ ಹಾಗೂ ತಕ್ಷಣದ ಪರಿಹಾರ ಕ್ರಮದಿಂದ ದೊಡ್ಡ ಅವಘಡ ತಪ್ಪಿದಂತಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಚಾಲಕ ಪವನ್, ಅರಮನೆ ದಕ್ಷಿಣ ದ್ವಾರದ ಬಳಿ ಚಲಿಸುತ್ತಿದ್ದಾಗ ಬಸ್ ಒಳಗೆ ದಿಢೀರ್ ದಟ್ಟ ಹೊಗೆ ಆವರಿಸಿತು. ತಕ್ಷಣ ಬಸ್ ನಿಲ್ಲಿಸಿ, ಎಲ್ಲಿಂದ ಹೊಗೆ ಬರುತ್ತಿದೆ ಎಂಬುದನ್ನು ಗಮನಿಸಿದೆ. ಬ್ಯಾಟರಿ ಅಳವಡಿಸಿದ್ದ ಜಾಗದಲ್ಲಿ ಹೊಗೆಯೊಂದಿಗೆ ಬೆಂಕಿ ಕಾಣಿಸಿಕೊಂಡಿತ್ತು. ತಕ್ಷಣ ಬ್ಯಾಟರಿಗಿದ್ದ ಸಂಪರ್ಕ ಕಡಿತಗೊಳಿಸಿ, ಪ್ರಯಾಣಿಕರನ್ನು ಕೆಳಗಿಳಿಯುವಂತೆ ಸೂಚಿಸಿದೆ. ಆದರೆ ಮಧ್ಯದ ಬಾಗಿಲು ಎಷ್ಟೇ ಪ್ರಯತ್ನಪಟ್ಟರೂ ತೆರೆಯಲಿಲ್ಲ. ಮುಂದಿನ ಬಾಗಿಲಿನಿಂದಲೇ ಎಲ್ಲರನ್ನೂ ಕೆಳಗಿಳಿಸಿ, ಸಾರ್ವಜನಿಕರ ಸಹಾಯದಿಂದ ಬೆಂಕಿ ನಂದಿಸಲಾಯಿತು ಎಂದು ತಿಳಿಸಿದರು.

ಷೇರು ಹೂಡಿಕೆ ಆಸಕ್ತಿಗೆ 16.7ಲಕ್ಷ ಕಳೆದುಕೊಂಡ ಮಹಿಳೆ

ಮೈಸೂರು, ಏ.3(ಎಸ್‌ಪಿಎನ್)– ಷೇರು ಮಾರುಕಟ್ಟೆ ಹೂಡಿಕೆ ನೆಪದಲ್ಲಿ ಮಹಿಳೆಯೊಬ್ಬರು 16.7 ಲಕ್ಷ ರೂ. ವಂಚನೆಗೆ ಒಳಗಾಗಿರುವ ಘಟನೆ ವಿಜಯನಗರ 3ನೇ ಹಂತದಲ್ಲಿ ನಡೆದಿದೆ. ಯೂಟ್ಯೂಬ್ ಮೂಲಕ ಷೇರು ಮಾರುಕಟ್ಟೆ ಜಾಹೀರಾತು ಗಮನಿಸಿ, ಹೂಡಿಕೆಯಲ್ಲಿ ಆಸಕ್ತಿ ತೋರಿದ್ದಾರೆ. ಜಾಹೀರಾತಿನ ಲಿಂಕ್ ಒತ್ತಿ ಮಾಹಿತಿಗಾಗಿ ಮನವಿ ಮಾಡಿದ್ದಾರೆ. ಬಳಿಕ ಕಂಪನಿಯ ವೀರ್‌ರಾವತ್ ಎಂಬಾತ ಮಹಿಳೆಗೆ ಕರೆ ಮಾಡಿದ್ದಾನೆ.

ಕಚ್ಚಾತೈಲಕ್ಕೆ ಸಂಬಂಧಿಸಿದಂತೆ ಹೆಚ್ಚು ಹಣ ಹೂಡಿಕೆ ಮಾಡಿದರೆ ಕೋಟ್ಯಾಂತರ ರೂ. ಲಾಭ ಗಳಿಸಬಹುದು ಎಂದು ನಂಬಿಸಿದ್ದಾರೆ. ಇವರ ಮಾತನ್ನು ನಂಬಿದ ಮಹಿಳೆ ಹಂತಹಂತವಾಗಿ ಅವರು ಹೇಳಿದ ಖಾತೆಗೆ 16.7 ಲಕ್ಷ ವರ್ಗಾವಣೆ ಮಾಡಿ, ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ

ಜೂಜಾಟ: ಆರು ಮಂದಿ ಬಂಧನ

ಮೈಸೂರು, ಏ.3(ಎಸ್‌ಪಿಎನ್)– ಜೂಜಾಟದಲ್ಲಿ ತೊಡಗಿದ್ದ ಆರು ಮಂದಿಯನ್ನು ಬಂಧಿಸಿರುವ ವರುಣಾ ಪೊಲೀಸರು, ಪಣಕ್ಕಿಟ್ಟಿದ್ದ 4,410 ರೂ. ಹಣವನ್ನು ವಶಕ್ಕೆ ಪಡೆದಿದ್ದಾರೆ. ಮೈಸೂರು ತಾಲೂಕಿನ ಪಿಲ್ಲಹಳ್ಳಿ ಗ್ರಾಮದ ಬಸವೇಶ್ವರ ದೇವಾಲಯದ ಸಮೀಪ ಜೂಜಾಟ ನಡೆಯುತ್ತಿದೆ ಎಂದು ಸಾರ್ವಜನಿಕರು ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ತೆರಳಿ ದಾಳಿ ನಡೆಸಿದ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ ಆರು ಮಂದಿಯನ್ನು ಬಂಧಿಸಿದ್ದಾರೆ. ಸ್ಥಳದಲ್ಲಿ ನಗದು ಹಾಗೂ ಇತರೆ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮನೆ ಹಿಂಬಾಗಿಲು ಮುರಿದು ಚಿನ್ನಾಭರಣ ಕಳ್ಳತನ

ಕ್ರೈಂ ಬಾಕ್ಸ್

ಮೈಸೂರು,ಏ.3(ಎಸ್‌ಪಿಎನ್)– ಮನೆಯ ಹಿಂಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು, ಮನೆಯಲ್ಲಿದ್ದ ಲಕ್ಷಾಂತರ ರೂ. ಚಿನ್ನಾಭರಣಗಳನ್ನು ಕದ್ದು ಪರಾರಿಯಾಗಿರುವ ಘಟನೆ ಟಿ.ಕೆ.ಬಡಾವಣೆಯಲ್ಲಿ ನಡೆದಿದೆ.

ಮೈಸೂರು ಟಿ.ಕೆ.ಬಡಾವಣೆ ನಿವಾಸಿ ಜಯಪ್ರಕಾಶ್ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದ್ದು, ಮಾ.23 ರಂದು ಜಯಪ್ರಕಾಶ್, ಕುಟುಂಬ ಸಮೇತ ಶೃಂಗೇರಿಗೆ ತೆರಳಿದ್ದಾರೆ. ಬಳಿಕ ಕಣ್ಣಿನ ಶಸ್ತ್ರಚಿಕಿತ್ಸೆ ಗೆಂದು ಬೆಂಗಳೂರಿಗೆ ತೆರಳಿ ಅಲ್ಲಿ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡಿದ್ದಾರೆ. ಏ.1ರಂದು ಜಯಪ್ರಕಾಶ್ ವಾಸವಿದ್ದ ಪಕ್ಕದ ಮನೆಯವರು ಕರೆ ಮಾಡಿ ನಿಮ್ಮ ಮನೆಯ ಹಿಂಬಾಗಿಲು ತೆರೆದಿದೆ ಎಂದು ಮಾಹಿತಿ ನೀಡಿದ್ದಾರೆ. ಬಳಿಕ ಸಂಜೆ ವೇಳೆಗೆ ಮನೆಗೆ ಬಂದು ಪರಿಶೀಲನೆ ನಡೆಸಿದಾಗ ಈ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೈಕ್ ಡಿಕ್ಕಿ: ರಸ್ತೆ ದಾಟುತ್ತಿದ್ದ ವೃದ್ಧೆ ಸಾವು

ಮೈಸೂರು, ಏ.3(ಎಸ್‌ಪಿಎನ್)– ರಸ್ತೆ ದಾಟುತ್ತಿದ್ದ ವೃದ್ಧೆಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ಮೈಸೂರು ವಿದ್ಯಾನಗರ ನಿವಾಸಿ ಮಹದೇವಮ್ಮ (75) ಮೃತ ಮಹಿಳೆ. ಅವರು ಗುರುವಾರ ಸಂಜೆ ನಗರದ ಯರಗನಹಳ್ಳಿಯ ಮಲೈ ಮಹದೇಶ್ವರ ರಸ್ತೆ ದಾಟುತ್ತಿದ್ದಾಗ ಗಿರಿಯಾಭೋವಿ ಪಾಳ್ಯ ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಪ್ರೇಮ್ ಕುಮಾರ್, ಅವರಿಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ಕೆಳಗೆ ಬಿದ್ದ ಮಹದೇವಮ್ಮ ಅವರ ತಲೆಗೆ ತೀವ್ರ ಪೆಟ್ಟಾಗಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೆಹಲಿ ಸೇರಿ ಉತ್ತರ ಭಾರತದ ಹಲವೆಡೆ ಭೂಕಂಪ

ದೆಹಲಿ: ಅಫ್ಘಾನಿಸ್ತಾನದ ಹಿಂದೂಕುಶ್ ಪರ್ವತ ಶ್ರೇಣಿಯನ್ನು ಕೇಂದ್ರವಾಗಿಟ್ಟುಕೊಂಡು ಸಂಭವಿಸಿದ 5.9 ತೀವ್ರತೆಯ ಈ ಭೂಕಂಪದ ಅಲೆಗಳು ಉತ್ತರ ಭಾರತದ ಹಲವು ರಾಜ್ಯಗಳಿಗೆ ವ್ಯಾಪಿಸಿವೆ. ಅದರಂತೆ, ರಾಷ್ಟ್ರರಾಜಧಾನಿ ದೆಹಲಿ ಸೇರಿದಂತೆ ಉತ್ತರ ಭಾರತದ ಹಲವು ಸ್ಥಳಗಳಲ್ಲಿ ಪ್ರಬಲ ಭೂಕಂಪನಗಳು ಉಂಟಾಗಿದ್ದು, ಜನರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ. ವರದಿಗಳ ಪ್ರಕಾರ, ನೋಯ್ಡಾದಿಂದ ಜಮ್ಮು ಮತ್ತು ಕಾಶ್ಮೀರದವರೆಗೆ ಭೂಮಿ ಕಂಪಿಸಿದೆ ಎನ್ನಲಾಗಿದೆ.

ರಿಕ್ಟರ್ ಮಾಪಕದಲ್ಲಿ 5.9 ತೀವ್ರತೆ ದಾಖಲು: ಹವಾಮಾನ ಇಲಾಖೆ ಮತ್ತು ಭೂಕಂಪನ ಶಾಸ್ತ್ರ ಕೇಂದ್ರದ ಮಾಹಿತಿಯ ಪ್ರಕಾರ, ಈ ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 5.9 ರಷ್ಟು ದಾಖಲಾಗಿದೆ. ಈ ಪ್ರಬಲ ಕಂಪನದ ಕೇಂದ್ರಬಿಂದು ಅಫ್ಘಾನಿಸ್ತಾನದಲ್ಲಿದ್ದು, ಭೂಮಿಯ ಮೇಲ್ಮೈಯಿಂದ ಸುಮಾರು 175 ಕಿಲೋಮೀಟರ್ ಆಳದಲ್ಲಿ ಈ ಇದರ ಚಟುವಟಿಕೆಗಳು ನಡೆದಿವೆ ಎಂದು ವರದಿಯಾಗಿದೆ.

ರಾತ್ರಿ 9.50ರ ಸುಮಾರಿಗೆ ರಿಕ್ಟರ್ ಮಾಪಕದಲ್ಲಿ ಭೂಕಂಪದ ತೀವ್ರತೆ 5.9 ದಾಖಲಾಗಿದೆ. ಅದರಂತೆ, ಕಂಪನಗಳು ಪಂಜಾಬ್‌ನ ನೋಯ್ಡಾ, ಚಂಡೀಗಢ, ಲುಧಿಯಾನ, ಮತ್ತು ಜಮ್ಮು ಮತ್ತು ಕಾಶ್ಮೀರದ ಪೂಂಚ್, ಶ್ರೀನಗರ ಮತ್ತು ಉಧಂಪುರ ಸೇರಿದಂತೆ ಹಲವಾರು ನಗರಗಳಿಂದ ವರದಿಯಾಗಿವೆ.

ಸದ್ಯಕ್ಕೆ ಭಾರತದ ಯಾವುದೇ ಭಾಗದಲ್ಲಿ ಪ್ರಾಣಹಾನಿ ಅಥವಾ ಆಸ್ತಿಪಾಸ್ತಿ ನಷ್ಟದ ವರದಿಯಾಗಿಲ್ಲ. ಆದರೆ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ಗಡಿ ಭಾಗಗಳಲ್ಲಿ ಕಂಪನದ ತೀವ್ರತೆ ಹೆಚ್ಚಿದ್ದರಿಂದ ಅಲ್ಲಿನ ಪರಿಸ್ಥಿತಿಯ ಬಗ್ಗೆ ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ. ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದ್ದು, ಇಂತಹ ಸಂದರ್ಭಗಳಲ್ಲಿ ಶಾಂತವಾಗಿರುವುದು ಮತ್ತು ಸುರಕ್ಷಿತ ಸ್ಥಳಗಳನ್ನು ತಲುಪುವುದು ಅತ್ಯಗತ್ಯ.

ಮೈಸೂರಲ್ಲಿ ನಾಳೆ ಲಿಂಗ ಭೈರವಿ ದೇವಿ ದರ್ಶನ

ಮೈಸೂರು, ಏ.3– ನಗರದಲ್ಲಿ ಮೊದಲ ಬಾರಿಗೆ 'ಲಿಂಗ ಭೈರವಿ ದೇವಿ ದರ್ಶನ'ವನ್ನು ಏರ್ಪಡಿಸಲಾಗಿದೆ. ವಿಶ್ವೇಶ್ವರನಗರದ ಸಿಂಧೂರ ಕನ್ವೆನ್ಷನ್ ಹಾಲ್‌ನಲ್ಲಿ ಏ.5ರಂದು ಸಂಜೆ 6 ರಿಂದ ರಾತ್ರಿ 8ರವರೆಗೆ ಲಿಂಗ ಭೈರವಿ ದೇವಿಯ ದರ್ಶನ ಪಡೆಯಬಹುದಾಗಿದೆ. ದೇವಿಯ ಅದ್ಭುತ ಸಾನ್ನಿಧ್ಯವನ್ನು ಅನುಭವಿಸುವ ಸದವಕಾಶ ಇದಾಗಿದ್ದು, ಶಕ್ತಿಯುತ ಸ್ತುತಿ ಪಠಣ, ವಿಶೇಷ ಅರ್ಪಣೆ, ಧ್ಯಾನ ಮತ್ತು ಭಕ್ತಿಗೀತೆಗಳನ್ನು ಆಸ್ವಾದಿಸಬಹುದಾಗಿದೆ.

ಈ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಕುಟುಂಬ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಭಾಗವಹಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ. ಭಾಗವಹಿಸುವವರಿಗೆ ಮುಂಗಡ ನೋಂದಣಿ ಕಡ್ಡಾಯವಾಗಿದ್ದು, ಉಚಿತ ನೋಂದಣಿಗೆ: https://isha.co/MYS-DeviDarshan ಸಂಪರ್ಕಿಸುವಂತೆ ತಿಳಿಸಲಾಗಿದೆ.

ರಾಮಸನ್ಸ್ ಬೊಂಬೆ ಮನೆಯಲ್ಲಿ ಪಾರಂಪರಿಕ ಹಾಸು ಆಟಗಳ ಅನಾವರಣ

'ರಾಮ್‌ಸನ್ಸ್ ಕ್ರೀಡಾ ಕೌಶಲ್ಯ' ದ್ವೈವಾರ್ಷಿಕ ಪ್ರದರ್ಶನದ 11ನೇ ಆವೃತ್ತಿಗೆ ನಟ ವಿನಯ್ ಚಾಲನೆ



'ರಾಮ್‌ಸನ್ಸ್ ಕ್ರೀಡಾ ಕೌಶಲ್ಯ' ಪಾರಂಪರಿಕ ಹಾಸು ಆಟಗಳ ದ್ವೈವಾರ್ಷಿಕ ಪ್ರದರ್ಶನದ 11ನೇ ಆವೃತ್ತಿಗೆ ನಟ ವಿನಯ್ ರಾಘವೇಂದ್ರ ರಾಜ್‌ಕುಮಾರ್ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು, ಏ.3(ವಿವಿಹೆಚ್)– ಮೈಸೂರಿನ 'ರಾಮ್‌ಸನ್ಸ್ ಕ್ರೀಡಾ ಕೌಶಲ್ಯ' ಪಾರಂಪರಿಕ ಹಾಸು ಆಟಗಳ ದ್ವೈವಾರ್ಷಿಕ ಪ್ರದರ್ಶನದ 11ನೇ ಆವೃತ್ತಿಗೆ ನಟ ವಿನಯ್ ರಾಘವೇಂದ್ರ ರಾಜ್‌ಕುಮಾರ್ ಶುಕ್ರವಾರ ಚಾಲನೆ ನೀಡಿದರು.

ನಜರ್‌ಬಾದ್‌ನ ರಾಮಸನ್ಸ್ ಬೊಂಬೆ ಮನೆಯಲ್ಲಿ ಜ್ಯೋತಿ ಬೆಳಗಿದ ವಿನಯ್, ಬಳಿಕ ತಮಿಳುನಾಡು ಮೂಲದ ಪತ್ರಾಗಟ್ಟಂ ಹಾಸು ಆಟವನ್ನು ಮೈಸೂರಿಗರಿಗೆ ಪರಿಚಯಿಸಿದರು.

ಈ ವೇಳೆ ಲೇಖಕ ಗಣೇಶ್ ವಿ.ಶಿವಸ್ವಾಮಿ ಹೊಸ ಬೋರ್ಡ್ ಗೇಮ್ (ಹಾಸು ಆಟ)ಗಳನ್ನು ಅನಾವರಣಗೊಳಿಸಿದರೆ, ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭ ಸಂಜಯ್ ಅರಸ್ 'ಇಂಡಿಯನ್ ಟ್ರೆಡಿಷನಲ್ ಬೋರ್ಡ್‌ಗೇಮ್ಸ್' ಪುಸ್ತಕದ ಪರಿಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ನಟ ವಿನಯ್ ನಮ್ಮ ದೇಸಿ ಸೊಗಡು, ಜಾನಪದ ಕ್ರೀಡೆಗಳನ್ನು ಆಧುನಿಕ ಜಗತ್ತಿಗೆ ಪರಿಚಯಿಸುವ ಕೆಲಸವನ್ನು ರಾಮ್‌ಸನ್ಸ್ ಬೊಂಬೆ ಮನೆ ಮುಂದುವರೆಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ನಾನು, ನಮ್ಮ ತಾತನವರಾದ ಡಾ.ರಾಜ್‌ಕುಮಾರ್ ಮತ್ತು ಕುಟುಂಬದವರೊಂದಿಗೆ ಹಲವಾರು ಬಾರಿ ಇಲ್ಲಿಗೆ ಬಂದು ವೀಕ್ಷಣೆ ಮಾಡಿದ್ದೇನೆ ಎಂದು ಸ್ಮರಿಸಿಕೊಂಡರು.

ಬೋರ್ಡ್ ಗೇಮ್ಸ್ ಹಾಗೂ ಮೈಸೂರಿಗೆ ಬಹಳ ಹತ್ತಿರದ ನಂಟಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಹಾಸು ಆಟಗಳ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದರಿಂದ ಆ ಬಗ್ಗೆ ಹಲವಾರು ಸಂಶೋಧನೆಗಳನ್ನು ನಡೆಸಿದ್ದರೆಂದು ತಿಳಿದಿದ್ದೇನೆ. ರಾಮ್‌ಸನ್ಸ್ ಸಂಸ್ಥೆ ಮೈಸೂರು ಮಾತ್ರವಲ್ಲ ದೇಶದ ವಿಶಿಷ್ಟ ಹಾಸು ಆಟಗಳ ಬಗ್ಗೆ ಮೈಸೂರಿಗರಿಗೆ ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದರು.

ಈ ವೇಳೆ ಲೇಖಕರು ಹಾಗೂ ಸಂಗೀತಗಾರರಾದ ಡಾ.ಮಾಣಿಕ್ ಎ.ವಿ. ಬೆಂಗೇರಿ, ರಾಮ್‌ಸನ್ಸ್ ಬೊಂಬೆ ಮನೆಯ ಆರ್.ಜಿ.ಸಿಂಗ್, ಅಜಯ್ ಕುಮಾರ್ ಸಿಂಗ್, ರಾಹುಲ್ ಸಿಂಗ್, ಮನೀಶ್ ಶರ್ಮಾ, ಶ್ರೀಕಾಂತ್, ಅರಿಣಿತಾ, ಪ್ರೀತಿ, ರಾಹುಲ್ ಮತ್ತಿತರರು ಉಪಸ್ಥಿತರಿದ್ದರು.

ಕಣ್ಮನ ಸೆಳೆದ ಚಿತ್ತಾಕರ್ಷಕ ಹಾಸು ಆಟಗಳು: ರಾಜಪ್ರಭುತ್ವದಲ್ಲಿ ಹಾಸು ಆಟಗಳಿಗೆ ಹೆಸರುವಾಸಿಯಾಗಿದ್ದಾಗ ಬೆಳ್ಳಿ, ತೇಗ, ಮರ, ಹಿತ್ತಾಳೆ, ತಾಮ್ರ ಮತ್ತು ಎನಾಮೆಲ್ಡ್ ಹಿತ್ತಾಳೆಯಂತಹ ವಿವಿಧ ವಸ್ತುಗಳಿಂದ ಮೂವತ್ತೆರಡು ಚದುರಂಗ ಸೆಟ್‌ಗಳನ್ನು ತಯಾರಿಸಲಾಗಿದ್ದು, ಅವು ಹೆಚ್ಚು ಆಕರ್ಷಿತವಾಗಿವೆ. ರೇಷ್ಮೆ ನೇಯ್ಗೆ, ರೇಷ್ಮೆ ಕಸೂತಿ, ಕೈಯಿಂದ ನೇಯ್ದ ಹತ್ತಿ ಗೋಡೆಯ ಹ್ಯಾಂಗಿಂಗ್‌ಗಳು, ಬಾಟಿಕ್, ಕಲಂಕರಿ, ಕೆತ್ತನೆ, ಚೌಕಿಗಳು ಮನಸೆಳೆಯುತ್ತವೆ. ವಿವಿಧ ಕರಕುಶಲ ಹಾಸು ಆಟಗಳಾದ ಚೌಕಾಬಾರ, ಆಡು–ಹುಲಿ, ಅಳಿಗುಳಿಮನೆ, ಚದುರಂಗ, ನವಕನಕರಿ, ಪರಾತಕರಿ, ಹಸುಪದ, ಹಸುವಿನ ಆಟ ಪತ್ರಗಟ್ಟಂ, ಸಿಂಗಂ, ಬಸವನ ಆಟ, ಹದಿನಾರು ಸಿಪಾಯಿಗಳು, ದಶ ಗುತ್ತಿ, ಎಗರಗುತ್ತಿ, ಶರವ್ಯೂಹ, ಬೂದಿ–ತಪದ ಹೀಗೆ ಹಲವು ಬಗೆಯ ಬಟ್ಟೆ ನೇಯ್ಗೆಯ ಪಾರಂಪರಿಕ ಆಟಗಳ ಮೆರುಗನ್ನು ತಿಳಿಯಬಹುದಾಗಿದೆ.

ಪತ್ರಾಗಟ್ಟಂ ಆಟ ಪರಿಚಯ: ಹಾಸು ಆಟಗಳ ಪ್ರದರ್ಶನದಲ್ಲಿ ಹೊಸ 'ಪತ್ರಾಗಟ್ಟಂ' ಆಟವನ್ನು ಮೊದಲ ಬಾರಿಗೆ ಮೈಸೂರಿನಲ್ಲಿ ಪರಿಚಯಿಸಲಾಗಿದೆ. ಇಬ್ಬರು ಆಟಗಾರರು ತಲಾ ಏಳು ಕಾಯಿಗಳನ್ನು ಬಳಸಿ ಒಂದೇ ಮಾರ್ಗದಲ್ಲಿ ಆಡುವ ಈ ಸರಳ ಆಟವು ಸಾಮಾನ್ಯ ರೇಸ್‌ಗೇಮ್ ಆಗಿದೆ. ಪ್ರಸಿದ್ಧ ಲಂಬಾಣಿ ಕಸೂತಿ ಕಲೆಯನ್ನು ಬಳಸಿಕೊಂಡು, ಬಟ್ಟೆಯ ಆಟದ ಹಾಸುಗಳನ್ನು ತಯಾರಿಸಲಾಗಿದೆ. ಈ ಆಟಕ್ಕೆ ಚನ್ನಪಟ್ಟಣದ ಮರದ ಕಾಯಿಗಳನ್ನು ಬಳಸಿರುವುದು ವಿಶೇಷ.

ಮೇ 31ರವರೆಗೆ ವೀಕ್ಷಣೆಗೆ ಮುಕ್ತ

ರಾಮ್‌ಸನ್ಸ್ ಕ್ರೀಡಾ ಕೌಶಲ್ಯ ಪಾರಂಪರಿಕ ಹಾಸು ಆಟಗಳ ದ್ವೈವಾರ್ಷಿಕ ಪ್ರದರ್ಶನದ 11ನೇ ಆವೃತ್ತಿಯು ಇದೇ ಶನಿವಾರ(ಏ.4) ದಿಂದ ಮೇ.31ರವರೆಗೆ ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿರುತ್ತದೆ

> ಡಿಜಿಟಲ್ ಯುಗದಲ್ಲಿ ಮೊಬೈಲ್, ವೀಡಿಯೊ ಗೇಮ್‌ಗಳ ಗೀಳು ಹೆಚ್ಚುತ್ತಿರುವ ಪರಿಣಾಮ ಪಾರಂಪರಿಕ ಆಟಗಳು ವೇಗವಾಗಿ ಕಣ್ಮರೆಯಾಗುತ್ತಿವೆ. ಪ್ರಾಚೀನ ಆಟಗಳು ಜನಜೀವನದಲ್ಲಿ ಬಾಂಧವ್ಯ ಬೆಸೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹೀಗಾಗಿ ಈ ದೇಸಿಯ ಆಟಗಳನ್ನು ಮರು ಪರಿಚಯ ಮಾಡುವ ಕೆಲಸ ಮಾಡಲಾಗುತ್ತಿದೆ.
> –ಗಣೇಶ್ ವಿ.ಶಿವಸ್ವಾಮಿ, ಲೇಖಕ

ಏ.23ರಿಂದ 'ಉಚಿತ ವಸಂತ ವೇದ ಸಂಸ್ಕೃತ ಸಂಸ್ಕಾರ' ಶಿಬಿರ



'ಉಚಿತ ವಸಂತ ವೇದ ಸಂಸ್ಕೃತ ಸಂಸ್ಕಾರ' ಶಿಬಿರದ ಪೋಸ್ಟರ್ ಬಿಡುಗಡೆ

ಮೈಸೂರು, ಏ.3(ಎಸ್‌ಪಿಎನ್)– ಮೈಸೂರಿನ ಅಗ್ರಹಾರದಲ್ಲಿನ ಶಂಕರ ಮಠದ ಶ್ರೀ ಅಭಿನವ ಶಂಕರಾಲಯದಲ್ಲಿ ಉಪನಯನವಾಗಿರುವ 7 ರಿಂದ 16 ವರ್ಷದ ಮಕ್ಕಳಿಗಳಿಗೆ ಏರ್ಪಡಿಸಿರುವ 'ಉಚಿತ ವಸಂತ ವೇದ ಸಂಸ್ಕೃತ ಸಂಸ್ಕಾರ' ಶಿಬಿರದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು.

ಈ ಶಿಬಿರವು ಏ.23ರಿಂದ ಮೇ 2ರವರೆಗೆ ಸಂಜೆ 4 ರಿಂದ ರಾತ್ರಿ 7 ಗಂಟೆವರೆಗೆ ನಡೆಯಲಿದ್ದು, ವೇದ ಸಂಸ್ಕೃತ ಸಂಸ್ಕಾರ, ಬಸ್ಮಧಾರಣ, ವಿಧಿ, ಭೋಜನ ವಿಧಿ ಹಾಗೂ ಸೂತ್ರಗಳು, ಗೀತಾಪಾಠ, ಭಜನೆ, ಸಂಧ್ಯಾ–ವಂದನೆ, ಅಗ್ನಿಕಾರ್ಯದ ವಿಧಿ–ವಿಧಾನದ ಬಗ್ಗೆ ಮಾರ್ಗದರ್ಶನ ನೀಡಲಾಗುವುದು.

ಈ ಶಿಬಿರದಲ್ಲಿ ಭಾಗವಹಿಸುವವರು ಏ.20 ರೊಳಗೆ ಹೆಸರು ನೋಂದಾಯಿಸುವಂತೆ ಶ್ರೀಮಠದ ಧರ್ಮಾಧಿಕಾರಿ ರಾಮಚಂದ್ರ ಹಾಗೂ ವ್ಯವಸ್ಥಾಪಕ ಶೇಷಾದ್ರಿ ಭಟ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ.ಸಂ:0821–2448213, 9448185448 ಸಂಪರ್ಕಿಸಬಹುದು.

ಅಭಿನಂದನೆ



ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದ ಮಾಜಿ ಸಚಿವ ಹಾಗೂ ಹಿರಿಯ ರಾಜಕೀಯ ಮುತ್ಸದ್ಧಿ, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಚೀಫ್ ಕಮೀಷನರ್ ಪಿಜಿಆರ್ ಸಿಂಧ್ಯಾ ಅವರನ್ನು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಮೈಸೂರು ಉದ್ಯಮಿ ಮೆಹು ಜೆ. ಪಟೇಲ್ ಇತರರು ಉಪಸ್ಥಿತರಿದ್ದರು.

ಲಿಂಗಾಯತ ಧರ್ಮದ ಇತ್ತೀಚಿನ ಬೆಳವಣಿಗೆ ಕುರಿತಾದ ಸಭೆ



ಚಿಂತನ–ಮಂಥನ ಸಭೆ ಬಳಿಕ ಬಸವ ಕೇಂದ್ರದ ಮುಂಭಾಗ ತೆಗೆದ ಭಾವಚಿತ್ರ

ಮೈಸೂರು, ಏ.3(ಎಸ್‌ಪಿಎನ್)– ಮೈಸೂರು ಅಗ್ರಹಾರದ ಬಸವ ಕೇಂದ್ರದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ 'ಲಿಂಗಾಯತ ಧರ್ಮದ ಇತ್ತೀಚಿನ ಬೆಳವಣಿಗೆಗಳು' ಕುರಿತಾದ ಚಿಂತನ–ಮಂಥನ ಸಭೆ ಶುಕ್ರವಾರ ನಡೆಯಿತು.

ಸಭೆಯಲ್ಲಿ ವಿಜಯಪುರದ ಲೇಖಕ ಡಾ.ಜೆ.ಎಸ್.ಪಾಟೀಲ್ ಲಿಂಗಾಯತ ಧರ್ಮದ ಇತ್ತೀಚಿನ ಬೆಳವಣಿಗೆ ಕುರಿತು ಮಾಹಿತಿ ನೀಡಿದರು. ಈ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ವಿಚಾರ ಮಂಥನ ಸಭೆಗಳು ಪರಿಣಾಮಕಾರಿಯಾಗಿ ನಡೆಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಮೈಸೂರು ಘಟಕದ ಅಧ್ಯಕ್ಷ ಶರಣ ಮಹದೇವಪ್ಪ, ಜಿಲ್ಲಾ ಕಾರ್ಯದರ್ಶಿ ಬಿ.ಎಂ.ಮರಪ್ಪ ಹಾಗೂ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ರಾಷ್ಟ್ರೀಯ ನಾಣ್ಯಶಾಸ್ತ್ರ ಪ್ರದರ್ಶನ



ಮೈಸೂರು, ಏ.3– ತಮಿಳುನಾಡಿನ ಕೊಯಮತ್ತೂರಿನಲ್ಲಿರುವ 'ದಿ ಏನ್ಷಿಯಂಟ್ ಟೈಮ್ಸ್'ನ ಪ್ರಾಚೀನ ತಜ್ಞ ಮಲಯಾಳಸಾಮಿ ಆಯೋಜಿಸಿರುವ ಏಳನೇ ರಾಷ್ಟ್ರೀಯ ನಾಣ್ಯಶಾಸ್ತ್ರ ಪ್ರದರ್ಶನವು ನಗರದ ಅಶೋಕ ರಸ್ತೆಯಲ್ಲಿರುವ ಕನ್ಯಕಾ ಮಹಲ್‌ನಲ್ಲಿ ಶುಕ್ರವಾರ ಪ್ರಾರಂಭವಾಯಿತು.

ಮೂರು ದಿನಗಳ ಈ ಪ್ರದರ್ಶನದಲ್ಲಿ ಬಂಗಾರ, ಬೆಳ್ಳಿ, ತಾಮ್ರದ ಅಪರೂಪದ ನಾಣ್ಯಗಳು, ಬ್ಯಾಂಕ್ ನೋಟುಗಳು, ಪದಕಗಳು, ಟೋಕನ್‌ಗಳು, ಉಚಿತ ನಾಣ್ಯ ಮೌಲ್ಯಮಾಪನ ಸೇವೆ, ಪ್ರಾಚೀನ ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಇರಲಿದೆ. ಪ್ರದರ್ಶನದಲ್ಲಿ ಕೆ.ಬಿ. ಬಾಬುರಾಜ್ ಅವರು 2,600 ವರ್ಷಗಳ ಭಾರತ ನಾಣ್ಯ ಶಾಸ್ತ್ರದ ಇತಿಹಾಸವನ್ನು ತಿಳಿಸಲಿದ್ದಾರೆ.

ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿದೆ ಮತ್ತು ಪ್ರದರ್ಶನವು ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ ಏಪ್ರಿಲ್ 5 ರವರೆಗೆ ತೆರೆದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ, ಮೊ: 98434–48548 ಅನ್ನು ಸಂಪರ್ಕಿಸಿ.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಭಾರತಕ್ಕೆ ಕಚ್ಚಾ ತೈಲ

ಎಲ್‌ಎನ್‌ಜಿ ಸರಬರಾಜು ಹೆಚ್ಚಿಸಲು ಸಿದ್ಧ: ರಷ್ಯಾ



ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಉದ್ವಿಗ್ನತೆಗಳು ಜಾಗತಿಕ ಇಂಧನ ಬೆಲೆಗಳಲ್ಲಿ ಅನಿಶ್ಚಿತತೆ ಮತ್ತು ಏರಿಳಿತಗಳಿಗೆ ಕಾರಣವಾಗುತ್ತಿವೆ. ಈ ಪರಿಸ್ಥಿತಿಯಲ್ಲಿ, ರಷ್ಯಾ ಭಾರತಕ್ಕೆ ಹೆಚ್ಚಿನ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲವನ್ನು ಪೂರೈಸಲು ಮುಂದಾಗಿದೆ. ಇದೇ ಸಮಯದಲ್ಲಿ, ಎರಡೂ ದೇಶಗಳು ತಮ್ಮ ಒಟ್ಟಾರೆ ಸಂಬಂಧವನ್ನು ಬಲಪಡಿಸಲು ಒಪ್ಪಿಕೊಂಡಿವೆ.

ರಷ್ಯಾದ ಮೊದಲ ಉಪ ಪ್ರಧಾನಿ ಡೆನಿಸ್ ಮಾಂಟುರೊವ್ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ನಡೆಸಿದ ಸಭೆಗಳಲ್ಲಿ ಇಂಧನ ಸಹಕಾರವು ಪ್ರಮುಖ ವಿಚಾರವಾಗಿದೆ ಎಂದು ಮೂಲಗಳು ತಿಳಿಸಿವೆ.

ಮಂಟುರೋವ್ ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಮಾತುಕತೆ ನಡೆಸಿದರು ಮತ್ತು ನಿನ್ನೆ ಸಂಜೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು.

ನವದೆಹಲಿಯಲ್ಲಿ ನಡೆದ ಸಭೆ ಕುರಿತು ರಷ್ಯಾದ ಅಧಿಕೃತ ಹೇಳಿಕೆಯು, ರಷ್ಯಾ ಮತ್ತು ಭಾರತದ ನಡುವಿನ ತೈಲ ಮತ್ತು ಅನಿಲ ವಲಯದಲ್ಲಿ ದ್ವಿಪಕ್ಷೀಯ ಸಹಕಾರಕ್ಕೆ ವಿಶೇಷ ಗಮನ ನೀಡಲಾಗಿದೆ ಎಂದು ಹೇಳಿದೆ.

'ಭಾರತೀಯ ಮಾರುಕಟ್ಟೆಗೆ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಸರಬರಾಜನ್ನು ಸ್ಥಿರವಾಗಿ ಹೆಚ್ಚಿಸುವ ಸಾಮರ್ಥ್ಯವನ್ನು ರಷ್ಯಾದ ಕಂಪನಿಗಳು ಹೊಂದಿವೆ ಎಂದು ಡೆನಿಸ್ ಮಾಂಟುರೊವ್ ದೃಢಪಡಿಸಿದ್ದಾರೆ.

ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲ ಮತ್ತು ಅನಿಲ ಸರಬರಾಜಿನಲ್ಲಿನ ಅಡಚಣೆಗಳಿಂದಾಗಿ ಪಶ್ಚಿಮ ಏಷ್ಯಾ ಬಿಕ್ಕಟ್ಟು ಜಾಗತಿಕ ಇಂಧನ ಮಾರುಕಟ್ಟೆಯ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿರುವ ಹೊತ್ತಿನಲ್ಲಿ ರಷ್ಯಾ ಈ ಹೇಳಿಕೆ ನೀಡಿದೆ.

ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾಗಿದ್ದು, ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿ ನಡುವಿನ ಕಿರಿದಾದ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ನಿರ್ಬಂಧಿಸಿದೆ. ಇದು ಜಾಗತಿಕ ತೈಲ ಮತ್ತು ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ದ ಸರಿ ಸುಮಾರು ಶೇ 20 ರಷ್ಟು ಅವಶ್ಯಕತೆಯನ್ನು ನಿರ್ವಹಿಸುತ್ತದೆ. ಹೀಗಾಗಿ, ಜಾಗತಿಕ ತೈಲ ಮತ್ತು ಅನಿಲ ಬೆಲೆಗಳು ಗಗನಕ್ಕೇರಿವೆ. ಪಶ್ಚಿಮ ಏಷ್ಯಾವು ಭಾರತದ ಇಂಧನ ಸಂಗ್ರಹಣೆಯ ಪ್ರಮುಖ ಮೂಲವಾಗಿದೆ.

ಭಾರತ–ರಷ್ಯಾ ಅಂತರ–ಸರ್ಕಾರಿ ವ್ಯಾಪಾರ, ಆರ್ಥಿಕ, ವೈಜ್ಞಾನಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಸಹಕಾರ ಸಹಯೋಗದಲ್ಲಿ ದ್ವಿಪಕ್ಷೀಯ ಸಂಬಂಧಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ವ್ಯಾಪಕವಾಗಿ ಚರ್ಚಿಸಲಾಯಿತು. ಮಾಂಟು ರೋವ್ ಮತ್ತು ಜೈಶಂಕರ್ ಸಭೆಯ ಸಹ ಅಧ್ಯಕ್ಷತೆ ವಹಿಸಿದ್ದರು.

ಮತ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರ ಪರವಾಗಿ ಮೈಸೂರಿನ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ಮನೆ ಮನೆಯಲ್ಲಿ ಮತ ಪ್ರಚಾರ ಮಾಡಲಾಯಿತು. ಈ ವೇಳೆ ಮುಡಾ ಮಾಜಿ ಸದಸ್ಯೆ ಎಸ್. ಲಕ್ಷ್ಮಿದೇವಿ, ಮೈಸೂರು ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ದಾವಣಗೆರೆ ಬಿಜೆಪಿ ಮುಖಂಡರಾದ ಶ್ರೀನಿವಾಸ್, ಕಾರ್ತಿಕ್, ವಿನಾಯಕ ಇನ್ನಿತರರು ಉಪಸ್ಥಿತರಿದ್ದರು.

ಚೆನ್ನೈ ಮಣಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಪಂಜಾಬ್ ಕಿಂಗ್ಸ್



ಅರ್ಧಶತಕ ದಾಖಲಿಸಿದ ಪಂಜಾಬ್ ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್

ಚೆನ್ನೈ, ಏ.3(ವಿವಿಹೆಚ್)– ನಾಯಕ ಶ್ರೇಯಸ್ ಅಯ್ಯರ್ ಜವಾಬ್ದಾರಿಯುತ ಅರ್ಧ ಶತಕದಾಟದ ಬಲದಿಂದಾಗಿ ಅತಿಥೇಯ ಚೆನ್ನೈಸೂಪರ್ ಕಿಂಗ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದ ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 19ನೇ ಆವೃತ್ತಿಯ ಐಪಿಎಲ್–2026ರ 7ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಈ ಮೊತ್ತವನ್ನು ಬೆನ್ನತ್ತಿದ ಪಂಜಾಬ್ ಕಿಂಗ್ಸ್ 18.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 210 ರನ್ ಕಲೆಹಾಕಿ ಗೆಲುವಿನ ನಗೆ ಬೀರಿತು.

ತವರಿನಂಗಳದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈಗೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಸತತ ಎರಡನೇ ಬಾರಿಯೂ ಕಳಪೆ ಬ್ಯಾಟಿಂಗ್ ಪ್ರದರ್ಶನ ತೋರಿದ ಸಂಜು ಸ್ಯಾಮ್ಸನ್ ಕೇವಲ 7 ರನ್‌ಗಳಿಗೆ ಇನ್ನಿಂಗ್ಸ್ ಮುಗಿಸಿದರು. ಬಳಿಕ ಜೊತೆಯಾದ ಆಯುಷ್ ಮ್ಹಾತ್ರೆ ಹಾಗೂ ನಾಯಕ ಋತುರಾಜ್ ಶತಕದ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು.

ಮ್ಹಾತ್ರೆ 43 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸರ್ ಸಹಿತ 73 ರನ್ ಚಚ್ಚಿ ನಿರ್ಗಮಿಸಿದರು. ನಾಯಕ ಋತುರಾಜ್ 22 ಎಸೆತಗಳಲ್ಲಿ 28 ರನ್ ಕಲೆಹಾಕಿದರು. ಕಾರ್ತಿಕ್ ಶರ್ಮಾ 1, ಸರ್ಫರಾಜ್ ಖಾನ್ 32ರನ್ ಗಳಿಸಿದರು.

ಶಿವಂ ದುಬೆ ಮಧ್ಯಮ ಕ್ರಮಾಂಕದಲ್ಲಿ ಸ್ಕ್ರೀಸ್‌ಗಿಳಿದು, ಕೊನೆಯವರೆಗೂ ಆಡಿ 27 ಎಸೆತಗಳಲ್ಲಿ ಅಜೇಯ 45 ರನ್ ಕಲೆಹಾಕಿ ತಂಡದ ಮೊತ್ತ ಇನ್ನೂರರ ಗಡಿ ದಾಟಿಸಿದರು. ಪ್ರಶಾಂತ್ ವೀರ್ 6ರನ್ ಗಳಿಸಿ ಅಜೇಯರಾಗಿ ಉಳಿದರು.

ಪಂಜಾಬ್ ಪರ ವಿಜಯ್‌ಕುಮಾರ್ ವೈಶಾಖ್ 2 ವಿಕೆಟ್, ಜೇವಿಯರ್ ಬಾರ್ಟ್ಲೆಟ್, ಮಾರ್ಕೋ ಜಾನ್ಸನ್ ಹಾಗೂ ಯುಜ್ವೇಂದರ್ ಚಾಹಲ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಪಂಜಾಬ್‌ಗೆ ಉತ್ತಮ ಆರಂಭ ದೊರೆಯಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ಪ್ರಿಯಾಂಶ್ ಆರ್ಯ ಕೇವಲ 33 ಎಸೆತಗಳಲ್ಲಿ 39ರನ್ ಚಚ್ಚಿದರೆ, ಪ್ರಭ್‌ಸಿಮ್ರಾನ್ ಸಿಂಗ್ 34 ಎಸೆತಗಳಲ್ಲಿ 43ರನ್ ಕಲೆ ಹಾಕಿದರು. ಈ ಜೋಡಿ ಕೇವಲ 4.1 ಓವರ್‌ಗಳಲ್ಲಿಯೇ 61ರನ್ ಕಲೆಹಾಕಿ ಮುನ್ನಡೆ ತಂದುಕೊಟ್ಟಿತು.

ಬಳಿಕ ಬಂದ ಕೂಪರ್ ಕೊನೋಲಿ 36 ರನ್‌ಗೆ ವಿಕೆಟ್ ಒಪ್ಪಿಸಿದರೆ, ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ನಾಯಕ ಶ್ರೇಯಸ್ ಅಯ್ಯರ್ 29 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 50ರನ್ ಚಚ್ಚಿ ನಿರ್ಗಮಿಸಿದರು. ನೆಹಲ್ ವದೇರಾ 10 ರನ್ ಗಳಿಸಿದರು.

ಕೊನೆಯಲ್ಲಿ ಒಂದಾದ ಸ್ಟೋಯ್ನಿಸ್ ಹಾಗೂ ಶಶಾಂಕ್ ಸಿಂಗ್ ಅಜೇಯರಾಗಿ ಉಳಿದು ತಲಾ 14 ಮತ್ತು 9 ರನ್ ಬಾರಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಚೆನ್ನೈ ಪರ ಮ್ಯಾಟ್ ಹೆನ್ರಿ ಹಾಗೂ ಅಂಶುಲ್ ಕಾಂಬೋಜ್ ತಲಾ 2 ವಿಕೆಟ್ ಕಿತ್ತರು.

ಒಡೆದಾಳುವ ಬಾಹ್ಯಶಕ್ತಿಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ಸಿದ್ಧರಾಗಿ

ಹನುಮಜಯಂತಿ ಕಾರ್ಯಕ್ರಮದಲ್ಲಿ ಸ್ವತಂತ್ರ ಬಸವಲಿಂಗ ಶಿವಯೋಗಿ ಸ್ವಾಮೀಜಿ ಕರೆ

ವಿರಾಜಪೇಟೆ, ಏ.3– ರಾಷ್ಟ್ರ ಭಕ್ತಿಗೆ ಹಾಗೂ ಭಾರತ ಮಾತೆಗೆ ಚಿರಋಣಿ ಯಾಗಿ ದೇಶಸೇವೆಗೆ ಸೇವಕನಾಗಿ ಬಾಳು ವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ಹಾಸನ ಜಿಲ್ಲೆಯ ಬಸವ ಪಟ್ಟಣ ಮಠದ ಮಠಾಧೀಶರಾದ ಸ್ವತಂತ್ರ ಬಸವ ಲಿಂಗ ಶಿವಯೋಗಿ ಸ್ವಾಮೀಜಿಗಳು ಕರೆ ನೀಡಿದ್ದಾರೆ.

ಪಟ್ಟಣದ ತಾಲೂಕು ಮೈದಾನದ ಅಂಜನಿ ಪುತ್ರ ವೇದಿಕೆಯಲ್ಲಿ ಹನುಮ ಜಯಂತಿ ಅಂಗವಾಗಿ ಗುರುವಾರ ರಾತ್ರಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ಹನುಮನ ರಾಮ ಭಕ್ತಿಯಂತೆ ನಮ್ಮಲ್ಲಿ ಜಾತೀಯತೆ, ಲಿಂಗ ತಾರತಮ್ಯ ತೊಲಗಿ, ಎಲ್ಲರೂ ಸಮಾ ನರು ಎಂಬ ಭಾವನೆ ರೂಪುಗೊಂಡು ರಾಷ್ಟ್ರಭಕ್ತಿ ಜಾಗೃತವಾಗಬೇಕು. ಜಾತಿ ಜಾತಿಗಳ ನಡುವಿನ ಕಂದಕ, ಒಡೆದು ಆಳುವ ನೀತಿಯನ್ನು ಪ್ರತಿಪಾದಿಸುವ ಬಾಹ್ಯ ಶಕ್ತಿಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ಸಿದ್ಧರಾಗಬೇಕು. ಸನಾತನ ಹಿಂದೂ ಪರಂಪರೆ ಮೇಲೆ ಆಕ್ರಮಣವಾದರೂ ಇಂದಿಗೂ ಚಿರಾಯುವಾಗಿದೆ ಎಂದರು.



ಬಸವಪಟ್ಟಣ ಮಠದ ಮಠಾಧೀಶರಾದ ಸ್ವತಂತ್ರ ಬಸವಲಿಂಗ ಶಿವಯೋಗಿ ಸ್ವಾಮೀಜಿ ಹನುಮ ಜಯಂತಿ ಸಮಾರಂಭದಲ್ಲಿ ಮಾತನಾಡಿದರು.

ಹಿಂದೆ ಧರ್ಮದ ಜಾಗೃತಿ ಹಾಗೂ ಉಳಿವಿಗಾಗಿ ಕಾರ್ಯನಿರ್ವಹಿಸುತ್ತಿದ್ದ ಮಠಗಳು ಇಂದು ಬದಲಾದ ಕಾಲಘಟ್ಟ ದಲ್ಲಿ ಶಾಲಾ–ಕಾಲೇಜು, ಹಾಗೂ ವೈದ್ಯ ಕೀಯ ಕಾಲೇಜು ಹೀಗೆ ಆರ್ಥಿಕತೆ ಮೇಲೆ ಚಿಂತನೆ ನಡೆಸಲು ಮುಂದಾಗಿವೆ. ಧರ್ಮ ಪರ ಹಾಗೂ ಧರ್ಮದ ಉಳಿವಿ ಗಾಗಿ ಕಾರ್ಯನಿರ್ವಹಿಸುವ ಸನಾತನಿ ಗಳಿಗೆ ನೆರವು ನೀಡಿದರೆ, ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ಉಳಿವು ಸಾಧ್ಯ. ಹಣ, ಸಾರಾಯಿ, ಅಕ್ಕಿ, ಬಟ್ಟೆ ಹಾಗೂ ಪುಕ್ಕಟೆ ಭಾಗ್ಯಗಳಿಗೆ ಬಲಿಯಾ ಗದೆ ರಾಷ್ಟ್ರ ಹಾಗೂ ಸರ್ವರ ಒಳಿತು ಕಾಯುವ ನಾಯಕನನ್ನು ಗೆಲ್ಲಿಸಿ ಭವ್ಯ ಭಾರತದ ಹಾಗೂ ರಾಮರಾಜ್ಯದ ಕನಸು ನನಸಾಗಲು ಹಿಂದೂಗಳು ಸಂಘಟಿತ ರಾಗಬೇಕು ಎಂದರು.

ವಿಶ್ವ ಹಿಂದೂ ಪರಿಷತ್ತಿನ ದಕ್ಷಿಣ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್ ವೆಲ್, ಆರ್‌ಎಸ್‌ಎಸ್‌ನ ಜಿಲ್ಲಾ ಸರ ಸಂಘ ಚಾಲಕ್ ಚಕ್ಕೇರ ಮನು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹನುಮ ಜಯಂತಿ ಆಯೋಜನಾ ಸಮಿ ತಿಯ ಅಧ್ಯಕ್ಷ ಅಂಜಪರ ವಂಡ ಅನಿಲ್ ಮಂದಣ್ಣ ಮಾತನಾಡಿದರು.

ನಾಟ್ಯಾಂಜಲಿ ಹಾಗೂ ನಾಟ್ಯ ಮಯೂರಿ ನೃತ್ಯಶಾಲೆಯ ಮಕ್ಕಳು ನೃತ್ಯ ಪ್ರದರ್ಶಿಸಿದರು. ಸಮಾರಂಭದಲ್ಲಿ ಭಜರಂಗದಳದ ಜಿಲ್ಲಾ ಸಂಯೋಜಕ ವಿನಯ ಕುಮಾರ್, ದುರ್ಗೇಶ್ ಭಜ ರಂಗಿ, ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸಿ.ಕೆ. ಬೋಪಣ್ಣ, ರಮೇಶ್, ಕುಟ್ಟಂಡ ಪ್ರಿನ್ಸ್ ಗಣಪತಿ, ವಿರಾಜಪೇಟೆ ಸಂಘ ಪರಿವಾರದ ಪ್ರಮುಖರಾದ ಹೇಮಂತ್, ವಿವೇಕ್ ರೈ, ಬಿಜೆಪಿ ಜಿಲ್ಲಾ ಧ್ಯಕ್ಷ ನಾಪಂಡ ರವಿ ಕಾಳಪ್ಪ ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ಹಿಂದೂ ಬಾಂಧ ವರು ಉಪಸ್ಥಿತರಿದ್ದರು. ಸಭಾ ಕಾರ್ಯ ಕ್ರಮಕ್ಕೂ ಮೊದಲು ಪಟ್ಟಣದ ಮುಖ್ಯ ಬೀದಿಯಲ್ಲಿ ಭವ್ಯವಾದ ಶೋಭಾಯಾತ್ರೆ ನಡೆಯಿತು.

ಕೊಡವ ಸಮುದಾಯ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಆಗ್ರಹಿಸಿ ಸತ್ಯಾಗ್ರಹ

ಮಡಿಕೇರಿ, ಏ.3– ಸಿಕ್ಕಿಂನ ಬೌದ್ಧ ಸನ್ಯಾಸಿ ಸಮುದಾಯದ ಸಂಘ ಕ್ಷೇತ್ರದ ಮಾದರಿಯಲ್ಲೇ ಕೊಡವ ಸಮುದಾಯಕ್ಕೆ ಭಾರತದ ಸಂಸತ್ತು ಮತ್ತು ಕರ್ನಾಟಕ ವಿಧಾನಸಭೆ ಎರಡರಲ್ಲೂ ಪ್ರತ್ಯೇಕ ಪ್ರಾತಿ ನಿಧ್ಯವನ್ನು ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿಯಲ್ಲಿ ಸತ್ಯಾಗ್ರಹ ನಡೆಯಿತು.

ಸಿಕ್ಕಿಂನಲ್ಲಿರುವಂತೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಕೊಡವ ಸಮು ದಾಯದ ನೋಂದಾಯಿತ ಸದಸ್ಯರು ಮಾತ್ರ ಮತ ಚಲಾಯಿಸುವ ಮತ್ತು ಸ್ಪರ್ಧಿಸುವ ಶಾಸನಸಭೆಯ ಸ್ಥಾನವನ್ನು ಸೃಷ್ಟಿಸುವುದು ಅಗತ್ಯವಾಗಿದೆ ಎಂದರು.



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಸಿತು

ಲೆಫ್ಟಿನೆಂಟ್ ಕರ್ನಲ್ ಬಿ.ಎಂ. ಪಾರ್ವತಿ, ಚೋಳಪಂಡ ಜ್ಯೋತಿ ನಾಣಯ್ಯ, ಕಲಿಯಂಡ ಪ್ರಕಾಶ್, ಅಳಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಅಜ್ಜಿಕುಟ್ಟಿರ ಲೋಕೇಶ್, ಬೇಪಡಿಯಂಡ ಬಿದ್ದಪ್ಪ, ನಂದೇಟಿರ ರವಿ ಸುಬ್ಬಯ್ಯ, ಅರೆಯಡ ಗಿರೀಶ್ ತಿಮ್ಮಯ್ಯ, ಮಂದಪಂಡ ಮನೋಜ್ ಮಂದಣ್ಣ, ಕಿರಿಯಮಾಡ ಶೆರಿನ್, ಪುಟ್ಟಿಚಂಡ ಡಾನ್ ದೇವಯ್ಯ, ಚೋಳ ಪಂಡ ನಾಣಯ್ಯ, ಮಣವಟಿರ ಸ್ವರೂಪ್, ಮೇದುರ ಕಂಠಿ, ನಂದಿನೆರ ವಂಡ ಅಯ್ಯಣ್ಣ, ಬಡುವಂಡ ವಿಜಯ, ನಂದಿ ನೆರವಂಡ ವಿಜು, ಪುದಿಯೊಕಡ ಕಾಶಿ ಕರುಂಬಯ್ಯ, ಮಣವಟ್ಟಿರ ನಂದ, ಐಲಪಂಡ ಮಿಟ್ಟು ಸಾದೇರ ರಮೇಶ್, ಚೊಕ್ಕಂಡ ಕಟ್ಟಿ ಹಾಗೂ ಅವರೆಮಾ ದಂಡ ಚಂಗಪ್ಪ ಸೇರಿದಂತೆ ಮತ್ತಿತರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಕಾಡಾನೆ ದಾಳಿ: ಪಾದಚಾರಿಗೆ ತೀವ್ರ ಗಾಯ



ವಿರಾಜಪೇಟೆ, ಏ.3–ಮನೆಗೆ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗೆ ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ತೀವ್ರವಾಗಿ ಗಾಯಗೊಂಡಿರುವ ಘಟನೆಯೊಂದು ಸಂಭವಿಸಿದೆ.

ತಾಲೂಕಿನ ಚಂಬೆ ಬೆಳ್ಳೂರು ಪುದುಕೋಟೆ ಗ್ರಾಮದ ಹೆಚ್.ಟಿ.ಹರೀಶ್ ಎಂಬುವರೇ ಆನೆ ದಾಳಿಯಿಂದ ಪಾರಾಗಿ ಬಂದವರಾಗಿದ್ದಾರೆ. ವಿರಾಜಪೇಟೆಗೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇವರು, ರಾತ್ರಿ 9 ಗಂಟೆಯಲ್ಲಿ ಗ್ರಾಮಕ್ಕೆ ತೆರಳುವಾಗ ದ್ವಿಚಕ್ರ ವಾಹನದಲ್ಲಿ ಹೋಗಲು ಅಸಾಧ್ಯವಾಗಿದ್ದರಿಂದ ತಮ್ಮ ವಾಹನವನ್ನು ರಸ್ತೆಬದಿ ನಿಲ್ಲಿಸಿ ಗದ್ದೆಯಲ್ಲಿ ಸ್ವಲ್ಪ ದೂರ ಮನೆ ಕಡೆಗೆ ನಡೆದು ಹೋಗುತ್ತಿದ್ದಾಗ ಕಾಡಾನೆಯೊಂದು ವೇಗವಾಗಿ ಬಂದು ಸೊಂಡಿಲಿನಿಂದ ಸೊಂಟಕ್ಕೆ ಗುದ್ದಿ ಬಲಗಾಲಿಗೆ ಮೆಟ್ಟಿದೆ. ಇದರಿಂದ ಹರೀಶ್‌ರವರ ಕಾಲಿನ ಮೂಳೆಗೆ ಬಲವಾಗಿ ಪೆಟ್ಟುಬಿದ್ದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅರಣ್ಯಾಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು.

ನಸುಕಿನಲ್ಲಿ ರಾಜಾರೋಷವಾಗಿ ಸಂಚರಿಸಿದ ಒಂಟಿ ಸಲಗ

ಮಡಿಕೇರಿ, ಏ.3–ಶನಿವಾರಸಂತೆ ಬಳಿಯ ಹಂಡ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಕಲಗೋಡು, ಹುಲುಸೆ ಮತ್ತು ಶಿರಂಗಾಲ ಗ್ರಾಮದ ಸುತ್ತ ಮುತ್ತಲಿನ ಕಾಫಿ ತೋಟ ಹಾಗೂ ಕಾಫಿ ಕಣದಲ್ಲಿ ಬೃಹತ್ ದಂತ ಹೊಂದಿರುವ ಒಂಟಿ ಸಲಗ ಶುಕ್ರ ವಾರ ನಸುಕಿನ ವೇಳೆ ರಾಜಾರೋಷವಾಗಿ ಸಂಚರಿಸು ತ್ತಿದೆ. ಸಾರ್ವಜನಿಕ ರಸ್ತೆಯಲ್ಲಿ ಒಂಟಿ ಸಲಗವೊಂದು ಸಂಚರಿಸುತ್ತಿರುವ ದೃಶ್ಯ



ಸಿ.ಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾಡಾನೆ ಓಡಾಡುತ್ತಿರುವುದು ಗ್ರಾಮ ಸ್ಥರು, ಕೃಷಿಕರಲ್ಲಿ ಆತಂಕ ಸೃಷ್ಟಿಸಿದೆ.

ವಾತ್ಸಲ್ಯ ಫಲಾನುಭವಿಗಳಿಗೆ ಹಣ್ಣು ಹಂಪಲು ವಿತರಣೆ



ಚೆಂಬು ಗ್ರಾಮದ ವಾತ್ಸಲ್ಯ ಫಲಾನುಭವಿಗಳಾದ ದೇವಕಿ ಹಾಗೂ ಲೀಲಾ ರವರಿಗೆ ಶ್ರೀ ಕ್ಷೇತ್ರ ಧರ್ಮ ಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇ ಶಕಿ ಲೀಲಾವತಿ ಹಣ್ಣು ಹಂಪಲು ವಿತರಿಸಿ ಯೋಗ ಕ್ಷೇಮ ವಿಚಾರಿಸಿದರು.

ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆಗೆ ವಿದ್ಯುಕ್ತ ಚಾಲನೆ

ಮಡಿಕೇರಿ, ಏ.3–ಕೊಡವ ಕುಟುಂಬ ಗಳ ನಡುವೆ 24ನೇ ವರ್ಷದ ಮುಕ್ಕಾಟಿರ (ಬೇತ್ರಿ) ಕಪ್ ಕ್ರಿಕೆಟ್ ನಮ್ಮೆಗೆ ಬೆಳ್ಳಿಯ ಬ್ಯಾಟ್‌ನಿಂದ ಬಾಲ್ ಹೊಡೆಯುವ ಮೂಲಕ ಅಸೋಸಿಯೇಷನ್ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ವಿದ್ಯುಕ್ತ ಚಾಲನೆ ನೀಡಿದರು.



ಕ್ರಿಕೆಟ್ ನಮ್ಮೆಗೆ ಬೆಳ್ಳಿಯ ಬ್ಯಾಟ್‌ನಿಂದ ಕ್ರಿಕೆಟ್ ಆಡುವ ಮೂಲಕ ಅಸೋಸಿಯೇಷನ್ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಚಾಲನೆ ನೀಡಿದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾ ಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಮಾತನಾಡಿ, ಕೇಂದ್ರ ಸರಕಾರ ಗುರುತಿ ಸಿರುವ ದೇಶದ 10 ಕ್ರೀಡಾ ಜಿಲ್ಲೆಗಳ ಪೈಕಿ ಕೊಡಗು ಜಿಲ್ಲೆ ಸ್ಥಾನ ಪಡೆದಿದ್ದು, ದಕ್ಷಿಣ ಭಾರತದ ಪ್ರಥಮ ಕ್ರೀಡಾ ಜಿಲ್ಲೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಲು ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುವ ಕ್ರೀಡಾಕೂಟ ಗಳೇ ಕಾರಣವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅರ್ಜುನ ಪ್ರಶಸ್ತಿಗೆ ಭಾಜನ ರಾದ 17 ಮಂದಿ ಕ್ರೀಡಾಪಟುಗಳಲ್ಲಿ 9 ಮಂದಿ ಕೊಡಗಿನವರಾಗಿದ್ದಾರೆ ಎಂದು ಪ್ರಶಂಸಿಸಿ ಸಮುದಾಯಗಳಲ್ಲಿ ಸಂಘಟನೆ ಇದ್ದಾಗ ಮಾತ್ರ ಕ್ರೀಡಾ ಕ್ಷೇತ್ರ ಬೆಳವಣಿಗೆ ಕಾಣಲು ಸಾಧ್ಯ. ಕ್ರೀಡಾ ಸಂಸ್ಥೆಗಳು ಸರಕಾರದ ಮಾನ್ಯತೆ ಪಡೆದುಕೊಂಡರೆ ಮಾತ್ರ ಸೌಲಭ್ಯಗಳು ದೊರೆಯುತ್ತದೆ. ಅದರಿಂದ ಜಿಲ್ಲೆಯ ಕ್ರೀಡಾ ಸಂಸ್ಥೆಗಳು ಸರಕಾರದ ಮಾನ್ಯತೆಗೊಳಪಡಲಿ ಎಂದು ಆಶಯ ವ್ಯಕ್ತಪಡಿಸಿದರು.

ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿ, ಕ್ರೀಡಾಕೂಟಗಳ ಜೊತೆಯಲ್ಲಿಯೇ ನಮ್ಮ ಸಂಸ್ಕೃತಿ, ಪದ್ದತಿ, ಪರಂಪರೆ, ಆಚ ರಣೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿ ಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಹಿರಿಯ ಹಾಕಿ ಕ್ರೀಡಾಪಟು ಬಾಳೆಯಡ ಕರುಣ ಕಾಳಪ್ಪ, ಕೂಟದ ಅಧ್ಯಕ್ಷ ಮುಕ್ಕಾ ಟಿರ ಸುರೇಶ್ ಪೆಮ್ಮಯ್ಯ ಮಾತನಾಡಿದರು.

ಉದ್ಘಾಟನಾ ಪಂದ್ಯ: ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆಯ ಅಂಗವಾಗಿ ಬಲಿಷ್ಠ ಕ್ರಿಕೆಟ್ ತಂಡಗಳಾದ ನಾರ್ಥ್ ಕೂರ್ಗ್ ಮತ್ತು ಸೌತ್ ಕೂರ್ಗ್ ತಂಡಗಳ ನಡುವೆ ಪ್ರದರ್ಶನ ಪಂದ್ಯಾಟ ನಡೆಯಿತು. ಗಣ್ಯರು ಆಟಗಾರರ ಪರಿಚಯ ಮಾಡಿ ಕೊಂಡು ಪಂದ್ಯಾಟಕ್ಕೆ ಶುಭ ಕೋರಿದರು. ವೇದಿಕೆಯಲ್ಲಿ ಉದ್ಯಮಿ ಮಾಚೆಟ್ಟಿರ ಜನಿತ್ ಅಯ್ಯಪ್ಪ, ಮಣವಟ್ಟಿರ ಮಧು ಬೋಪಣ್ಣ, ಪೊಲೀಸ್ ಅಧಿಕಾರಿ ಪಟ್ರ ಪಂಡ ಪೊನ್ನಪ್ಪ, ಮೂರ್ನಾಡು ವಿದ್ಯಾಸಂಸ್ಥೆಯ ಪೆಮ್ಮುಡಿಯಂಡ ವೇಣು ಮತ್ತಿತರರು ಉಪಸ್ಥಿತರಿದ್ದರು.

ಕಾವೇರಿ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ



ಕುಶಾಲನಗರ: ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ಕಾವೇರಿಹುಣ್ಣಿಮೆ ಅಂಗ ವಾಗಿ ಕೊಡಗು– ಮೈಸೂರು ಗಡಿ ಸೇತುವೆ ಬಳಿಯ ಕಾವೇರಿ ಕ್ಷೇತ್ರ ದಲ್ಲಿ 157ನೇ ಹುಣ್ಣಿಮೆ ಪೂಜಾ ಕೈಂಕರ್ಯ ಜರುಗಿತು.

ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನ ನೆರವೇರಿಸಲಾಯಿತು. ಕಾವೇರಿ ಮಾತೆಗೆ ಅಲಂಕಾರ ಮಾಡಿ ವಿಶೇಷ ಪೂಜೆ ನೆರವೇರಿಸಿ, ಮಹಾ ಮಂಗಳಾ ರತಿ ಬಳಿಕ ನೆರೆದಿದ್ದ ಭಕ್ತರಿಗೆ ಪ್ರಸಾದ, ಅನ್ನಸಂತರ್ಪಣೆ ನೆರವೇರಿಸಲಾಯಿತು.

ಪಿರಿಯಾಪಟ್ಟಣದ ವಿನೋದ್ ಪಿ. ಎನ್. ಪೂಜಾ ಸೇವಾರ್ಥ ನೆರವೇರಿಸಿದರು. ಬೆಂಗಳೂರಿನ ಸುನಂದ ಕೌಶಿಕ್ ಪೂಜೆಗೆ ವಸ್ತ್ರದಾನ ಮಾಡಿದರು. ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಮತ್ತು ಸಂಗಡಿ ಗರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಮುಂದಿನ ಪೀಳಿಗೆಗೆ ಕಾವೇರಿ ನದಿ ಸಂರಕ್ಷಣೆ ಎಲ್ಲರ ಜವಾಬ್ದಾರಿ ಯಾಗಿದೆ. ಈ ದೆಸೆಯಲ್ಲಿ ಕಾವೇರಿಯನ್ನು ಮಲೀನ ಗೊಳಿಸದೆ ಸ್ವಚ್ಛವಾಗಿಟ್ಟು ಕೊಳ್ಳುವತ್ತ ಗಮನ ಹರಿಸಬೇಕು ಎಂದ ರು. ರಾಜಕೀಯವಾಗಿ ಕ್ಷೇತ್ರದಲ್ಲಿ ಮತದಾರರು ತಮ್ಮ ಪರ ಅಪಾರ ಒಲವು ವ್ಯಕ್ತಪಡಿಸುತ್ತಿರುವುದಕ್ಕೆ ಸುದ್ದಿ ಗಾರರ ಬಳಿ ಕೃತಜ್ಞತೆ ವ್ಯಕ್ತಪಡಿಸಿ ದರು.

ಬಾರವಿ ಕಾವೇರಿ ಕನ್ನಡ ಸಂಘದ ಬಬೀಂದ್ರ ಪ್ರಸಾದ್, ರವೀಂದ್ರ ಪ್ರಸಾದ್, ವಿಜಯೇಂದ್ರ ಪ್ರಸಾದ್, ಸೋಮಶೇ ಖರ್ ತಿಲಕ್ ಪೂಜಾರಿ, ಮಂಜಣ್ಣ ಆವರ್ತಿ, ಕೊಪ್ಪ ಚಂದ್ರು, ವೆಂಕಪ್ಪ, ರವಿ, ರುದ್ರ ಮತ್ತಿತರರು ಇದ್ದರು.

ರೈತರ ಮೇಲೆ ಯುದ್ಧದ ಎಫೆಕ್ಟ್

ತರಕಾರಿ ಬೆಲೆ ಕುಸಿತ, ರೈತರು ಕಂಗಾಲು

● ವಾಣಿಜ್ಯ ಸಿಲಿಂಡರ್ ಅಭಾವ, ಮುಚ್ಚಿದ ಹೋಟೆಲ್‌ಗಳು ● ಮಾರಾಟವಾಗದ ತರಕಾರಿ, ಹೂಕೋಸು ಬೆಳೆಯನ್ನು ನಾಶಪಡಿಸಿದ ರೈತ

ಚಾಮರಾಜನಗರ: ಮಧ್ಯಪ್ರಾಚ್ಯದ ಯುದ್ಧದ ಪರಿಣಾಮ ರೈತರ ಬೆಳೆಗ ಳಿಗೂ ತಟ್ಟಿದ್ದು, ಮಾರುಕಟ್ಟೆಯಲ್ಲಿ ತರ ಕಾರಿಗಳ ಬೆಲೆ ದಿನದಿಂದ ದಿನಕ್ಕೆ ಕುಸಿತ ವಾಗಿರುವ ಹಿನ್ನೆಲೆಯಲ್ಲಿ ಅನ್ನದಾತರು ಪರಿತಪಿಸುವಂತಾಗಿದೆ.

ದಿಢೀರ್ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿದ ಜಿಲ್ಲೆಯ ಯಳಂದೂರು ತಾಲೂ ಕಿನ ಹೊನ್ನೂರು ಗ್ರಾಮದ ರೈತ ಬಸವಣ್ಣ ಎಂಬುವವರು ತಾವೇ ಉತ್ತಿ ಬಿತ್ತಿ ಬೆಳೆದಿದ್ದ ಹೂಕೋಸು ಬೆಳೆಯನ್ನು ತಾನೇ ನಾಶಪ ಡಿಸಿ ಅಸಹಾಯಕತೆಯನ್ನು ಹೊರಹಾಕಿದ್ದಾರೆ.

ಬಾರದ ವ್ಯಾಪಾರಿಗಳು: ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಗಡಿಯನ್ನು ಹಂಚಿಕೊಂ ಡಿರುವ ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆದಂತಹ ಹೆಚ್ಚು ತರಕಾರಿ, ಬಾಳೆ, ಅರಿಶಿನ ಸೇರಿದಂತೆ ಅನೇಕ ಪದಾರ್ಥಗಳನ್ನು ಕೇರಳ ಹಾಗೂ ತಮಿಳುನಾಡಿನ ವ್ಯಾಪಾರಿಗಳು ಜಿಲ್ಲೆಯ ಕೆಲವು ತಾಲೂಕು, ಹೋಬಳಿ ಕೇಂದ್ರಗಳಿಗೆ ಆಗಮಿಸಿ ಟನ್‌ಗಟ್ಟಲೆ ಖರೀದಿ ಸುತ್ತಿದ್ದರು. ಆದರೆ, ಈಗ ಹೋಟೇಲ್‌ಗಳು ಮುಚ್ಚಿರುವುದರಿಂದ ಖರೀದಿಗೆ ಬರುತ್ತಿಲ್ಲ.

ಬೆಳೆಯನ್ನು ನಾಶ ಮಾಡಿದ ಅನ್ನದಾತ: ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆ ಯಲ್ಲಿ ವ್ಯತ್ಯಯ ಉಂಟಾದ ಪರಿಣಾಮ ಜಿಲ್ಲೆ ಸೇರಿದಂತೆ ನೆರೆ ಜಿಲ್ಲೆ ಹಾಗೂ ರಾಜ್ಯ ಗಳಲ್ಲಿ ಕೆಲವು ಪ್ರಮುಖ ಹೋಟೆಲ್‌ಗಳು ಸ್ಥಗಿತಗೊಂಡಿರುವುದರಿಂದ ತರಕಾರಿಗ ಳನ್ನು ಖರೀದಿ ಮಾಡಲು ವ್ಯಾಪಾರಿಗಳು ಬಾರದ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ ರೈತ ಬಸವಣ್ಣ ಎಂಬುವವರು ತಮ್ಮ 4 ಎಕರೆ ಜಮೀನಿನಲ್ಲಿ ಬೆಳೆದು ಕಟಾವಿಗೆ ಬಂದಿದ್ದ ಹೂಕೋಸು ಬೆಳೆಯನ್ನು ಟ್ರಾಕ್ಟರ್ ಮೂಲಕ ಉಳುಮೆ ಮಾಡಿ ತನ್ನ ಕೈಯಾರೆ ಬೆಳೆ ನಾಶ ಮಾಡಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಗೃಹ ಬಳಕೆಯ ಸಿಲಿಂಡರ್ ಗಳನ್ನು ಹೊರತುಪಡಿಸಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಇದರಿಂದಾಗಿ ಸಿಲಿಂ ಡರ್‌ಗಳನ್ನೇ ನಂಬಿಕೊಂಡು ಹೊಟೇಲ್ ಉದ್ಯಮ ನಡೆಸುತ್ತಿದ್ದ ಉದ್ಯಮಿಗಳು ಅನೇಕ ಕಡೆ ಹೊಟೇಲ್‌ಗಳನ್ನು ಬಂದ್ ಮಾಡಿದ್ದು, ಇನ್ನೂ ಕೆಲವು ಕಡೆ ಆಹಾರ ಪದಾರ್ಥ ಗಳನ್ನು ಕಡಿಮೆ ಮಾಡಿದ್ದಾರೆ. ಹೀಗಾಗಿ, ಹೆಚ್ಚಾಗಿ ತರಕಾರಿ ಖರೀದಿ ಮಾಡುತ್ತಿಲ್ಲ.



ಹೂಕೋಸು ಬೆಳೆಯನ್ನು ನಾಶ ಪಡಿಸುತ್ತಿರುವ ರೈತ.

ಇದಲ್ಲದೇ ಖಾಸಗಿ ಹಾಸ್ಟೆಲ್, ಪಿಜಿ ಗಳು ಹಾಗೂ ಕೆಲವು ಹೋಟೆಲ್‌ಗಳಲ್ಲಿ ಆಹಾರದ ಮೆನು ಕಾರ್ಡ್ ಬದಲಾವಣೆ ಮಾಡಲಾಗಿದ್ದು, ತರಕಾರಿ, ಸೊಪ್ಪು ಬಳಕೆ ಯನ್ನು ಕಡಿಮೆ ಮಾಡಲಾಗಿದೆ. ಇದರ ಪರಿಣಾಮ ನೇರವಾಗಿ ರೈತರಿಗೆ ಹೊಡೆತ ನೀಡಿದೆ. ನೀರಾವರಿ ವ್ಯವಸ್ಥೆ ಮಾಡಿ ಕೊಂಡು ಕಷ್ಟಪಟ್ಟು ಬೆಳೆದು ಬಿರುಬಿಸಿ ಲಿನಲ್ಲಿ ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಿರುವ ರೈತರಿಗೆ ಹಾಗೂ ವ್ಯಾಪಾರಿ ಗಳಿಗೆ ಶ್ರಮಕ್ಕೆ ತಕ್ಕ ಬೆಲೆ ಸಿಗುತ್ತಿಲ್ಲ. ಹಾಕಿದ ಬಂಡವಾಳವೂ ಕೈಗೆ ಬರುತ್ತಿಲ್ಲ. ಇದರಿಂ ದಾಗಿ ಅನ್ನದಾತರು ಕಂಗೆಟ್ಟಿದ್ದಾರೆ.

ಯುದ್ಧದ ಮುಂಚೆ ಮಾರುಕಟ್ಟೆಯಲ್ಲಿ ಆಗುತ್ತಿದ್ದಂತ ತರಕಾರಿಗಳ ಮಾರಾಟ ಪ್ರಸ್ತುತ ಖರೀದಿ ಆಗುತ್ತಿಲ್ಲ. ತುಂಬಾ ಕಡಿಮೆ ಆಗಿದೆ ಎಂದು ತರಕಾರಿ ಮಂಡಿ ವ್ಯಾಪಾರಿ ಮಹೇಶ್ ಮಾಹಿತಿ ನೀಡಿದರು.

ರೈತರ ಚಿನ್ನ ಹಿಂತಿರುಗಿಸದಿದ್ದರೆ ಬ್ಯಾಂಕ್ ಮುಂದೆ ಧರಣಿ

ಕೊಳ್ಳೇಗಾಲ, ಏ.3– ಪಟ್ಟಣದ ಇಸಾಫ್ ಬ್ಯಾಂಕ್‌ನಲ್ಲಿರುವ ರೈತರ ಎರಡೂವರೆ ಕೆಜಿಗೂ ಅಧಿಕ ಚಿನ್ನವನ್ನು ಬ್ಯಾಂಕ್ ಅಧಿ ಕಾರಿಗಳು ಮಾನವೀಯತೆ ದೃಷ್ಟಿ ಯಿಂದ ರೈತರಿಗೆ ವಾಪಸ್ ನೀಡುವ ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ ಬ್ಯಾಂಕ್ ಮುಂದೆ ಅಹೋರಾತ್ರಿ ಧರಣಿ ನಡೆಸ ಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿದರು

ಶುಕ್ರವಾರ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಾಥಮಿಕ ಕೃಷಿ ಪತ್ತಿನ ಸಹ ಕಾರ ಸಂಘದ ಕಾರ್ಯದರ್ಶಿಯೊಬ್ಬರು ಶೂನ್ಯ ಬಡ್ಡಿ ದರದಲ್ಲಿ ರೈತರ ಆಭರಣ ಗಳಿಗೆ ಸಾಲ ನೀಡುವುದಾಗಿ ಹನ್ನೊಂದೂ ವರೆ ಕೆಜಿ ಚಿನ್ನಾಭರಣ ತೆಗೆದುಕೊಂಡು ಅದನ್ನು ಖಾಸಗಿ ಬ್ಯಾಂಕ್‌ಗಳಲ್ಲಿ ಅಡಮಾ ನವಿಟ್ಟು ರೈತರಿಗೆ ವಂಚಿಸಲು ಯತ್ನಿಸಿ ದ್ದರು. ಇದನ್ನು ಮನಗಂಡ ನಮ್ಮ ಸಂಘ ಪೊಲೀಸ್ ಇಲಾಖಾಧಿಕಾರಿಗಳ ಮೊರೆ ಹೋಯಿತು. ಕಬ್ಬು ಬೆಳೆಗಾರ ಸಂಘದ ನೇತೃತ್ವದಲ್ಲಿ ಬೃಹತ್ ಚಳುವಳಿ ನಡೆಸಿದ ಹಿನ್ನೆಲೆ ಅಡಮಾನ ಮಾಡಿರುವ ಸಂಪೂರ್ಣ ಚಿನ್ನವನ್ನು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ಚಿನ್ನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ವನ್ನು ನೀಡಲಾಯಿತು ಎಂದರು.

ನಂತರ ಪೊಲೀಸ್ ಇಲಾಖೆಯು ಜೂನ್ 20, 2023 ರಲ್ಲಿ ಚಾಮರಾಜನಗರದ ಸೆನ್ ಪೊಲೀಸ್ ಇಲಾಖೆಯಲ್ಲಿ ಪ್ರಕರಣ ದಾಖಲಿಸಿತು. ಬಳಿಕ ಪೊಲೀಸ್ ಅಧಿಕಾರಿ ಗಳು 9 ಕೆಜಿ 900 ಗ್ರಾಂ ಚಿನ್ನ ವನ್ನು ಇಲ್ಲಿತನಕ ಮುಟ್ಟುಗೋಲು ಹಾಕಿಕೊಂಡಿ ದ್ದಾರೆ. ಇನ್ನು ಉಳಿದ 2 ಕೆ.ಜಿ ಐನೂರು ಗ್ರಾಂ ಚಿನ್ನಕ್ಕೆ ಕೊಳ್ಳೇಗಾಲದ ಈಸಾಫ್ ಫೈನಾನ್ಸ್, ಮೈಸೂರಿನ ಐಸಿಎಲ್ ಚಾಮ ರಾಜನಗರದ ಮಣಪ್ಪುರಂ ಇವರು ನ್ಯಾಯಾಲಯದಿಂದ ತಡೆ ತಂದಿದ್ದಾರೆ. ಅದರಲ್ಲೂ ವಿಶೇಷವಾಗಿ ಮಣಪ್ಪುರಂ ಗೋಲ್ಡ್ ಪೊಲೀಸ್ ಸಿಬ್ಬಂದಿಯ ಮೂಲಕ ಚಿನ್ನವನ್ನು ರೈತರಿಗೆ ಗುರುತಿಸಲು ಅವ ಕಾಶ ಕಲ್ಪಿಸಿದೆ. ಕೊಳ್ಳೇಗಾಲದ ಇಸಾಫ್ ಫೈನಾನ್ಸ್ ಕಂಪನಿಯು ಚಿನ್ನವನ್ನು ಕೊಡು ವಲ್ಲಿ ಸಂಪೂರ್ಣ ನಿರ್ಲಕ್ಷತೆ ಮತ್ತು ಬೇಜವಾ ಬ್ದಾರಿಯನ್ನು ತೋರುತ್ತಿದ್ದು ತಕ್ಷಣ ಸಂಬಂ ಧಪಟ್ಟಂತಹ ಕಂಪನಿಯ ಮುಖ್ಯ ಅಧಿಕಾ ರಿಗಳ ಜೊತೆ ಚರ್ಚೆ ಮಾಡಿ ಮಾನವೀ ಯತೆ ದೃಷ್ಟಿಯಿಂದ ರೈತರ ಚಿನ್ನವನ್ನು ಕೊಡಿಸುವಲ್ಲಿ ಜಿಲ್ಲಾಡಳಿತ ಕೈಗೊಂಡಿ ರುವ ಕ್ರಮಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಚಿನ್ನ ವಾಪಸ್ ಕೊಡುವಲ್ಲಿ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಕೊಳ್ಳೇಗಾಲದ ಈ ಕಂಪನಿಯ ಮುಂದೆ ನಿರಂತರ ಹೋರಾಟ ಧರಣಿ ಹಮ್ಮಿ ಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ವೇಳೆ ಚಾ.ನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಚಾ.ನಗರ ತಾಲೂಕು ಅಧ್ಯಕ್ಷ ಮಲಿಯೂರು ಸತೀಶ್, ಗಡಿನಾಡು ಸಂಚಾ ಲಕ ಹೊನ್ನೇಗೌಡನಹಳ್ಳಿ ಮಹೇಶ್, ಶ್ರೀಕಂಠ, ಪ್ರಭು, ಸಿದ್ದಲಿಂಗಪ್ಪ, ಮಹ ದೇವಪ್ಪ, ಸ್ವಾಮಿ, ನಾಗರಾಜು, ಮಹೇಶ್, ರಾಜಪ್ಪ ಇದ್ದರು.

ಜಾನಪದ ಕಲಾವಿದರ ಕಲ್ಯಾಣನಿಧಿ ಸ್ಥಾಪನೆಗೆ ಒತ್ತಾಯ



ಚಾಮರಾಜನಗರ: ಕಲಾವಿದರು, ಕಲಾ ವಿದರ ಕುಟುಂಬ ಸಂಕಷ್ಟಕ್ಕೆ ಒಳಗಾದ ಸಂದರ್ಭದಲ್ಲಿ ಆರ್ಥಿಕ ಸಹಾಯ ನೀಡುವ ಸಲುವಾಗಿ ಸರ್ಕಾರ ಜಾನಪದ ಕಲಾವಿದರ ಕಲ್ಯಾಣನಿಧಿ ಸ್ಥಾಪಿಸಬೇಕು ಎಂದು ನಿರೂ ಪಕಿ ದಿವ್ಯಾ ಆಲೂರ್ ಹೇಳಿದರು.

ಜಾನಪದ ಕಲಾವಿದ ಕೈಲಾಸಮೂರ್ತಿ ಸ್ಮರಣಾರ್ಥ ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಕೈಲಾಸಮೂರ್ತಿ ಆತ್ಮೀ ಯರ ಬಳಗದಿಂದ ನಡೆದ ನುಡಿ ಗಾನ ನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನಪದ ಸಂಸ್ಕೃತಿ ಶ್ರೇಷ್ಠವಾದುದು. ನಾಡಿಗೆ ಜನಪದರ ಕೊಡುಗೆ ಅಪಾರ. ಆದರೆ ಆ ಕಲಾವಿದರ ಜೀವನ, ಆರ್ಥಿಕ ಮಟ್ಟ ಸುಧಾರಣೆಯಾಗಿಲ್ಲ. ಕಲಾವಿದರೇ, ಕಲಾವಿದರನ್ನು ಕೈ ಹಿಡಿಯಬೇಕು. ಹಾಗಾ ಗಿಯೇ ಕೈಲಾಸಮೂರ್ತಿಯವರ ಕುಟುಂ ಬಕ್ಕೆ ನೆರವಾಗುವ ಸದಾಶಯದೊಂದಿಗೆ ಈ ಕಾರ್ಯಕ್ರಮ ಆಯೋಜನೆ ಮಾಡ ಲಾಗಿದೆ ಎಂದರು.

ನಂತರ ರಂಗಾಯಣ ಮಾಜಿ ನಿರ್ದೇ ಶಕ ಜನಾರ್ಧನ್ ಜನ್ನಿ ಮಾತನಾಡಿ, ಜಾನ ಪದ ಕಲಾವಿದರನ್ನು ಕಳೆದುಕೊಳ್ಳುವುದು ಒಂದು ಸಂಪತ್ತನ್ನೇ ಕಳೆದುಕೊಂಡಂತೆ. ಕೈಲಾಸಮೂರ್ತಿ ಅವರ ನಿಧನದಿಂದ ಅವರ ಕುಟುಂಬ ಸಮಸ್ಯೆಗೆ ಸಿಲುಕಿದೆ. ಅವರಿಗೆ ನಾವು ಸಹಾಯ ಮಾಡಬೇಕಾಗಿದೆ. ನಾವು ಮೈಸೂರಿನ ಕಲಾವಿದರೆಲ್ಲ ಸೇರಿ ಆದಷ್ಟು ಸಹಾಯ ಮಾಡಲಿದ್ದೇವೆ ಎಂದರು.

ಈ ವೇಳೆ ನಾನಾ ಕಲಾವಿದರು ಜಾನ ಪದ ಗೀತೆಗಳು, ಮಲೆಮಹದೇಶ್ವರರ ಕುರಿತ ಕಥಾ ರೂಪಕಗಳನ್ನು ಹಾಡುವ ಮೂಲಕ ಮೃತ ಕಲಾವಿದನಿಗೆ ಗೌರವ ಸಲ್ಲಿಸಿದರು.

ಈ ವೇಳೆ ಮಲ್ಲಿಕಾರ್ಜುನ ಸ್ವಾಮಿ, ಕೆ. ವೆಂಕಟರಾಜು, ಮಹದೇವ ಶಂಕನಪುರ, ನರಸಿಂಹಮೂರ್ತಿ, ಮೂರ್ತಿ ಇದ್ದರು.

ಶರಣರ ತತ್ವಗಳು ಇಂದು ಹೆಚ್ಚು ಪ್ರಸ್ತುತ

ಚಾಮರಾಜನಗರ: ದ್ವೇಷ, ಅಸೂಯೆ ಪ್ರತಿಷ್ಠೆ ಹೆಚ್ಚಾಗುತ್ತಿರುವ ಈ ಸನ್ನಿವೇಶದಲ್ಲಿ 12ನೇ ಶತಮಾನದ ಶರಣರ ತತ್ವಗಳು, ಮಾರ್ಗದರ್ಶನ ಹೆಚ್ಚು ಪ್ರಸ್ತುತವಾಗಿದೆ ಎಂದು ಶ್ರೀ ಸಿದ್ದಮಲ್ಲೇಶ್ವರ ಕಲಾ ಬಳ ಗದ ಗೌರವ ಅಧ್ಯಕ್ಷರು ಹಾಗೂ ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನ ಬಸವಸ್ವಾಮೀಜಿ ಹೇಳಿದರು.

ಮಠದ ವತಿಯಿಂದ ಮೇ 21 ಮತ್ತು 22ರಂದು ನಡೆಯುವ ಗ್ರಾಮಾಂತರ ಬಸವ ಜಯಂತಿ ಹಾಗೂ ಗುರುಗಳ ಸ್ಮರಣೋ ತ್ಸವದ ಅಂಗವಾಗಿ ಶ್ರೀ ಸಿದ್ದಮಲ್ಲೇಶ್ವರ ಕಲಾ ಬಳಗದ ವತಿಯಿಂದ ಹೊಂಡರ ಬಾಳು ಲಿಂಗರಾಜೇ ಅರಸ್ ವಿರಚಿತ ಪ್ರಭು ಲಿಂಗ ಲೀಲೆ ನಾಟಕವನ್ನು ಬೀರಿಹುಂಡಿ ಗೋವಿಂದರಾಜು ನಿರ್ದೇಶನದಲ್ಲಿ ಅಭಿನಯಿ ಸುತ್ತಿದ್ದು ನಾಟಕದ ತಾಲೀಮಿಗೆ ಅನುಭವ ಮಂಟ ಪದಲ್ಲಿ ಚಾಲನೆ ನೀಡಿ ಮಾತನಾಡಿದರು.

ಅಲ್ಲಮಪ್ರಭುವಿನ ಆಧ್ಯಾತ್ಮಿಕ ಲೀಲೆಗಳು, ಶರಣರ ಜೀವನ, ಇಷ್ಟಲಿಂಗ ಪೂಜೆಯ ಮಹತ್ವ ಮತ್ತು ನಿರಹಂಕಾರದ ತತ್ವಗಳನ್ನು ನಿರೂಪಿಸುತ್ತದೆ. ಇದು ಕೇವಲ ನಾಟಕ ವಲ್ಲ ಜ್ಞಾನ ಮತ್ತು ಭಕ್ತಿಯ ಸಮ್ಮಿಲನ ವಾಗಿದೆ ಎಂದರು.

ಶರಣರ ತತ್ವಗಳು, ಲಿಂಗಾಯತ ಧರ್ಮದ ಮೂಲ ತತ್ವಗಳು ಮತ್ತು ನಿರಹಂಕಾರದ ಜೀವನ ವಿಧಾನವನ್ನು ಪ್ರಭುಲಿಂಗ ಲೀಲೆಯು ಕೇವಲ ಒಂದು ಮತಕ್ಕೆ ಸೀಮಿತವಾಗದೆ, ಮನುಷ್ಯನಿಗೆ ಅಹಂಕಾರವನ್ನು ತೊರೆದು, ಆಧ್ಯಾತ್ಮಿಕ ಪಥದಲ್ಲಿ ಸಾಗಲು ಮಾರ್ಗ ದರ್ಶನ ನೀಡುತ್ತದೆ ಎಂದರು



ಅನುಭವ ಮಂಟಪದಲ್ಲಿ ಪ್ರಭುಲಿಂಗ ಲೀಲೆ ನಾಟಕಕ್ಕೆ ಚಾಲನೆ ನೀಡಲಾಯಿತು.

ಈ ನಾಟಕದಲ್ಲಿ ಗುರುಶಿಷ್ಯರ ಸಂಬಂಧದ ಹಿನ್ನೆಲೆಯಲ್ಲಿ ಮಾನವೀಯ ಸಂಬಂಧಗಳು ಅರಿವಿನ ಜ್ಯೋತಿ ಬೆಳಗಿಸಿ ಹೃದಯ ಗಳನ್ನು ಬೆಸೆಯುವ ವಿಧಾನ ಇಲ್ಲಿ ಪ್ರಧಾನ ವಾಗಿದೆ. ಜ್ಯೋತಿ ಮುಟ್ಟಿದ ಜ್ಯೋತಿಯಂತೆ ಮಾನವತಾ ವಿಕಾಸದ ಸಂದರ್ಭವನ್ನು ಅರಳಿಸುವ ಮಹತ್ವಪೂರ್ಣ ನಾಟಕವಾಗಿದ್ದು, ಇಂದಿಗೂ ಭಕ್ತಿ ಮತ್ತು ಜ್ಞಾನದ ದೃಷ್ಟಿಯಿಂದ ಅತ್ಯಂತ ಪ್ರಸ್ತುತವಾಗಿದೆ ಎಂದರು.

ಶರಣರ ತತ್ವಗಳು ಜನಮಾನಸದಲ್ಲಿ ಉಳಿಯಬೇಕು, ಅವರ ಮಾರ್ಗದರ್ಶನ ಸಮಾಜಕ್ಕೆ ಒಳಿತನ್ನು ನೀಡಬೇಕು ಎಂಬ ಮೂಲ ಉದ್ದೇಶದಿಂದ ಈ ನಾಟಕವನ್ನು ಆಯೋಜಿಸಲಾಗಿದೆ, ಎಲ್ಲಾ ಸದ್ಭಕ್ತರು ಇದರಲ್ಲಿ ಭಾಗವಹಿಸಬೇಕು ಎಂದರು.

ಎಲ್ಲಾ ಸಂಘ ಸಂಸ್ಥೆಗಳ ಸಹಕಾರ ದಿಂದ ಮೇ 21 ರಂದು ರಾತ್ರಿ ಮಠದ ಆವರಣದಲ್ಲಿ ಈ ನಾಟಕ ಪ್ರದರ್ಶನ ವಾಗುತ್ತಿದೆ ಎಂದರು. ಕಲಾ ಬಳಗದ ಅಧ್ಯಕ್ಷ ಎನ್.ಆರ್.ಪುರುಷೋತ್ತಮ್ ಮಾತನಾಡಿ ಗುರುಗಳಾದ ಚನ್ನಬಸವ ಸ್ವಾಮೀಜಿ ಅವರ ಅಭಿಲಾಷೆಯ ಮೇರೆಗೆ ಸ್ಥಳೀಯ ಕಲಾವಿದರೊಡಗೂಡಿ ಈ ನಾಟಕವನ್ನು ಅಭಿನಯಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ನಾಟಕದ ನಿರ್ದೇಶ ಕರಾದ ಬೀರಿಹುಂಡಿ ಗೋವಿಂದರಾಜು, ಮಂಗಲ ಶಿವಣ್ಣ, ಮುಖಂಡರಾದ ಕೋಡಿ ಮೋಳೆ ರಾಜಶೇಖರ್, ಮೂಡ್ಲುಪುರ ನಂದೀಶ್, ಮಹದೇವಸ್ವಾಮಿ, ಸಿ.ಎಂ. ನರಸಿಂಹಮೂರ್ತಿ, ಅರುಣ್‌ಕುಮಾರ್, ಬಸವರಾಜು, ತೊರವಳ್ಳಿ ಕುಮಾರ್, ಟಿ.ಎಂ. ಸ್ವಾಮಿ, ವಕೀಲ ತುಮ್ಮನೇರಳೆ ನಾಗೇಂದ್ರ, ವೀರತಪ್ಪ ಇತರರು ಇದ್ದರು.

ಊರಿಗೆ ಬಂದ ಜಿಂಕೆ ರಕ್ಷಣೆ

ಬೇಗೂರು(ಗುಂಡ್ಲುಪೇಟೆ): ಸಮೀಪದ ಕುರುಬರಹುಂಡಿ (ಶಿವಕುಮಾರ್ ಪುರ) ಗ್ರಾಮದಲ್ಲಿ ದಾರಿ ತಪ್ಪಿ ಆಹಾರ ಅರಸಿ ಬಂದ ಜಿಂಕೆಯನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ.

ಇಂದು ಕುರುಬರ ಹುಂಡಿ ಗ್ರಾಮಕ್ಕೆ ಎರಡು ಜಿಂಕೆಗಳು ಬಂಡಿಪುರ ರಾಷ್ಟ್ರೀಯ ಉದ್ಯಾನವನದ ಓಂಕಾರ ಅರಣ್ಯ ವಲ ಯದಿಂದ ಆಹಾರ ಹರಸಿ ಗ್ರಾಮಕ್ಕೆ ಬಂದಿವೆ. ಈ ಸಂದರ್ಭ ಬೀದಿ ನಾಯಿಗಳು ಜಿಂಕೆ ಗಳ ಮೇಲೆ ದಾಳಿ ಮಾಡಲು ಮುಂದಾ ಗಿವೆ. ಒಂದು ಜಿಂಕೆ ಮತ್ತೆ ಕಾಡಿನತ್ತ ಓಡಿಹೋಗಿದೆ. ಮತ್ತೊಂದು ಜಿಂಕೆ ನಾಯಿ ಗಳ ದಾಳಿಗೆ ತುತ್ತಾಗುತ್ತಿದ್ದ ಸಂದರ್ಭ ಗ್ರಾಮಸ್ಥರು ನಾಯಿಗಳನ್ನು ಓಡಿಸಿ ಜಿಂಕೆ ಯನ್ನು ರಕ್ಷಿಸಿ ಅರಣ್ಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ ನಂತರ ಅರಣ್ಯ ಅಧಿಕಾರಿಗಳು ಜಿಂಕೆಯನ್ನು ಸುರಕ್ಷಿತ ವಾಗಿ ಮರಳಿ ಕಾಡಿಗೆ ಬಿಟ್ಟಿದ್ದಾರೆ.



ಬೇಸಿಗೆ ಶಿಬಿರಗಳು ಮಕ್ಕಳ ಕಲಿಕೆಗೆ ಸಹಕಾರಿ



ಕೊಳ್ಳೇಗಾಲ: ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಬೇಸಿಗೆ ಶಿಬಿರಗಳು ಅತ್ಯಂತ ಸಹಕಾರಿಯಾ ಗಲಿವೆ ಎಂದು ಚಾಮುಲ್ ನಾಮ ನಿರ್ದೇಶಕ ಕಮರವಾಡಿ ರೇವಣ್ಣ ಅಭಿಪ್ರಾಯ ಪಟ್ಟರು. ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಸಂತೇಮರಹಳ್ಳಿಯ ಅಜಂತ ಟ್ರಸ್ಟ್ ಹಾಗೂ ಶಾಕ್ಯ ನಾಟ್ಯ ಕಲಾ, ಸಂಘದ ವತಿಯಿಂದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾ ಗಿದ್ದ ಕಾರ್ಯಕ್ರಮದಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದರು. ಪ್ರಭಾವತಿ, ಖಜಾಂಚಿ ಶಿವಣ್ಣ, ಶಿಬಿರ ನಿರ್ದೇಶಕ ಕಮರವಾಡಿ ಮಹದೇವಸ್ವಾಮಿ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಲಾಡ್ಜ್ ನಲ್ಲಿ ಕೆಲಸಮಾಡಲು ಯುವಕರು ಬೇಕಾಗಿದ್ದಾರೆ (ಉತ್ತನಹಳ್ಳಿ ರಿಂಗ್ ರಸ್ತೆ)
ಸಂಪರ್ಕಿಸಿ 9902932566

ವಾಣಿಜ್ಯ ಮಳಿಗೆ ಬಾಡಿಗೆಗೆ
ಶೋರೂಂಗಳಿಗೆ ಅನುಕೂಲವಾಗುವಂತಹ 750 Sq.ft ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. #666, ನೃಪತುಂಗ ರಸ್ತೆ, 'M' ಬ್ಲಾಕ್, ಕುವೆಂಪುನಗರ, ಮೈಸೂರು. ಸಂಪರ್ಕಿಸಿ :
9448075383

CCTV installation & Service
Mob: 9880123633

HOUSE FOR SALE
20x30 South face Bogadhi 2nd stage North, near Nirmithi Kendra.
58 Lakh. Contact:
7892595158, 9448439004

ಬೆಂಗಳೂರಿಗೆ ಡ್ರೈವರ್ಸ್ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
9141835175
6366610175
connect@udupikitchen.net
Lingadevarakoppal Road, Near D'Mart, Mysore

ಬೇಕಾಗಿದ್ದಾರೆ
ಕಂಪ್ಯೂಟರ್ ಉಪಯೋಗಿಸಲು ಬರುವವರು ಹಾಗೂ ವಿಡಿಯೋ ಎಡಿಟಿಂಗ್ ತಿಳಿದಿರುವ ಯುವಕ ಹಾಗೂ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ
9110455297| 9591557126

SITE FOR SALE
60x80
East- South corner
Roopa nagar
Call: 9880273834

WANTED
We Requires Electrician with ITI in Electrical Industrial Experience OR Electrician having 1 to 2 Years's of Industrial Electrical works Experience and Electrician Helpers
9886329428
9449385678

ಬೇಕಾಗಿದ್ದಾರೆ-Telecallers
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ. Salary + Incentives
DD. URS Road
7353633297

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
* SALES EXECUTIVE - 4
[ANY DEGREE]
(Freshers also welcome)
Male and Female. ಸಂಪರ್ಕಿಸಿ:
Mob: 9743647484

LAND FOR SALE
Commercial Purpose, N.H 275
6.75 Gunta's, 7350.75 Sqft
E/F, Adjacent to Fun Fort
Srirangapatna
Mob: 9945708365

MUDA APPROVED | RERA APPROVED
RAI ESTATES
90% ಬ್ಯಾಂಕ್ ಲೋನ್ ದೊರೆಯುತ್ತದೆ
E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್‌ಗಳನ್ನು ಕೊಂಡುಕೊಳ್ಳಿ
9448181488
10, New Sayyaji Rao Road, Bamboo Bazar, Mysuru - 570 001

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತವೆ.
Teju Electronics, ಅಗ್ರಹಾರ
Mob: 9342114069

SITE FOR SALE
KBL Wood Rose, Shanthaveri Gopalagowda Nagara, South Race
30x50 Site No: 114
9972958878

SITES FOR SALE
30x40, 30x50, 40x60 approved sites for sale Bank loan available near MIT College from city 8.5 Km only. Contact
9606975149

ತಕ್ಷಣ ಬೇಕಾಗಿದ್ದಾರೆ
ವೃದ್ಧಾಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡಲು ಅಭ್ಯರ್ಥಿಗಳು ಕೂಡಲೇ ಬೇಕಾಗಿದ್ದಾರೆ. ಊಟ, ವಸತಿ ಮತ್ತು ಆಕರ್ಷಕ ಸಂಬಳವನ್ನು ನೀಡಲಾಗುವುದು. ಸ್ಥಳ: ಮೈಸೂರು
Mob: 9916905188

ಗ್ರೇಟರ್ ಮೈಸೂರಿನ ಬೆಲೆ ಏರಿಕೆಯ ಮುನ್ನ ನಿಮ್ಮದಾಗಿಸಿಕೊಳ್ಳಿ
ಸಂಜಯ್ ನಗರ ಲೇಔಟ್, ನಂಜನಗೂಡು
30X40
2 ಬೆಡ್‌ರೂಂ ಮನೆ :
ರೂ.39.75 ಲಕ್ಷ
ಸಂಪರ್ಕಿಸಿ: NH-150A ಪಕ್ಕದಲ್ಲಿ
8792306996

7 ದಿನಗಳ ಭೂತಾನ್ ಪ್ರವಾಸ 15-5-26
7 ದಿನಗಳ ನೇಪಾಳ ಮತ್ತು ಮುಕ್ತಿನಾಥ ಪ್ರವಾಸ 23-4-26
3 ದಿನಗಳ ಶಿರಡಿ ಪ್ರವಾಸ 24-4-26
6 ದಿನಗಳ ಸಿಕ್ಕಿಂ ಮತ್ತು ಡಾರ್ಜಿಲಿಂಗ್ 7-5-26
13 ದಿನಗಳ ಚಾರ್ ಧಾಮ್ ಪ್ರವಾಸ 26-5-26
ಸುವರ್ಣ ಯಾತ್ರಾ
9019462508 / 9480843945

ವೇಯ್ಟರ್‌ಗಳು ಬೇಕಾಗಿದ್ದಾರೆ
ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವೇಯ್ಟರ್‌ಗಳು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿದೆ. ಸ್ಥಳ: ಮೈಸೂರು, ದಟ್ಟಗಳ್ಳಿ. ಸಂಪರ್ಕಿಸಿ:
Mob: 9071268732

WANTED
FEMALE FRONT OFFICE ASSISTANT
Location: Vijayanagar 4th Stage, Mysuru.
Qualification: Any Degree with good communication skills
Salary + incentive. Contact:
Mob: 8105819378

S.K. CONSTRUCTION
20x30, 2 BHK, ಮನೆ, ಶಾಂತವೇರಿಗೋಪಾಲಗೌಡ ನಗರ
Advance ಹಣ ಇದ್ದರೆ ಸಾಕು 80% Loan ಮಾಡಿ Construction ಮಾಡಿಕೊಡುತ್ತೇವೆ.
ಬೆಲೆ 49 Lakhs only
9620528490

ಬೇಕಾಗಿದ್ದಾರೆ
ಗ್ರೈನೈಟ್ ಅಂಗಡಿಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಿದ್ಧಾರ್ಥನಗರ ಮೈಸೂರು
9845105129
8867271220

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

ಮಾರಾಟಕ್ಕೆ ಇವೆ
ಸಿಮೆಂಟ್ ಇಟ್ಟಿಗೆ ಮಾಡುವ ಮಿಷನ್‌ಗಳು ಮಾರಾಟಕ್ಕೆ ಇವೆ ಹಾಗೂ ಸಿಮೆಂಟ್ ಕಾಂಕ್ರೀಟ್ ಮಾಡುವ ಮಿಕ್ಸರ್ ಮಿಷನ್‌ಗಳು ಮಾರಾಟಕ್ಕೆ ಇವೆ
ಸಂಪರ್ಕಿಸಿ: 83108 14289

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಗ್ರೇಟರ್ ಮೈಸೂರಿನ ಬೆಲೆ ಏರಿಕೆ ಮುನ್ನ ಸೈಟನ್ನು ನಿಮ್ಮದಾಗಿಸಿಕೊಳ್ಳಿ
ಸಂಜಯ್ ನಗರ ಲೇಔಟ್, ನಂಜನಗೂಡು
30X40 ಸೈಟುಗಳು
ರೂ. 14 ಲಕ್ಷ
ಸಂಪರ್ಕಿಸಿ: NH-150A ಪಕ್ಕದಲ್ಲಿ
8792306996

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.
Mob: 7996021216

ಸೈಟು ಮಾರಾಟಕ್ಕಿದೆ
30x40 E/F DTCP 11 A, ಖಾತಾ ಸೊಸೈಟಿ, ಸೈಟು ಮಾರಾಟಕ್ಕಿದೆ. 21 ಲಕ್ಷಗಳು ನಂಜುಂಡೇಶ್ವರನಗರ ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534
8722353178

ಬೇಕಾಗಿದ್ದಾರೆ
ಮೈಸೂರಿನ ಸೇವಾ ಸಂಸ್ಥೆಯೊಂದಕ್ಕೆ ಹಸು ಕೆಲಸದಲ್ಲಿ ಅನುಭವವಿರುವ (HF Jersey) ಮತ್ತು ಮನೆ ಕೆಲಸಕ್ಕೆ ಸಂಸಾರವೊಂದು ಬೇಕಾಗಿದೆ. ಯಾವುದೇ ದುಶ್ಚಟವಿರಬಾರದು. ಸಂಬಳ: 25000/– + ಊಟ, ವಸತಿ
ಸಂಪರ್ಕಿಸಿ: 9341369901
9538499901/ 8088586087

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ಬೇಕಾಗಿದ್ದಾರೆ
ಲಾರಿ ಡ್ರೈವರ್ಸ್ ಬೇಕಾಗಿದ್ದಾರೆ. ಕ್ಯಾಂಟೀನ್, PF ಮತ್ತು ESI ಸೌಲಭ್ಯವಿದೆ. ಸಂಪರ್ಕಿಸಿ
9341623350

JNANAJYOTHI VIDYALAYA
BEERIHUNDI. (1Std to 10 th std)
WE ARE HIRING!
TEACHERS WANTED (2026-27 SESSION)
SUBJECTS -HM / Principal -1, ENGLISH-2, HINDI-1, MATHEMATICS-2, SCIENCE-2, SOCIAL STUDIES-2, COMPUTER teacher-1, PHYSICAL Education teacher-1, Immediately Contact
9845390377
8197057626

SRI JNANA BHARATHI SCHOOL
(P. HOSAHALLI, KRS ROAD)
TEACHERS REQUIRED
QUALIFICATION : MSc, BSc, MA, BED, D.ED, NST, SUB : MATHS, SCIENCE, ENGLISH, SOCIAL, COMPUTER FOR HIGH SCHOOL, LOWER AND HIGHER PRIMARY
TRANSPORTATION AVAILABLE
8884311333
9620124567

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಕೆಲಸಕ್ಕೆ ಬೇಕಾಗಿದ್ದಾರೆ
ಉನ್ನತ ಕಂಪನಿ ಕಾರ್ಖಾನೆಗಳಲ್ಲಿ, ಹೋಟೆಲ್‌ಗಳಲ್ಲಿ, ಸ್ಕೂಲ್‌ಗಳಲ್ಲಿ ಹಾಗೂ ಹಾಸ್ಪಿಟಲ್‌ಗಳಲ್ಲಿ, ಕೆಲಸ ಮಾಡಲು, ಹೌಸ್ ಕೀಪಿಂಗ್ (ದಟ್ಟಗಳ್ಳಿ, ಸ್ಕೂಲ್‌ನಲ್ಲಿ ವಾಷ್ ರೂಮ್ ಕ್ಲೀನಿಂಗ್) ಮಾಡಲು ಹೋಟೆಲ್‌ಗಳಲ್ಲಿ, Helper. Furniture ಕಾರ್ಖಾನೆಯಲ್ಲಿ Helper ಗಳು, ಸೆಕ್ಯೂರಿಟಿಗಳು, ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ESI PF. ಸೌಲಭ್ಯವಿದೆ. ಊಟ ವಸತಿ ಸೌಲಭ್ಯ ಇದೆ. ಉನ್ನತ ವೇತನ ನೀಡಲಾಗುವುದು. ಜನ ಸುರಕ್ಷ ನಿಧಿ ಸೌಹಾರ್ದ ಕೋ ಆಪರೇಟಿವ್ ಪಿನಕಲ್. ಮೈಸೂರು ಪಿಗ್ಗಿ ಕಲೆಕ್ಟರ್. Part Time & Full Time. ಕೆಲಸಕ್ಕೆ ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: 77953 67205
9611208553, 9036461347

ಹೆಸರು ಬದಲಾವಣೆ
ಶಾಂತಲಾ ಅರುಣ್ ಆದ ನಾನು ಮೈಸೂರು ಜಿಲ್ಲೆ, ಕೆ.ಆರ್.ನಗರ ಟೌನ್, ಬಜಾರ್ ರಸ್ತೆ, 14ನೇ ವಾರ್ಡ್ ಇಲ್ಲಿ ವಾಸವಾಗಿದ್ದು, ನನ್ನ ಹೆಸರನ್ನು ಎ.ಶಾಂತಲಾ ಯಿಂದ ಶಾಂತಲಾ ಅರುಣ್ ಎಂದು ಬದಲಾಯಿಸಿಕೊಂಡಿರುತ್ತೇನೆ. ನೋಟರಿ ಮಲ್ಲಿಕಾರ್ಜುನಸ್ವಾಮಿ ಅವರ ಮುಂದೆ ದಿನಾಂಕ 05–11–2025 ರಂದು ಅಫಿಡವಿಟ್ ಮೂಲಕ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಶಾಂತಲಾ ಅರುಣ್

30x40 ಅಳತೆಯ ನಿವೇಶನ ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮ, 'ಮೈನಗರ' ಬಡಾವಣೆಯಲ್ಲಿ, ಮುಡಾ ಅನುಮೋದಿತ ಉತ್ತರಾಭಿಮುಖವಾಗಿರುವ ಸೈಟ್ ನಂ.662, ವಿಸ್ತೀರ್ಣ 30x40 ಅಳತೆಯ ನಿವೇಶನ, ಕ್ಲಿಯರ್ ಟೈಟಲ್ ಮತ್ತು ದಾಖಲೆಗಳೊಂದಿಗೆ ಮಾರಾಟಕ್ಕಿದೆ. ಸಂಪರ್ಕಿಸಿ
9353579216
ಬ್ರೋಕರ್ಸ್ ಎಕ್ಸ್ಕ್ಯೂಸ್

ಸುವರ್ಣಾವಕಾಶ
ಭಾರತದ ಟಾಪ್ ಬ್ಯಾಂಕಿನಿಂದ Business Presentation ನಿವೃತ್ತ ಅಧಿಕಾರಿಗಳು, ಗೃಹಿಣಿಯರು, ಸ್ವಯಂ ಉದ್ಯೋಗಿಗಳಿಗೆ ವಯಸ್ಸು 25 ರಿಂದ 65 ವಯಸ್ಸು ರವರಿಗೆ • ಶೂನ್ಯ ಹೂಡಿಕೆಯಲ್ಲಿ ವ್ಯಾಪಾರ • ಅನಿಯಮಿತ ಆದಾಯ ಪಡೆಯುವ ಅವಕಾಶ • ನಿಮ್ಮ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಿ • ಅಂತಾರಾಷ್ಟ್ರೀಯ ಪ್ರವಾಸಗಳು • ವೇರಿಯಬಲ್ ಭತ್ಯೆ, ದಿನಾಂಕ & ಸಮಯ : 6th April 2026 ಸೋಮವಾರ 12 pm, ಸ್ಥಳ : 1ನೇ ಮಹಡಿ, ಭೈರವ ಕಾಂಪ್ಲೆಕ್ಸ್, ಕೆ.ಜಿ.ಕೊಪ್ಪಲ್, ಚಾಮರಾಜಪುರಂ, ಮೈಸೂರು.
8095741384

HOUSE FOR SALE
Newly constructed house 4th Stage, 2nd phase, Vijayanagar, Mysore.
8527801623
9739039595

ಬೇಕಾಗಿದ್ದಾರೆ
1) ಸೌತ್ ಇಂಡಿಯ ಸಸ್ಯಹಾರಿ ಅಡುಗೆ ಭಟ್ಟರು, ಸಂಬಳ : 30,000/–
2) ಅನುಭವವುಳ್ಳ ಅಡುಗೆ ಸಹಾಯಕರು. ಸಂಬಳ : 15,000/–
ಸ್ಥಳ : ಮೈಸೂರು
8123081238

ಆಫೀಸ್ ಬಾಡಿಗೆಗೆ ದೊರೆಯುತ್ತದೆ
1750 ಚದರಡಿ ಆಫೀಸ್ ರೂಮ್‌ಗಳು ರಿಸೆಪ್ಷನ್ ಹಾಗೂ ವರ್ಕಿಂಗ್ ಟೇಬಲ್ ಮತ್ತು ಇತರೆ ಸೌಲಭ್ಯ ಒಳಗೊಂಡಿರುತ್ತದೆ. ವಿಳಾಸ : ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಚಿಕೆ ಟೈರ್ಸ್ ಹಿಂಭಾಗದ ರಸ್ತೆ
9880242319
9740808996

ಶ್ರೀ ಸಿದ್ದೇಶ್ವರ ಟೂರ್ಸ್ & ಟ್ರಾವೆಲ್ಸ್, ಮೈಸೂರು
ಲಕ್ಸುರಿ ವಿಡಿಯೋ ಕೋಚ್ ಬಸ್ಸಿನಲ್ಲಿ ಉತ್ತರ ಭಾರತದ ಪ್ರವಾಸ ದಿನಾಂಕ 24–5–2026 ರಿಂದ 13 ದಿನಗಳು ಸಂದರ್ಶನ ಮಾಡುವ ಸ್ಥಳ : ಸವದತ್ತಿ, ಕೊಲ್ಹಾಪುರ, ನಾರಾಯಣಪುರ, ಶಿರಡಿ, ಉಜ್ಜಯಿನಿ, ಆಗ್ರ, ಮಥುರ, ಬೃಂದಾವನ, ಅಯೋಧ್ಯೆ, ಪ್ರಯಾಗ್‌ರಾಜ್, ಶ್ರಿಕಾಶಿ, ಪಂಡರಾಪುರ, ಕೂಡಲ ಸಂಗಮ ಇತ್ಯಾದಿ
ಸಂಪರ್ಕಿಸಿ : ರಾಜಣ್ಣ, ವ್ಯವಸ್ಥಾಪಕರು
8296956718
9343288718

CHANGE OF NAME
I, Namitha Ravindra, residing at # 506/4, Janahitha Road, CFTRI Layout, Bhogadi 2nd Stage, Mysuru-570026. 2nd Cross, Kumbarageri, Lashkar Mohalla, Mysore-570001, have changed my name from Namitha to Namitha Ravindra vide Affidavit sworn to before Notary Sri Venkatesha Patavardhana on 20.03.2026 Here after wards I wish to be called and known for all acts, deeds and things as Namitha Ravindra only.
Sd/- Namitha Ravindra

ಬೇಕಾಗಿದ್ದಾರೆ
ಪಾರ್ಟ್‌ಟೈಮ್ ಅಂಡ್ ಫುಲ್‌ಟೈಮ್ ನೆಟ್ವರ್ಕ್ ಮಾರ್ಕೆಟಿಂಗ್
ವಾರದ ಆದಾಯ, ವಾರಕ್ಕೆ 25000 ಸಾವಿರದಿಂದ 50,000 ಯುವಕರು ಮಹಿಳೆಯರು ನಿವೃತ್ತರು ಮನೆಯಲ್ಲಿ ಕುಳಿತು ಹಣ ಗಳಿಸಿ
9187534713

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ.
whatsapp resume to
7795104543
9538886328

ಜಮೀನು ಬೇಕಾಗಿದೆ
ಆಶ್ರಮಕ್ಕಾಗಿ ಶ್ರೀರಂಗಪಟ್ಟಣದ (3–5 ಕಿಮೀ) ಬಳಿ 1 ಎಕರೆ ಲೋಕಪಾವನಿ ನದಿ ಹತ್ತಿರವಿರುವ ಜಮೀನು.
9964069933

ಮಾರಾಟಕ್ಕೆ ಇದೆ
ವಿವೇಕಾನಂದ ಸರ್ಕಲ್ ಬಳಿ 20x30 ಹಾಗೂ 60x40 ಅಳತೆಯ ಮನೆಗಳು ಮಾರಾಟಕ್ಕೆ ಲಭ್ಯವಿದೆ.
ಸ್ಥಳ: ವಿವೇಕಾನಂದ ಸರ್ಕಲ್.
ರಿಂಗ್ ರೋಡ್ ಬಳಿ 30x40 ಸೈಟು ಮತ್ತು 30x40 ಮನೆ ಮಾರಾಟಕ್ಕೆ ಇದೆ.
Mob: 9008711654

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಜಮೀನು ಮಾರಾಟಕ್ಕಿದೆ
5 ಗುಂಟಾ ರಿಂದ 1 ಎಕರೆ 10 ಗುಂಟಾ ಕೃಷಿ ಜಮೀನು, ಬೋರ್‌ವೆಲ್‌ನ ಸೌಲಭ್ಯವಿದೆ. ಬೆಲೆ – 3 ಲಕ್ಷದ 5 ಸಾವಿರ 1 ಗುಂಟಾಕ್ಕೆ, ವರುಣ ರಸ್ತೆ ಹಾಗೂ ಉತ್ತನಹಳ್ಳಿ ರಸ್ತೆ, ಮಧ್ಯವರ್ತಿಗಳು ಕ್ಷಮಿಸಿ
9964377632

ಸುಂದರ ಬರವಣಿಗೆ ತರಬೇತಿ
ಮಕ್ಕಳಿಗೆ 24 ದಿನದಲ್ಲಿ ಕಲಿಸಿಕೊಡಲಾಗುವುದು
Beautiful hand writing & Collegraphy ಚಿತ್ರಕಲೆ, ಕ್ರಾಫ್ಟ್, ಮಣ್ಣಿನ ಕಲಾಕೃತಿ, ರಟ್ಟಿನ ಕಲಾಕೃತಿ, ಸಿಮೆಂಟ್ ಮ್ಯೂರಲ್, ಫೈಬರ್ ಮ್ಯೂರಲ್, ದೇವಸ್ಥಾನದ ಗೋಪುರಗಳಲ್ಲಿ, ದೇವಸ್ಥಾನದ ಬಣ್ಣಗಳನ್ನು ಹಚ್ಚಿ ಕೊಡಲಾಗುವುದು. ವಿ.ಸೂ: ಮನೆಗೆ ಬಂದು ಸುಂದರ ಬರವಣಿಗೆ ಹೇಳಿಕೊಡಲಾಗುವುದು.
ಮೊ: 6363193824

CIVIL CONSTRUCTION
SKANDA PROPERTIES
1) ವಾಸ್ತು ಪ್ರಕಾರ ಮತ್ತು ಉತ್ತಮ ಬೆಲೆಯಲ್ಲಿ ಮನೆ ನಿರ್ಮಿಸಲಾಗುವುದು
2) ನಿಗದಿತ ಸಮಯಕ್ಕೆ ಮನೆ ನಿರ್ಮಾಣ ಪೂರ್ಣಗೊಳಿಸುವುದು
3) Free maintenance & Interior work ಮಾಡಿಕೊಡಲಾಗುವುದು
Ph: 9379888558

ಕರುನಾಡ ಹಿತ್ತಲು ಗಿಡದ ಮದ್ದು?
Need Not Run to Airports
No Waiting in Security Check
ಬೆಳಗಾಂ - ದಾಂಡೇಲಿ
BELGAUM FORT, GOKAK FALLS (Niagara of Karnataka), KITTUR, SUPA / HIDKAL DAM, SUN SET @ BHOOTANATH, JAMBOTI HILL, KAALI RIVER RAFTING, BOATING, ETC.
Week End with Good Food, Luxury Rooms, Train Journey & A.C. Bus 3D/2N : Rs. 8600/-
16th April, 23rd April, 30th April, 7th May, 14th May
Also contact for Customised Tour Packages to Kaashi, Rameshwar, Ayodhya, Delhi, Kerala, Tamil Nadu
Invest in Health & Happiness
Special Discounts to Members 9886697052

Solar Water Heaters
20 ವರ್ಷಗಳ ವ್ಯಾರಂಟಿ
Modern Living
JUPITER SOLAR
Solar Water Heater SALES & SERVICE



SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
1. 2 BHK Apartment @ KRS Rd, Metagalli
2. 2x30 G+2 House@ Arvind Ngr
3. 30x40 House, 20x40, 30x50 40x60 Sites Near JP Nagar
4. 23x35 G+1 House, Srirampura 20x30 Site @ VRL Lyt, HD Kote Rd
5. 3 BHK, New House @40 feet Road, Near Harividyalaya, Bogadi
PRAKRUTHI PROPERTIES
95386 90359, 90359 90359

ಶ್ರೀ ಶಂಕರ್ ಟೂರಿಸ್ಟ್
26–4–2026 7 ದಿನ ಪ್ರವಾಸ, ವೇಲೂರು ಗೋಲ್ಡನ್ ಟೆಂಪಲ್, ಶ್ರೀರಂಗಾ, ರಾಮೇಶ್ವರ, ಕನ್ಯಾಕುಮಾರಿ, ತಿರುವಣ್ಣಾಮಲೈ 9 ನವಗ್ರಹ ದೇವಸ್ಥಾನ, ತಿರುಚೆಂದೂರ್, ಮಧುರೈ, ಈಶ ಫೌಂಡೇಶನ್ etc. (ಊಟ ಮತ್ತು ವಸತಿ ಸೇರಿದೆ)
9986160674

ಮನೆ ಮಾರಾಟಕ್ಕಿದೆ (Good Location)
a) 20'x40' -N/F, G/Flr ಮನೆ BEML - ಶ್ರೀರಾಂಪುರ ಮಾರಾಟಕ್ಕಿದೆ. b) ವಸಂತನಗರ 30'x40'- ಬಾಡಿಗೆಗೆ ಇದೆ
9380599261
8197085900

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಸೈಟು ಮಾರಾಟಕ್ಕಿದೆ
18x40, W/S corner, ವಿನಾಯಕ ಎನ್‌ಕ್ಲೇವ್
MUDA Approved Hootagalli.
Mob: 8139957015

SITE FOR SALE
35x55, N/E Corner, Aishwarya Garden, Mysore-Hunsur Road.
Mob: 8660897848

SITE FOR SALE
20x30 S/F
Vinayaka Enclave (MUDa), Hootagalli.
Mob: 89040 71623

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Bosch ಕಂಪನಿಯಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 98801 51303

ಮನೆ ಮಾರಾಟಕ್ಕಿದೆ
15x30, ಪೂರ್ವಕ್ಕೆ 2 BHK, Duplex ಸುಬ್ರಮಣ್ಯನಗರ, ಹೆಬ್ಬಾಳು 3ನೇ ಹಂತ, ಮೈಸೂರು
9035663537
9916763537

ತಕ್ಷಣ ಬೇಕಾಗಿದ್ದಾರೆ
ಚಿಕ್ಕಳ್ಳಿ, ವರುಣ, ಹೆಬ್ಬಾಳು, ಕೆ.ಆರ್. ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್, ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ESI & PF ಊಟ, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ:
8660309477

SITE FOR SALE
25x60, N/W Corner, Yesh Mega City, Mysore-Hunsur Road.
Mob: 7483487934

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತಮುತ್ತ ಇರುವ ಲೇಔಟ್‌ಗಳಲ್ಲಿ.
9686071750

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

SITE FOR SALE
20/40 EAST FACE NEAR G-SQURE RR NAGAR 46 LAKH. 20/45 EAST FACE NEAR CHRIST PUBLIC SCHOOL DHATTGALLI 58 LAKH
8073799013

ಬೇಕಾಗಿದ್ದಾರೆ
ಟ್ರೋಫಿ ಶಾಪ್‌ನಲ್ಲಿ ಸ್ಟಿಕರ್ ಕಟಿಂಗ್, ಪೇಸ್ಟಿಂಗ್ ಮತ್ತು ಸ್ಟಾಕ್ ಮೇಂಟೈನ್ ಮಾಡಲು ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ಕನ್ನಡ ಓದಲು ಮತ್ತು ಬರೆಯಲು ಬರಬೇಕು ಸಂಬಳ 8000 ದಿಂದ 12000
9972827814\ 9741418376
ರಾಮಸ್ವಾಮಿ ಸರ್ಕಲ್ ಹತ್ತಿರ, ಡಿ ಸುಬ್ಬಯ್ಯ ರಸ್ತೆ, ಮೈಸೂರು

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋ॥ ಹಂಪಾಪುರ ಹೋ॥ಯಲ್ಲಿ 10 ಗುಂಟೆ, 15 ಗುಂಟೆ, 20 ಗುಂಟೆ ಲೇಔಟ್ ನಿರ್ಮಾಣ ಮಾಡಲು 1 ಎಕರೆ 4 ಗುಂಟೆ, 20 ಗುಂಟೆ, 34 ಗುಂಟೆ ಮಾರಾಟಕ್ಕಿದೆ.
9945661696

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು
ಸ್ಥಳ : 1)ಹೆಬ್ಬಾಳ್ 2)ಹುಲಿಕೆರೆ 3)ಪಂಪ್‌ಹೌಸ್(ಕೆಆರ್‌ಎಸ್ ರಸ್ತೆ)
9686566261
7259526261

ಸಿಬ್ಬಂದಿ ಬೇಕಾಗಿದ್ದಾರೆ
ಹೋಟೆಲ್ ದೇವಿ ಅನೆಕ್ಸ್‌ಗೆ ಅನುಭವಿ ಸಪ್ಲೈಯರ್ ಮತ್ತು ಕಿಚನ್ ಹೆಲ್ಪರ್/ಸರ್ವಿಸ್ ಬಾಯ್ ಬೇಕಾಗಿದ್ದಾರೆ. ಸೌಲಭ್ಯ: ಊಟ ಮತ್ತು ವಸತಿ ವ್ಯವಸ್ಥೆ ಇದೆ. ವೇತನ: ಕೆಲಸದ ಮೇಲೆ ನಿರ್ಧರಿಸಲಾಗುತ್ತದೆ. ಸ್ಥಳ: ಸರಸ್ವತಿಪುರಂ ಮೈಸೂರು, ಸಂಪರ್ಕಿಸಿ
9916779020
9739211543

SITE FOR SALE
30x40 w/f Railway layout Near RT Nagar
9740088990

ತಕ್ಷಣ ಬೇಕಾಗಿದ್ದಾರೆ
(ನೈಟ್ ಶಿಫ್ಟ್ ಮಾತ್ರ) ಹಳೇ RMC ಸರ್ಕಲ್ ಮೈಸೂರು ಪೆಟ್ರೋಲ್ ಬಂಕ್ ಏರ್ ಬಾಯ್ ಮತ್ತು ಕ್ಯಾಷಿಯರ್ ವಯಸ್ಸು 20 ರಿಂದ 40 ಪುರುಷರು
9164777336
9902179776

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಪೊಲೀಸ್ ಸಿಬ್ಬಂದಿ ವಸತಿ ಗೃಹ ಉದ್ಘಾಟನೆ

ಬೆಟ್ಟದಪುರ, ಏ.3– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಇವರ ಸಹಯೋಗದೊಂದಿಗೆ ನೂತನವಾಗಿ ನಿರ್ಮಿಸಿರುವ ಪೊಲೀಸ್ ಸಿಬ್ಬಂದಿ ವಸತಿ ಗೃಹವನ್ನು ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.



ನೂತನ ಪೊಲೀಸ್ ಸಿಬ್ಬಂದಿ ವಸತಿ ಗೃಹವನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಸಚಿವರು, ಪೊಲೀಸರು ಕಾನೂನು ಸುವಸ್ಥೆ ಕಾಪಾಡುವಲ್ಲಿ ತಮ್ಮದೇ ಆದ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡು ಬರುವ ಜಮೀನಿನ ಗಲಾಟೆ ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಪೊಲೀಸರು ಎಚ್ಚರಿಕೆಯಿಂದ ಬಗೆಹರಿಸಬೇಕು. ಅಂತಹ ಸಂದರ್ಭಗಳಲ್ಲಿ ಪೊಲೀಸರು ತಕ್ಷಣ ಸ್ಪಂದಿಸಿ, ಯಾವುದೇ ಒತ್ತಡಗಳಿಗೆ ಒಳಗಾಗದೇ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಸಿಬ್ಬಂದಿಗಳು ಠಾಣೆ ಸಮೀಪ ವಾಸಿಸುವುದರಿಂದ ಘಟನೆ ಸಂಭವಿಸಿದ ಕೂಡಲೇ ತಕ್ಷಣ ಸ್ಥಳಕ್ಕೆ ತೆರಳಿ ಸ್ಪಂದಿಸಲು ಸಾಧ್ಯವಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಸೂಕ್ತ ಸಮಯದಲ್ಲಿ ಸೇವೆ ನೀಡಲು ಅನುಕೂಲವಾಗುತ್ತದೆ ಎಂದರು.

ಈ ವೇಳೆ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಲೋಕೇಶ್, ಮೈಮುಲ್ ನಿರ್ದೇಶಕ ಪ್ರಕಾಶ್, ಮುಖಂಡರಾದ ಡಿ.ಟಿ.ಸ್ವಾಮಿ, ಪುಟ್ಟರಾಜು, ಗಂಗಾಧರ್, ರಾಮಚಂದ್ರ, ಸಣ್ಣಸ್ವಾಮಿಗೌಡ, ಅಪರ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್, ಎಲ್.ನಾಗೇಶ್, ಸಿಪಿಐ ದೀಪಕ್, ಎಸ್‌ಐ ಅಜಯ್ ಕುಮಾರ್, ಸತೀಶ್ ಕಶ್ಯಪ, ರವಿ ಸೇರಿದಂತೆ ಇತರರಿದ್ದರು.

ಜನಗಣತಿ ವೇಳೆ ನಿಖರ ಮಾಹಿತಿ ಪಡೆಯಿರಿ

ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಸೂಚನೆ

ತಿ.ನರಸೀಪುರ, ಏ.3– ಜನಗಣತಿದಾರರು ಮನೆಗಳಿಗೆ ಭೇಟಿ ನೀಡಿದ ವೇಳೆ ಮನೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಂದ ನಿಖರ ಮಾಹಿತಿ ಪಡೆಯಬೇಕು ಎಂದು ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ತಿಳಿಸಿದರು.

ಪಟ್ಟಣದ ಸೆಂಟ್ ಮೇರಿಸ್ ವಿದ್ಯಾಸಂಸ್ಥೆಯಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಜನಗಣತಿದಾರರ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗಣತಿದಾರರು ಮತ್ತು ಮೇಲ್ವಿಚಾರಕರು ತಪ್ಪದೇ 3 ದಿನ ತರಬೇತಿ ಪಡೆಯಬೇಕು. ತರಬೇತಿಯು ಮ್ಯಾಪಿಂಗ್ ಮುಖಾಂತರ ಗಡಿ ಗುರುತಿಸಿ ನಿಮ್ಮ ಮನೆ ಪಟ್ಟಿ ಸಿದ್ಧತೆಗೆ ಬಹಳ ಮುಖ್ಯವಾಗಿದೆ ಎಂದರು.

ಗಣತಿದಾರರಿಗೆ ಕಾಲ ಕಾಲಕ್ಕೆ ನಿಖರ ಮಾಹಿತಿ ನೀಡಲಾಗುವುದು. ಮನೆಗಳಿಗೆ ನಂಬರ್ ಕೊಡದಿದ್ದರೆ ಗಣತಿದಾರರು ನಂಬರ್ ಕೊಡುವಂತೆ ತಿಳಿಸಿದರು.



ತರಬೇತಿ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಚಾಲನೆ ನೀಡಿದರು.

ಸಂಗ್ರಹವಾದ ಮಾಹಿತಿಗಳನ್ನು ಮೇಲ್ವಿಚಾರಕರ ಗಮನಕ್ಕೆ ತರಬೇಕು. ಆಂಡ್ರಾಯ್ಡ್ ಮೊಬೈಲ್‌ಗಳನ್ನೇ ಮಾಹಿತಿ ಸಂಗ್ರಹಕ್ಕೆ ಬಳಸಬೇಕೆಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ಮಾತನಾಡಿ, ತರಬೇತಿ ಎಂಬುದು ಪ್ರತಿಯೊಬ್ಬ ಮನುಷ್ಯನ ಪ್ರಬುದ್ಧತೆಗೆ ಹಿಡಿದ ಕನ್ನಡಿ, ಸರಿಯಾದ ತರಬೇತಿ ಸಿಗದಿದ್ದಾಗ ಅಥವಾ ಸರಿಯಾಗಿ ಅರ್ಥೈಸಿಕೊಳ್ಳದಿದ್ದಾಗ ನಾವು ಕೆಲಸದಲ್ಲಿ ಪರಿಪೂರ್ಣತೆ ಸಾಧಿಸಲಾಗದು. ಆದ್ದರಿಂದ ಒಂದೊಂದು ತಂಡಕ್ಕೂ 3 ದಿನಗಳಂತೆ (ಏ.3ರಿಂದ 11ರವರೆಗೆ) 9 ದಿನಗಳ ಕಾಲ ನೀಡುವ ತರಬೇತಿಯಲ್ಲಿ ತಪ್ಪದೇ ಭಾಗವಹಿಸಿ ಮನೆಗಣತಿ ಹಾಗೂ ಜನಗಣತಿ ಕಾರ್ಯದ ಆಧಾರ ಸ್ಥಂಭಗಳಾಗಬೇಕು. ಇದರಿಂದ ದೇಶದ ಜನಸಂಖ್ಯೆ ಆಧಾರದ ಮೇಲೆ ಪ್ರತಿಯೊಂದು ಕುಟುಂಬಕ್ಕೂ ಸಿಗಬೇಕಾದ ಸೌಲಭ್ಯಗಳನ್ನು ಕೊಡಿಸುವ ಕೀರ್ತಿ ಗಣತಿದಾರರು ಮತ್ತು ಮೇಲ್ವಿಚಾರಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲುತ್ತದೆ ಎಂದರು.

ಈ ವೇಳೆ ಸಿಡಿಪಿಒ ಗೋವಿಂದರಾಜು, ಬಿಆರ್‌ಸಿ ನಾಗೇಶ್, ಡೆಪ್ಯೂಟಿ ತಹಸೀಲ್ದಾರ್ ಮಹದೇವಸ್ವಾಮಿ, ಸಹಾಯಕ ನೋಡಲ್ ಅಧಿಕಾರಿ ಕುಮಾರ್, ಸುರೇಶ್, ನಿತಿನ್, ಗಣತಿದಾರರ ತರಬೇತುದಾರರಾದ ಮಾಸ್ಟರ್ ಟ್ರೇನರ್ಸ್ (ಫೀಲ್ಡ್ ಟ್ರೇನರ್ಸ್) ಗಳಾದ ಉಪನ್ಯಾಸಕರಾದ ಎನ್.ಜವರಯ್ಯ, ಉಪನ್ಯಾಸಕ ಕುಮಾರಸ್ವಾಮಿ, ಸುನೀಲ್ ಜಸ್ಟಿನ್, ಮುರಳೀಧರ್, ಚಲುವರಾಜು, ಚಂದ್ರು, ದೇವಣ್ಣ ಹಾಗೂ ಜನಗಣತಿದಾರರಿದ್ದರು.

ಕ್ಷುಲ್ಲಕ ವಿಚಾರಕ್ಕೆ ಗುಂಪುಗಳ ನಡುವೆ ಮಾರಾಮಾರಿ

6 ಮಂದಿಗೆ ಗಾಯ: ಆಸ್ಪತ್ರೆಗೆ ದಾಖಲು

ನಂಜನಗೂಡು, ಏ.3– ಕ್ಷುಲ್ಲಕ ಕಾರಣಕ್ಕೆ ಗುಂಪುಗಳ ನಡುವೆ ಮಾರಾಮಾರಿ ನಡೆದು 6 ಮಂದಿ ಗಾಯಗೊಂಡಿರುವ ಘಟನೆ ಇಲ್ಲಿನ ನೀಲಕಂಠನಗರದಲ್ಲಿ ಗುರುವಾರ ರಾತ್ರಿ ನಡೆದಿದೆ.

ಕಾರು ನಿಲ್ಲಿಸುವ ವಿಚಾರಕ್ಕೆ ಸದ್ದಾಂ ಮತ್ತು ಖುದ್ದುಸ್ ನಡುವೆ ಮಾತಿನ ಚಕಮಕಿ ನಡೆದು, ಖುದ್ದುಸ್ ತಂದೆ ಚಾಂದ್ ಸಾಬ್ ಅವರನ್ನು ಸದ್ದಾಂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾಗಿದೆ. ಇದರಿಂದ ಆರಂಭವಾದ ಗಲಾಟೆ ಗುಂಪು ಘರ್ಷಣೆಗೆ ತಿರುಗಿ ಪರಸ್ಪರ ಮಾರಕಾಸ್ತ್ರಗಳಿಂದ ಹೊಡೆದಾಡಿಕೊಂಡಿದ್ದಾರೆ.

ಘಟನೆಯಲ್ಲಿ ನೀಲಕಂಠ ನಗರದ ನಿವಾಸಿಗಳಾದ ಖುದ್ದುಸ್, ನವೀದ್, ಖಲೀಲ್, ಇಂತಿಯಾಜ್, ಶೌಫ್ ರಿಯಾನ್, ಅಜೀರಾ ಭಾನು ಗಾಯಗೊಂಡಿದ್ದು, ಅವರಿಗೆ ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.



ಈ ಸಂಬಂಧ ನೀಲಕಂಠ ನಗರದ ಜಾಫರ್, ಸಲ್ಮಾನ್, ಅಂಜಾದ್ ಅವರ ಮಗ ಸುಹೇಲ್, ಇಕ್ಬಾಲ್ ಅವರ ಮಗ ಸಾಹಿದ್, ಫನಿ ಅವರ ಮಗ ಬಾಬು ಎಂಬುವರ ಮೇಲೆ ದೂರು ದಾಖಲಾಗಿದೆ.

ಗಾಯಾಳು ರಿಯಾನ್ ಮಾತನಾಡಿ, ಆರೋಪಿಗಳು ಅಕ್ರಮ ಗ್ಯಾಸ್ ದಂಧೆ ಮತ್ತು ಮಾದಕ ವಸ್ತುಗಳ ಮಾರಾಟ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಬಡಾವಣೆಯಲ್ಲಿ ಗುಂಡಾಗಿರಿ ನಡೆಸಿ ಹಲವರ ಮೇಲೆ ಹಲ್ಲೆ ನಡೆಸಿದ್ದಾರೆ. ನೆನ್ನೆ ಸಹ ಮಾದಕ ವಸ್ತುಗಳನ್ನು ಸೇವನೆ ಮಾಡಿ ನಶೆಯಲ್ಲಿ ನಮ್ಮ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿದ್ದಾರೆ. ಆದ್ದರಿಂದ ಆರೋಪಿಗಳನ್ನು ಕಠಿಣ ಕಾನೂನು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂಬಂಧ ನಂಜನಗೂಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಡಿವೈಎಸ್ಪಿ ರಘು, ಸಿಪಿಐ ರವೀಂದ್ರ ಭೇಟಿ ನೀಡಿ ಪರಿಶೀಲಿಸಿದರು.

ಪ್ರತಿ ದಾಳಿ

ನಂಜನಗೂಡಿನಿಂದ ಗಡಿಪಾರು ಶಿಕ್ಷೆಗೆ ಒಳಗಾಗಿದ್ದ ಗಾಯಾಳುಗಳ ಸಂಬಂಧಿಕ ಆರೋಪಿ ಸುಹೇಲ್ ಅವರ ತಂದೆ ಮೇಲೆ ಹಲ್ಲೆ ನಡೆಸಿರುವ ಘಟನೆ ಶುಕ್ರವಾರ ಜರುಗಿದೆ. ನಗರದ ನೀಲಕಂಠ ನಗರದಲ್ಲಿ ಗುರುವಾರ ರಾತ್ರಿ ಕಾರು ಪಾರ್ಕಿಂಗ್ ಮಾಡುವ ಕಾರಣಕ್ಕೆ 2 ಗುಂಪುಗಳ ನಡುವೆ ಮಾರಾಮಾರಿ ನಡೆದಿತ್ತು. ಶುಕ್ರವಾರ ಮತ್ತೆ ಮಾರಾಮಾರಿ ಮುಂದುವರೆದಿದ್ದು, ಹಾಲಿ ಗುಂಡ್ಲುಪೇಟೆಯಲ್ಲಿ ವಾಸವಾಗಿರುವ ಗಾಯಾಳುಗಳ ಸಂಬಂಧಿಕ ಜಾಫರ್ ಅಲಿಯಾಸ್ ಗುಡ್ಡು ಎಂಬುವರು ಸುಹೇಲ್ ಅವರ ತಂದೆ ಅಂಜಾದ್ ಪಾಷ ಎಂಬುವರ ಮೇಲೆ ಮಾರಕಾಸ್ತ್ರಗಳಿಂದ ಪ್ರತಿ ದಾಳಿ ನಡೆಸಿ ಹಲ್ಲೆ ನಡೆಸಿದ್ದಾರೆ. ಇದರಿಂದ ಬಡಾವಣೆಯಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಜನರು ಭಯಭೀತರಾಗಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಸ್ಥಳದಲ್ಲಿ ಬೀಡು ಬಿಟ್ಟು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ.

ವಿಜೃಂಭಣೆಯ ಶ್ರೀಅಗಸ್ತ್ಯೇಶ್ವರಸ್ವಾಮಿ ತೆಪ್ಪೋತ್ಸವ

ತಿ.ನರಸೀಪುರ, ಏ.3– ತಿರುಮಕೂಡಲು ನರಸೀಪುರದ ಶ್ರೀಅಗಸ್ತ್ಯೇಶ್ವರ ಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ತ್ರಿವೇಣಿ ಸಂಗಮದಲ್ಲಿ ಶ್ರೀಅಗಸ್ತ್ಯೇಶ್ವರಸ್ವಾಮಿ ತೆಪ್ಪೋತ್ಸವ ನೂರಾರು ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನೆರವೇರಿತು.



ಶ್ರೀಅಗಸ್ತ್ಯೇಶ್ವರಸ್ವಾಮಿಯವರ ತೆಪ್ಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಈ ವೇಳೆ ಕಾವೇರಿ ನದಿಯ ಸ್ನಾನ ಘಟ್ಟದ ಎರಡೂ ತೀರದಲ್ಲಿ ನೆರೆದಿದ್ದ ನೂರಾರು ಭಕ್ತರು ಶ್ರದ್ಧಾಭಕ್ತಿಯಿಂದ ತೆಪ್ಪೋತ್ಸವವನ್ನು ಕಣ್ತುಂಬಿಕೊಂಡು ಪುನೀತರಾದರು.

ತೆಪ್ಪೋತ್ಸವ ಅಂಗವಾಗಿ ನಾಡಿನ ವಿವಿಧ ಮೂಲೆಯಿಂದ ಆಗಮಿಸಿದ್ದ ಭಕ್ತರು ಕಾವೇರಿ ನದಿಯಲ್ಲಿ ತೀರ್ಥಸ್ನಾನ ಮಾಡಿ, ಧೂಪ ದೀಪ ಸೇವೆ ಸಲ್ಲಿಸಿದರು. ನಂತರ ಶ್ರೀಅಗಸ್ತ್ಯೇಶ್ವರಸ್ವಾಮಿ ಹಾಗೂ ಪೂರ್ಣ ಮಂಗಳ ಕಾಮಾಕ್ಷಮ್ಮನವರ ದರ್ಶನ ಪಡೆದರು.

ರಾತ್ರಿ 7 ಗಂಟೆಗೆ ದೇವಾಲಯದಿಂದ ಉತ್ಸವಮೂರ್ತಿಯನ್ನು ಮಂಗಳ ವಾದ್ಯದೊಡನೆ ಮುತ್ತಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಕಾವೇರಿ ನದಿ ದಡಕ್ಕೆ ತರಲಾಯಿತು. ಈ ವೇಳೆ ದೇಗುಲದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಶ್ರೀಅಗಸ್ತ್ಯೇಶ್ವರ ಸ್ವಾಮಿಯವರ ಉತ್ಸವಮೂರ್ತಿಗೆ ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದ ನಂತರ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಪೂರ್ಣ ಮಂಗಳಕಾಮಾಕ್ಷಮ್ಮನ ಸಮೇತ ಶ್ರೀಅಗಸ್ತ್ಯೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಉತ್ಸವ ಮೂರ್ತಿ ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಅಗಸ್ತ್ಯೇಶ್ವರ ಸ್ವಾಮಿಯವರನ್ನು ಕಾವೇರಿ ನದಿಯಲ್ಲಿ ಪೂರ್ವ, ಪಶ್ಚಿಮಾಭಿಮುಖವಾಗಿ 3 ಬಾರಿ ಪ್ರದಕ್ಷಿಣೆ ಹಾಕಿಸಲಾಯಿತು.

ಈ ವೇಳೆ ಕಾವೇರಿ ನದಿಯ ಶ್ರೀಗುಂಜಾ ನರಸಿಂಹಸ್ವಾಮಿ ನದಿ ದಡದ ತೀರದಲ್ಲಿ ಪಟಾಕಿ ಹಾಗೂ ಬಾಣ ಬಿರುಸು ಸೇವೆ ಸಲ್ಲಿಸಲಾಯಿತು. ಪಾರುಪತ್ತೇದಾರ್ ಟಿ.ಎಸ್.ಚೇತನ್, ಪುರಸಭಾ ಮಾಜಿ ಸದಸ್ಯ ಚೇತನ್, ಭೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ತಿರುಮಕೂಡಲು ಲಕ್ಷ್ಮಣ, ಈಶ್ವರ್‌ಗೌಡ, ಪವನ್ ಕುಮಾರ್, ಅರ್ಚಕ ವೃಂದ ಹಾಜರಿದ್ದರು.

ಸರಿಯಾದ ಆಹಾರ ಕ್ರಮದಿಂದ ರೋಗ ದೂರ

ಹುಣಸೂರು, ಏ.3– ಮನುಷ್ಯ ದಿನನಿತ್ಯ ಸರಿಯಾದ ಆಹಾರ ಕ್ರಮ ಅನುಸರಿಸಿದರೆ ಯಾವ ರೋಗವು ಹತ್ತಿರ ಸುಳಿಯುವುದಿಲ್ಲ ಎಂದು ಹುಣಸೂರು ಅಪೋಲೊ ಆಸ್ಪತ್ರೆ ಪ್ರಸೂತಿ ತಜ್ಞೆ ಡಾ.ಬಿ.ಕವಿತಾ ತಿಳಿಸಿದರು.

ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಗರದ ಸರ್ಕಾರಿ ಮಹಿಳಾ ಕಾಲೇಜು, ರೋಟರಿ ಕ್ಲಬ್, ಹುಣಸೂರು ಅಪೋಲೋ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಉಚಿತ ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆ ನೀಡಿ ಮಾತನಾಡಿದ ಅವರು, ಕೆಲವರು ಸಣ್ಣ ಇದ್ದ ಮಾತ್ರಕ್ಕೆ ಆರೋಗ್ಯವಾಗಿದ್ದಾರೆ. ದಪ್ಪ ಇದ್ದರೇ ಅನಾರೋಗ್ಯ ಎಂಬ ತಪ್ಪು ಕಲ್ಪನೆ ಬೇಡ. ಸಣ್ಣ ಇರಲಿ ತಪ್ಪವಿರಲಿ ಸಸ್ಯಹಾರಿಗಳಾದರೆ ಸೊಪ್ಪು, ತರಕಾರಿ, ಬೆಣ್ಣೆ ತುಪ್ಪ ಮಾಂಸಹಾರಿಗಳಾದರೆ ಮೀನು, ಮೊಟ್ಟೆ, ಚಿಕನ್ ಕ್ರಮವಾಗಿ ಸೇವಿಸಿದರೆ ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ ಇರುತ್ತದೆ ಎಂದರು.



ಶಿಬಿರದಲ್ಲಿ ರೋಗಿಗಳು ತಪಾಸಣೆಗೆ ಒಳಗಾದರು.

ನಮ್ಮ ಜೀವನ ಶೈಲಿ ಕೂಡ ಬದಲಾವಣೆಯಾಗಬೇಕು. ಪ್ರಸ್ತುತ ಬಿಸಿಲ ತಾಪ ಜಾಸ್ತಿ ಇರುವುದರಿಂದ ಶುದ್ಧ ಕುಡಿಯುವ ನೀರನ್ನು ಹೆಚ್ಚಾಗಿ ಸೇವಿಸುವ ಅಗತ್ಯವಿದೆ. ದೇಹದ ಉಷ್ಣಾಂಶ ಸಮತೋಲನಕ್ಕಾಗಿ ಪೌಷ್ಟಿಕಾಂಶ ಆಹಾರ, ಫಲಹಾರ ಸೇವಿಸುವುದರಿಂದ ನಿಮ್ಮ ಆರೋಗ್ಯ ವೃದ್ಧಿಸಲಿದೆ. ಇದಕ್ಕೆ ವಯಸ್ಸಿನ ಅಂತರವಿಲ್ಲ ಆರೋಗ್ಯ ಎಲ್ಲರ ಕೇಂದ್ರಬಿಂದು. ಅದನ್ನು ಕಾಪಾಡುವ ಪ್ರಯತ್ನವಾಗಲಿ ಎಂದರು.

ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿದರು. ಕಾರ್ಯಕ್ರಮಾಧಿಕಾರಿ ಡಾ.ಪ್ರಸನ್ನ ಕೆ.ಪಿ, ಸಹ ಶಿಬಿರಾಧಿಕಾರಿ ಎಂ.ಸಿ.ಲಕ್ಷಯ್ಯ ಮಾತನಾಡಿದರು. ಅಪೋಲೊ ಆಸ್ಪತ್ರೆ ವ್ಯವಸ್ಥಾಪಕ ಕೇಶವ್, ಸುಮಾ, ಮಧುರ, ಹರ್ಷಿತ ಇದ್ದರು.

ಕೌಟುಂಬಿಕ ಕಲಹ: ಪತ್ನಿ ಹತ್ಯೆಗೈದ ಪತಿ

ಸರಗೂರು, ಏ.3– ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯೇ ಪತ್ನಿಯನ್ನು ಹತ್ಯೆಗೈದಿರುವ ಘಟನೆ ತಾಲೂಕಿನ ಬಿದರಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ತಾಲೂಕಿನ ಬಿದರಹಳ್ಳಿ ಗ್ರಾಮದ ನಿವಾಸಿ ಶ್ರುತಿ(30) ಹತ್ಯೆಗೊಳಗಾಗಿದ್ದು, ಪತಿ ಜಗದೀಶ್(35) ಹತ್ಯೆಗೈದ ಆರೋಪಿ. 12 ವರ್ಷಗಳ ಹಿಂದೆ ಹಾಸನ ಜಿಲ್ಲೆ ಅರಕಲಗೂಡು ತಾಲೂಕು ಕೇರಳಪುರ ಗ್ರಾಮದ ನಿವಾಸಿ ಜಗದೀಶ ಎಂಬುವರಿಗೆ ಶ್ರುತಿ ಅವರನ್ನು ಮದುವೆ ಮಾಡಿಕೊಡಲಾಗಿತ್ತು. ಇವರಿಗೆ ಒಂದು ಗಂಡು, ಹೆಣ್ಣು ಮಗು ಇದೆ. ಜಗದೀಶ್ ಕಳೆದ ಏಳೆಂಟು ವರ್ಷಗಳ ಹಿಂದೆ ಕುಟುಂಬ ಸಮೇತರಾಗಿ ಬಿದರಹಳ್ಳಿಗೆ ಆಗಮಿಸಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅಲ್ಲದೇ ಜೀವನ ನಿರ್ವಹಣೆಗೆ ಬೇಕರಿ ಇಟ್ಟುಕೊಂಡಿದ್ದರು. ಮದುವೆಯಾದ ಕೆಲ ವರ್ಷ ಅನ್ಯೋನ್ಯವಾಗಿದ್ದ ಶ್ರುತಿ ಹಾಗೂ ಜಗದೀಶ್ ದಂಪತಿ ನಡುವೆ ಇತ್ತೀಚೆಗೆ ಹೊಂದಾಣಿಕೆ ಇರಲಿಲ್ಲ. ಹೀಗಾಗಿ ಪದೇ ಪದೆ ಜಗಳವಾಗುತ್ತಿತ್ತು. ಕಳೆದ 2 ದಿನಗಳ ಹಿಂದೆ ಶ್ರುತಿ ತನ್ನ ತಮ್ಮನಿಗೆ ಕರೆ ಮಾಡಿ ನಿಮ್ಮ ಬಾವ ಕುಡಿದು ಬಂದು ನನ್ನ ಮೇಲೆ ಅನುಮಾನಪಟ್ಟು ಹಲ್ಲೆ ನಡೆಸಿದ್ದಾರೆ ಎಂದು ತಿಳಿಸಿದ್ದಳು. ಅಲ್ಲದೇ ಜಗದೀಶ್, ಶ್ರುತಿ ಅವರ ತಾಯಿಗೆ ಕರೆ ಮಾಡಿ ನಿಮ್ಮ ಮಗಳಿಗೆ ಬುದ್ದಿ ಹೇಳಿ ಅವಳು ಅವರಿವರ ಮನೆಗೆ ಹೋಗಿ ಕುಳಿತುಕೊಂಡು ಮಾತನಾಡುತ್ತಾಳೆ. ನಾನು ಎಷ್ಟೆ ಹೇಳಿದರೂ ನನ್ನ ಮಾತನ್ನು ಕೇಳುತ್ತಿಲ್ಲ. ಹೀಗೆ ಮುಂದುವರೆದರೆ ಅವಳನ್ನು ಕೊಲೆ ಮಾಡುತ್ತೇನೆ ಎಂದು ತಿಳಿಸಿದ್ದ ಎನ್ನಲಾಗಿದೆ. ಈ ವೇಳೆ ಅವಳಿಗೆ ಬುದ್ದಿ ಹೇಳುವುದಾಗಿ ತಿಳಿಸಿದ್ದರೂ, ಗುರುವಾರ ಜಗದೀಶ್ ಶ್ರುತಿಯನ್ನು ಹತ್ಯೆಗೈದಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಶ್ರುತಿ ತಾಯಿ ಹಾಗೂ ತಮ್ಮ ಕಾರ್ತಿಕ್ ಬಂದು ನೋಡಿದಾಗ ಶ್ರುತಿ ಬಾಯಿಂದ ರಕ್ತ ಬರುತ್ತಿದ್ದು, ಎಡಗಣ್ಣಿನ ಮೇಲೆ ಗಾಯವಾಗಿದೆ. ತಲೆ ಮುಟ್ಟಿ ನೋಡಿದಾಗ ಹಿಂಭಾಗ ಏಟಾಗಿದೆ. ಕುತ್ತಿಗೆಗೆ ಸೀರೆಯ ಒಂದು ಬದಿಯನ್ನು ಬಿಗಿದಿದ್ದು, ಮತ್ತೊಂದು ತುದಿ ಮರದ ತೊಲೆಯಲ್ಲಿ ಕಟ್ಟಿರುವುದು ಕಂಡು ಬಂದಿದೆ. ಹೀಗಾಗಿ ನನ್ನ ಬಾವ ಜಗದೀಶ್ ನಮ್ಮ ಅಕ್ಕನ ಮೇಲೆ ಅನುಮಾನ ಪಟ್ಟು ಹಲ್ಲೆ ನಡೆಸಿ ಕೊಲೆಗೈದು ಸೀರೆಯಿಂದ ಕತ್ತಿಗೆ ಬಿಗಿದು ತೊಲೆಗೆ ನೇತು ಹಾಕಿದ್ದಾನೆ. ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆ ಶ್ರುತಿ ತಮ್ಮ ಕಾರ್ತಿಕ್ ಸರಗೂರು ಠಾಣೆಗೆ ದೂರು ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಜಗದೀಶನನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ. ಅಲ್ಲದೇ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಒಪ್ಪಿಸಲಾಗಿದೆ.

ಕನ್ನಡ ಕೇವಲ ಭಾಷೆಯಲ್ಲ ನಮ್ಮ ಜೀವನದ ಅಸ್ಮಿತೆ

ಪ್ರಾಧ್ಯಾಪಕಿ ಡಾ.ತ್ರಿವೇಣಿ ಅಭಿಪ್ರಾಯ

ಹೆಚ್.ಡಿ.ಕೋಟೆ, ಏ.3– ಕನ್ನಡ ಕೇವಲ ಭಾಷೆ ಅಲ್ಲ. ಅದು ನಮ್ಮ ಜೀವ ಮತ್ತು ಜೀವನ. ಕನ್ನಡ ನಮ್ಮ ಜೀವನದ ಅಸ್ಮಿತೆ ಎಂದು ಮೈಸೂರಿನ ಸಿದ್ಧಾರ್ಥ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ತ್ರಿವೇಣಿ ತಿಳಿಸಿದರು.

ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕನ್ನಡ ಸಾಹಿತ್ಯದ ಬಹುಮುಖಿ ನೆಲೆಗಳು ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡಿಗರಾದ ನಾವು ವಿಶ್ವದ ಯಾವುದೇ ಮೂಲೆಗೆ ಹೋದರೂ ಭಾಷೆ ನಮ್ಮನ್ನು ಗುರುತಿಸುತ್ತದೆ. ಕನ್ನಡಿಗರಾದ ನಾವು ಆಳವಾಗಿ ಕನ್ನಡವನ್ನು ತಿಳಿದುಕೊಳ್ಳಬೇಕು. ಭಾಷಾ ಸಂಶೋಧಕ ಡಿ.ಆರ್.ನಾಗರಾಜ್ ಅವರು ತಮ್ಮ ಸಂಶೋಧಕ ಪ್ರಬಂಧದಲ್ಲಿ ವಿಶ್ವದಲ್ಲಿ ಕನ್ನಡ ಭಾಷೆಗೆ ಪ್ರಧಾನ ಸ್ಥಾನಮಾನ ಇದೆ ಎಂದು ತಿಳಿಸಿದ್ದಾರೆ. ಇಷ್ಟಾದರೂ ಪ್ರಸ್ತುತ ನಮ್ಮ ಕನ್ನಡವನ್ನು ಉಳಿಸಿ, ಬೆಳೆಸಬೇಕಾದ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಹಾಗಾಗಿ ಕನ್ನಡದಲ್ಲೇ ಬರೆಯಬೇಕು ಮತ್ತು ಕನ್ನಡದಲ್ಲೇ ಮಾತನಾಡಬೇಕು ಎಂದರು.



ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕಿ ಡಾ.ತ್ರಿವೇಣಿ ಅವರನ್ನು ಸನ್ಮಾನಿಸಲಾಯಿತು.

ಇಂದಿಗೂ ಗ್ರಾಮಾಂತರ ಪ್ರದೇಶದ ಜನ ಹೆಚ್ಚು ಕನ್ನಡವನ್ನೇ ಬಳಸುತ್ತಾರೆ. ಗ್ರಾಮಾಂತರ ಪ್ರದೇಶದ ಶಾಲೆ, ಕಾಲೇಜುಗಳಲ್ಲಿ, ಮಕ್ಕಳಿಗೆ ಆಂಗ್ಲ ಭಾಷೆಯಲ್ಲಿ ಪಾಠ ಮಾಡಿದರೆ ಅರ್ಥವಾಗುವುದಿಲ್ಲ. ಹೀಗಾಗಿ ಕನ್ನಡದಲ್ಲೇ ಹೇಳಿ ಎನ್ನುತ್ತಾರೆ. ಇಂದಿಗೂ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಉತ್ತಮವಾಗಿದೆ. ಇದರ ನಡುವೆ ಬೇರೆ ಭಾಷಿಕರ ಹಾವಳಿ ಕಾಣುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾಷಾವಾರು ಆಧಾರದ ಮೇಲೆ ಕರ್ನಾಟಕ ರಾಜ್ಯ ರಚನೆ ಆಗಿದೆ. ವಿದ್ಯಾರ್ಥಿಗಳು ಕನ್ನಡದೊಂದಿಗೆ ಸಾಹಿತ್ಯವನ್ನು ಓದಬೇಕು ಎಂದರು. ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಸಂಸ್ಥೆಯ ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ಉಪನ್ಯಾಸಕರಾದ ಚೆನ್ನಕೇಶವ ನಾಯಕ, ಚಂದನ, ಪ್ರಸನ್ನ ನಾಯಕ, ಮಹದೇವು, ಮಂಜು, ಸಿದ್ದರಾಜು ಸೇರಿದಂತೆ ಮತ್ತಿತರರಿದ್ದರು.

ವಿವಿಧೆಡೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಬೆಟ್ಟದಪುರ, ಏ.3– ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು, ಮಠದ ಕೊಪ್ಪಲು, ಸುರ್ಗಳ್ಳಿ, ಆನಿವಾಳು, ರಾಜನ ಬಿಳಿಗೂಲಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಅಲ್ಲದೇ ರಾಜನ ಬಿಳಿಗೂಲಿ, ಹಲಗನಹಳ್ಳಿ, ಕೌಲನಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ 5 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೂ ಚಾಲನೆ ನೀಡಿ ಮಾತನಾಡಿದ ಸಚಿವರು, ವಿಪಕ್ಷದವರು ರಾಜ್ಯ ಸರ್ಕಾರ ದಿವಾಳಿಯಾಗಿದೆ ಎನ್ನುತ್ತಾರೆ. ಅವರು ಹೇಳಿದಂತೆ ಆಗಿದ್ದರೇ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಕೋಟ್ಯಾಂತರ ರೂ.ಗಳನ್ನು ಎಲ್ಲಿಂದ ತರುತ್ತಿದ್ದೇವು ಎಂದ ಅವರು ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಸಿದ್ಧ ಎಂದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರೆಹಮದ್ ಜಾನ್ ಬಾಬು, ಸ್ವಾಮಿಗೌಡ, ಜಿಲ್ಲಾ ಬ್ಯಾಂಕ್ ನಿರ್ದೇಶಕ ಲೋಕೇಶ್, ಮೈಮುಲ್ ನಿರ್ದೇಶಕ ಪ್ರಕಾಶ್, ಪಿಎಲ್‌ಡಿ ಬ್ಯಾಂಕ್‌ನ ಹೊಲದಪ್ಪ, ಚಂದ್ರಹಾಸ, ಮಹದೇವಶೆಟ್ಟಿ, ತಾಪಂ ಮಾಜಿ ಸದಸ್ಯ ಶಂಕರೇಗೌಡ, ಸ್ವಾಮಿಗೌಡ, ಸೋಹೇಲ್ ಪಾಷಾ, ಅಬ್ದುಲ್ ಜಾವೇದ್, ಅಸ್ಲಾಂ ಪಾಷಾ, ಪಿಡಬ್ಲ್ಯೂಡಿ ಇಲಾಖೆಯ ಯೋಗಾನಂದ, ದಿನೇಶ್ ಇತರರಿದ್ದರು.


ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

2028ಕ್ಕೆ ಕುರುಬ ಸಮಾಜದವರು ಪಿ.ಪಟ್ಟಣ ಶಾಸಕರಾಗಬೇಕು

ಸಂಗೊಳ್ಳಿ ರಾಯಣ್ಣ ಸಂಘ ಉದ್ಘಾಟಿಸಿ ಮೈಲ್ಯಾಕ್ ಅಧ್ಯಕ್ಷ ಹೆಚ್.ಡಿ.ಗಣೇಶ್ ಆಶಯ

ಕಂಪಲಾಪುರ, ಏ.3– ನಮ್ಮ ಕುರುಬ ಸಮಾಜಕ್ಕೆ ಕಳೆದ 75 ವರ್ಷಗಳಿಂದ ಪಿರಿಯಾಪಟ್ಟಣದಲ್ಲಿ ಅವಕಾಶ ಸಿಕ್ಕಿಲ್ಲ. ಸಿಎಂ ಸಿದ್ದರಾಮಯ್ಯನವರ ಆಶಯದಂತೆ ಅವರು ಹೇಳಿದ ನಾಯಕರಿಗೆ ಮತ ಹಾಕುತ್ತಾ ಬಂದಿದ್ದೇವೆ. 49 ಸಾವಿರ ಮತದಾರರಿರುವ ಪಿರಿಯಾಪಟ್ಟಣದಲ್ಲಿ ನಮ್ಮವರು ಶಾಸಕರಾಗಿಲ್ಲದಿರುವುದು ದುರ್ದೈವದ ಸಂಗತಿ ಎಂದು ಮೈಲ್ಯಾಕ್ ಅಧ್ಯಕ್ಷ ಹಾಗೂ ತಾಲೂಕು ಕುರುಬರ ಸಂಘದ ಅಧ್ಯಕ್ಷ ಹೆಚ್.ಡಿ.ಗಣೇಶ್ ತಿಳಿಸಿದರು.

ಸಮೀಪದ ಕಲ್ಕೆರೆಯಲ್ಲಿ ನೂತನ ಸಂಗೊಳ್ಳಿರಾಯಣ್ಣ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ನಮ್ಮ ಜನಾಂಗದವರು ಎಲ್ಲಾ ಪಕ್ಷದಲ್ಲಿಯೂ ಇದ್ದಾರೆ. ಅವರಿಗೆ ನಮ್ಮ ಕುರುಬ ಸಮಾಜದವರು ಒಮ್ಮೆ ಶಾಸಕರಾಗಬೇಕೆನ್ನುವ ಮಹಾದಾಸೆ ಇದೆ. ಬಹು ಸಂಖ್ಯಾತರಾದ ನಾವು ನಮ್ಮವರನ್ನು ಕಳೆದ 75 ವರ್ಷಗಳಿಂದ ಶಾಸಕರನ್ನಾಗಿ ನೋಡಿಲ್ಲ. ಹೀಗಾಗಿ 2028ಕ್ಕೆ ನಮ್ಮವರನ್ನು ಶಾಸಕರನ್ನಾಗಿ ನೋಡಬೇಕೆಂಬ ಆಸೆ ಇದೆ. ಆದರೆ ಕಾಂಗ್ರೆಸ್, ಬೇರೆಯವರ ಹತ್ತಿರ ಗುಲಾಮಗಿರಿ ಕೆಲಸ ಮಾಡಿಕೊಂಡೇ ಬಂದಿದ್ದೇವೆ ಎಂದರು.



ನೂತನ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘವನ್ನು ಗಣ್ಯರು ಉದ್ಘಾಟಿಸಿದರು.

ಉಪನ್ಯಾಸಕ ನಂಜುಂಡಸ್ವಾಮಿ, ಕುರುಬ ಸಮಾಜದ ಹಿರಿಯ ಮುಖಂಡ ತಿಪ್ಪೇಗೌಡ, ದೊಡ್ಡಬೇಲಾಳು ಸಹಕಾರ ಸಂಘದ ಅಧ್ಯಕ್ಷ ಮಹಾದೇವ್, ತಾಪಂ ಮಾಜಿ ಸದಸ್ಯ ರಂಗಸ್ವಾಮಿ, ನಾಗೇಂದ್ರ ಮಾತನಾಡಿದರು.

ಪದಾಧಿಕಾರಿಗಳ ನೇಮಕ: ಇದೇ ವೇಳೆ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳಾಗಿ ಸ್ವಾಮಿಗೌಡ (ಗೌರವಾಧ್ಯಕ್ಷ), ಜಯಣ್ಣ (ಅಧ್ಯಕ್ಷ), ಪಾಪಣ್ಣ (ಉಪಾಧ್ಯಕ್ಷ), ಪ್ರಕಾಶ್ (ಕಾರ್ಯದರ್ಶಿ), ಪ್ರೇಮ್ ಕುಮಾರ್ (ಖಜಾಂಚಿ), ಗಂಗಾಧರ್ ಸಂಘಟನಾ ಕಾರ್ಯದರ್ಶಿ , ಮಾದೇವ್ (ಸಂಚಾಲಕ), ನಿರ್ದೇಶಕರಾಗಿ ಪರಮೇಶ್, ಅಶೋಕ, ರಮೇಶ್, ಭಲೇಂದ್ರ, ಮಲ್ಲೇಶ್, ಶಿವಕುಮಾರ್, ಮಲ್ಲೇಶ್, ಸಂತೋಷ್, ಪಾಲಾಕ್ಷ ಆಯ್ಕೆಯಾದರು.

ವೇದಿಕೆಯಲ್ಲಿ ಕನಕ ಅಭಿವೃದ್ಧಿ ಸಂಘದ ಅಧ್ಯಕ್ಷ ನಾಗೇಂದ್ರ, ಬಿಜೆಪಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ರಾಜೇಗೌಡ, ಗುತ್ತಿಗೆದಾರ ಬಲರಾಂ, ಕುರುಬ ಸಂಘದ ಕಾರ್ಯದರ್ಶಿ ಸುನೀಲ್, ಮುಖ್ಯ ಶಿಕ್ಷಕ ಶ್ರೀಧರ್, ಎಪಿಎಂಸಿ ಮಾಜಿ ಅಧ್ಯಕ್ಷ ರೇವಣ್ಣ, ತಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ, ಶಿವಕುಮಾರ್, ವಿಎಸ್‌ಎಸ್‌ಎನ್ ನಿರ್ದೇಶಕ ಲಕ್ಷ್ಮಣ್, ನಾಗರಾಜ್ ನಂದೀಶ್, ಚಿಕ್ಕೇಗೌಡ, ಪ.ತಮ್ಮಣ್ಣೇಗೌಡ, ಸ್ವಾಮಿ, ಮಾದೇಗೌಡ, ಯ.ಮಾದೇವ್, ಯ.ನಾಗಣ್ಣ, ಪ.ಸ್ವಾಮಿಗೌಡ, ರಾಮೇಗೌಡ, ಮಲ್ಲೇಗೌಡ ಗ್ರಾಪಂ ಸದಸ್ಯೆ ಯಶೋಧ, ಮಾಯಾವತಿ, ವತ್ಸಲ ಮತ್ತಿತರರಿದ್ದರು.

ಟಿಕೆಟ್ ಕೊಡಿ ಎಂದು ಕೇಳುವುದಿಲ್ಲ

ನಾನು 2004ರ ವಿಧಾನಸಭಾ ಚುನಾವಣೆಯಲ್ಲಿ 33 ಸಾವಿರಕ್ಕೂ ಹೆಚ್ಚು ಮತ ಪಡೆದು ಸೋಲು ಅನುಭವಿಸಿದೆ. ಅಲ್ಲಿಂದಿಚೇಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾರನ್ನು ಸೂಚಿಸುತ್ತಾರೋ ಅವರಿಗೆ ಮತ ಕೊಟ್ಟು ಗೆಲ್ಲಿಸಿದ್ದೇವೆ. ಆದರೆ ನನಗೆ ಟಿಕೆಟ್ ಕೊಡಿ ಎಂದು ನಾನು ಕೇಳುವುದಿಲ್ಲ. ಅದನ್ನು ಸಿದ್ದರಾಮಯ್ಯನವರು ತೀರ್ಮಾನಿಸುತ್ತಾರೆ. 49 ಸಾವಿರ ಮತದಾರರು ನಾವು ಬೇರೆಯವರಿಗೆ ಮತ ಹಾಕುತ್ತಲೇ ಬಂದಿದ್ದೇವೆ ಹೊರತು ನಮ್ಮವರನ್ನು ಶಾಸಕರನ್ನಾಗಿ ಕಂಡಿಲ್ಲ.

– ಹೆಚ್.ಡಿ.ಗಣೇಶ್, ಮೈಲಾಕ್ ಅಧ್ಯಕ್ಷ.

'ನಿಚ್ಚಂ–ಪೊಸತು', 'ಸರ್ವಕಾಲಕ್ಕೂ ಪಂಪ' ಕೃತಿಗಳ ಬಿಡುಗಡೆ



ಮೈಸೂರಿನ ವಿಜಯನಗರದ ಜಿಲ್ಲಾ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ 'ನಿಚ್ಚಂ–ಪೊಸತು' ಹಾಗೂ 'ಸರ್ವಕಾಲಕ್ಕೂ ಪಂಪ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ನಾಡೋಜ ಡಾ.ಹಂಪ ನಾಗರಾಜಯ್ಯ(ಹಂಪನಾ), ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷರೂ ಆದ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರಿದ್ದರು.

ಮೈಸೂರು, ಏ.3(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಭಾಂಗಣದಲ್ಲಿ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ನಾಡೋಜ ಡಾ.ಹಂಪ ನಾಗರಾಜಯ್ಯ(ಹಂಪನಾ) ಸಾರಸ್ವತಲೋಕ ಅನುಸಂಧಾನ ಕಾರ್ಯಕ್ರಮದಲ್ಲಿ ಸಂಪಾದಿತ 'ನಿಚ್ಚಂ–ಪೊಸತು' ಹಾಗೂ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ ರಚಿತ 'ಸರ್ವಕಾಲಕ್ಕೂ ಪಂಪ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಮಾತನಾಡಿ, ಹಂಪನಾ ವಿದ್ವತ್ ಲೋಕದಲ್ಲಿ ಅಂತರಗಂಗೆ. ಸಾಂಸ್ಕೃತಿಕವಾಗಿ ನಾಡಿನ ಕಲ್ಪವೃಕ್ಷ. ಅವರದು ಆಕರ್ಷಕ ಚಲನಶೀಲ ವ್ಯಕ್ತಿತ್ವ, 90ರ ಪ್ರಾಯದಲ್ಲೂ ಪಾದರಸದಂತಹ ಚುರುಕುತನವುಳ್ಳ ಹಂಪನಾರದು ಮಮಕಾರದ ಮಾತು ಮತ್ತು ವಿನಯವಂತಿಕೆಯುಳ್ಳ ನಡೆಯ ಅವರ ಬದುಕೇ ಒಂದು ಮಾರ್ಗದರ್ಶಿಯ ಪಠ್ಯವಾಗಿದೆ ಎಂದು ಬಣ್ಣಿಸಿದರು.

ಕನ್ನಡ ಸಾಹಿತ್ಯ ಲೋಕದಲ್ಲಿ ಕುವೆಂಪು ಅವರಿಂದ ಕನ್ನಡ ದೀಕ್ಷೆ ಪಡೆದ ಹಂಪನಾ ಅವರದ್ದು ಸದಾ ಕಲಿಯುವ ಅನ್ವೇಷಣಾ ಮನಸ್ಥಿತಿ. ವಿದ್ಯಾರ್ಥಿಯಾಗಿ ಹೊಸತನದ ಕಲಿಕೆಗೆ ತೊಡಗಿಕೊಂಡಿರುತ್ತಾರೆ. ಹಂಪನಾ ಅವರು ಕನ್ನಡ ನಾಡು ಕಂಡ ಪ್ರಮುಖ ವಿದ್ವಾಂಸರ ಸಾಲಿನಲ್ಲಿ ನಿಲ್ಲುತ್ತಾರೆ. ಭಾಷಾ ವಿಜ್ಞಾನ, ಜೈನಶಾಸ್ತ್ರ, ಹಳೆಗನ್ನಡ ಸಾಹಿತ್ಯ ಸೇರಿದಂತೆ ಹಲವು ವಿಷಯಗಳಲ್ಲಿ ಕೆಲಸ ಮಾಡಿರುವ ಅವರು ನೂರಕ್ಕೂ ಹೆಚ್ಚು ಸೃಜನಶೀಲ ಕೃತಿಗಳನ್ನು ಬರೆದಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಕೃತಿಗಳನ್ನು ಬಿಡುಗಡೆ ಮಾಡಿದ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಕೃತಿಗಳ ಕುರಿತು ಮಾತನಾಡಿದರು. ಇದಕ್ಕೂ ಮುನ್ನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಾಡೋಜ ಡಾ.ಹಂಪ ನಾಗರಾಜಯ್ಯ (ಹಂಪನಾ), ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಉಪಾಧ್ಯಕ್ಷರಾದ ಹಾ.ವೀ.ಮಂಜುಳಾ ಶಿವಾನಂದ, ಕಾರ್ಯದರ್ಶಿ ಶಾಂತಲಾ ಸುರೇಶ್ ಅವರನ್ನು ಸನ್ಮಾನಿಸಲಾಯಿತು.

ಬಳಿಕ 'ಹಂಪನಾ ಸಾಹಿತ್ಯದಲ್ಲಿ ಶಾಸನಾಧ್ಯಯನಗಳು', 'ಹಂಪನಾ ಅವರ ವಡ್ಡಾರಾಧನೆ', ಹಂಪನಾ ಅವರ ಕೃತಿಗಳಾದ ರತ್ನತ್ರಯರು', 'ಕ್ಷೇತ್ರಾಧ್ಯಯನ ಹಾಗೂ ಜೈನ ತಾತ್ವಿಕ ನೆಲೆಗಳು', 'ಹಂಪಾನಾ ಅವರ ಆಂಗ್ಲ ಕೃತಿಗಳು', 'ಹಂಪನಾ ಅವರ ಪ್ರಾಚೀನ ಕಥಾ ಸಾಹಿತ್ಯ', 'ಹಂಪನಾ ಅವರ ಭಾಷಾ ವಿಜ್ಞಾನ' ಹಾಗೂ 'ಹಂಪನಾ ಅವರ ಚಾರು ವಸಂತ' ಕುರಿತು ಗೋಷ್ಠಿಗಳು ನಡೆದವು.

ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷರೂ ಆದ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಉಷಾ ನರಸಿಂಹನ್, ಪ್ರಾಧ್ಯಾಪಕಿ ಎಂ.ಎಸ್.ಆಶಾದೇವಿ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸು.ಜಗದೀಶ್ ಮತ್ತಿತರರಿದ್ದರು.

ಜ್ಞಾನಪೀಠಕ್ಕೆ ಹಂಪನಾ ಅರ್ಹರು...

ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಬಂದಿದ್ದು, ಮುಂದಿನ ದಿನಮಾನಗಳಲ್ಲಿ ಕನ್ನಡಕ್ಕೆ ಮತ್ತೊಂದು ಜ್ಞಾನಪೀಠ ಪ್ರಶಸ್ತಿ ಲಭಿಸುವುದಾದರೆ, ಅದಕ್ಕೆ ನಾಡೋಜ ಡಾ.ಹಂಪ ನಾಗರಾಜಯ್ಯ ಅವರು ಅರ್ಹರಾಗಿದ್ದಾರೆ. ದೇಜಗೌ ಅವರನ್ನು ಬಿಟ್ಟರೆ ಅತೀ ಹೆಚ್ಚು ಅಭಿನಂದನಾ ಕೃತಿಗಳು ರಚಿತಗೊಂಡಿರುವುದು ಹಂಪನಾ ಅವರಿಗೆ. ಹಾಗೆಯೇ ಅಪಾರ ಸಾಧನೆ ಮಾಡಿ, ಸಿದ್ಧಿ ಗಳಿಸಿರುವ ಅವರು ತಮ್ಮ ಬದುಕಿಗೆ ಧನ್ಯತೆಯನ್ನು ತಂದುಕೊಂಡಿದ್ದಾರೆ.

– **ಡಾ.ಪದ್ಮಾಶೇಖರ್**, ವಿಶ್ರಾಂತ ಕುಲಪತಿ, ಸಂಸ್ಕೃತ ವಿಶ್ವವಿದ್ಯಾನಿಲಯ

ಕನ್ನಡದ ಮನೆಯಲ್ಲಿ ಕನ್ನಡಕ್ಕೆ ಶತ್ರುಗಳಿದ್ದಾರೆ...!

ಮೈಸೂರು, ಏ.3(ಎಂಕೆ)– ಅಮೃತ ಕಳಸದಂತಿದ್ದ ಕನ್ನಡದಲ್ಲಿ ಅಮೃತವೆಲ್ಲಾ ಖಾಲಿಯಾಗಿ ಕನ್ನಡ ಸಾವಿನ ಕಡೆಗೆ ಹೋಗುತ್ತಿದೆಯೇನೋ... ಸಾವಿನತ್ತ ಧಾವಿಸುತ್ತಿದೆಯೇನೋ ಅನ್ನಿಸುತ್ತಿದೆ ಎಂದು ನಾಡೋಜ ಡಾ.ಹಂಪ ನಾಗರಾಜಯ್ಯ (ಹಂಪನಾ) ಆತಂಕ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ಮೊದಲು ಕನ್ನಡ ಭಾಷೆ ಅಮೃತ ಕಳಶವಿದ್ದಂತೆ. ಎಂದಿಗೂ ಸಾವಿಲ್ಲ ಎಂದು ಹೇಳುತ್ತಿದ್ದೆ. ಆದರೀಗ ಕಳಶದಲ್ಲಿದ್ದ ಅಮೃತವೆಲ್ಲಾ ಖಾಲಿಯಾಗುತ್ತಿದೆ ಎಂದು ಭಾಸವಾಗುತ್ತಿದೆ ಎಂದು ವಿಷಾದಿಸಿದರು.

ಕನ್ನಡ ಭಾಷೆಯ ಪರಿಸ್ಥಿತಿಯನ್ನು ನೆನೆಸಿಕೊಂಡರೆ ಎಮರ್ಜೆನ್ಸಿ ವಾರ್ಡ್‌ಗೆ ಸೇರಿಸಿದಂತಿದೆ. ಮೊದಲ ತಲೆಮಾರಿನಲ್ಲಿ ಎಲ್ಲಾ ಕುಟುಂಬ ಗಳಲ್ಲಿಯೂ ಕನ್ನಡ ಓದುತ್ತಿದ್ದರು ಮತ್ತು ಬರೆಯುತ್ತಿದ್ದರು. ಮನೆಗಳಿಗೆ ಕನ್ನಡ ಪತ್ರಿಕೆಗಳನ್ನು ತರಿಸುತ್ತಿದ್ದರು. ನಂತರದ ಎರಡನೇ ತಲೆಮಾರಿನಲ್ಲಿ ಕಾಲಘಟ್ಟದಲ್ಲಿ ಇಂಗ್ಲಿಷ್ ಬಂದ ಮೇಲೆ ಮಕ್ಕಳು ಕನ್ನಡ ಮಾತನಾಡುತ್ತಾರೆ. ಆದರೆ, ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದು ತಿಳಿಸಿದರು.

ಕನ್ನಡದ ಮನೆಯಲ್ಲಿ ಕನ್ನಡಕ್ಕೆ ಶತ್ರುಗಳಿದ್ದಾರೆ. ಯಾವಾಗ ನಮ್ಮ ಕನ್ನಡ ಮಕ್ಕಳನ್ನು ಕನ್ನಡದ ಶಾಲೆಗೆ, ಕನ್ನಡದ ವಾತಾವರಣಕ್ಕೆ ಕಳುಹಿಸದೇ ದೂರ ಸರಿಸುವ ಪ್ರಯತ್ನಗಳನ್ನು ಮಾಡಿದೆವೋ ಆಗಲೇ ಕನ್ನಡದ ಶತ್ರುಗಳಾದೆವು. ತಾಯಿ–ತಂದೆಯೇ ಕನ್ನಡ ಬಿಟ್ಟು ಬೇರೆ ಭಾಷೆಯ ಕಲಿಕೆಗೆ ಕಳಿಸುತ್ತಿದ್ದಾರೆ. ಕನ್ನಡದ ಮನೆಯಲ್ಲೇ ಕನ್ನಡವನ್ನು ಹೊರಗಿನ ಭಾಷೆಯಂತೆ ಕಾಣಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಲಾರಿಗಳಲ್ಲಿ ಕರೆತರಬೇಕು: ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ನಡೆಸುವುದೇ ಕಷ್ಟ. ಮೊದಲು ಒಂದು ಕಾರ್ಯಕ್ರಮ ಎಂದರೆ ಪತ್ರಿಕಾ ಪ್ರಕಟಣೆ ನೋಡಿ ಆಹ್ವಾನಿಸದಿದ್ದರೂ ಬರುತ್ತಿದ್ದರು. ಆದರೆ ಈಗ ರಾಜಕೀಯ ಸಮಾವೇಶಗಳಿಗೆ ಜನರನ್ನು ಕರೆತರುವಂತೆ ಕನ್ನಡದ ಕಾರ್ಯಕ್ರಮಗಳಿಗೂ ಕರೆತರುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ವಿಷಾದಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ಮೈಸೂರು ಜೈಲಿನ ಕಸದ ಬುಟ್ಟಿಯಲ್ಲಿ ಮೊಬೈಲ್, ಚಾರ್ಜರ್

ಮೈಸೂರು, ಏ.3(ಜಿಎ)–ಮೈಸೂರು ಜೈಲಿನ ಶೌಚಾಲಯದ ಕಸದ ಬುಟ್ಟಿಯಲ್ಲಿ ಮೊಬೈಲ್ ಹಾಗೂ ಚಾರ್ಜರ್ ಪತ್ತೆಯಾಗಿದೆ. ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಮುಖ್ಯ ಅಧೀಕ್ಷಕರ ಆದೇಶದಂತೆ ಮಾ.31ರಂದು ರಾತ್ರಿ 10.50ಕ್ಕೆ ಸಜಾ ವಿಭಾಗದಲ್ಲಿ ಅನಿರೀಕ್ಷಿತ ತಪಾಸಣೆಯಲ್ಲಿ ಸಿಬ್ಬಂದಿಗಳು ತೊಡಗಿದ್ದಾಗ ಕೊಠಡಿ ಸಂಖ್ಯೆ ನಾಲ್ಕರ ಶೌಚಾಲಯದ ಕಸದ ಡಬ್ಬದ ಬಳಿ ಎನ್‌ಎಲ್‌ಜೆಡಿ ಭದ್ರತಾ ಉಪಕರಣದಲ್ಲಿ ತಪಾಸಣೆ ನಡೆಸಿದಾಗ ನಿಷೇಧಿತ ವಸ್ತುಗಳಾದ ಒಂದು ಮೊಬೈಲ್ ಹಾಗೂ ಚಾರ್ಜರ್ ಪತ್ತೆಯಾಗಿದೆ.

ನಂತರ ಸಿಬ್ಬಂದಿಗಳು ನಿಷೇದಿತ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡು ಕರ್ನಾಟಕ ಕಾರಾಗೃಹ ನಿಯಮ ಅಡಿಯಲ್ಲಿ ಪ್ರಕರಣ ದಾಖಲಿದ್ದಾರೆ. ಮಂಡಿ ಪೊಲೀಸ್ ಠಾಣೆಗೆ ಪ್ರಕರಣವನ್ನು ವರ್ಗಾಯಿಸಿದ್ದಾರೆ.

ನಿವೇಶನ ಕೊಡಿಸುವುದಾಗಿ ನಂಬಿಸಿ ಮಹಿಳೆಗೆ 28.95 ಲಕ್ಷ ರೂ ವಂಚಿಸಿದ ಸೊಸೈಟಿ

ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಏ.3(ಜಿಎ)–ವಸತಿ ನಿವೇಶನ ಕೊಡಿಸುತ್ತೇವೆಂದು ಮಹಿಳೆಗೆ 28.95 ಲಕ್ಷ ರೂ ವಂಚಿಸಿರುವ ಸೊಸೈಟಿ ವಿರುದ್ಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸೋಮನಾಥ ನಗರದ 47 ವರ್ಷದ ಮಹಿಳೆಗೆ ಸೊಸೈಟಿಯೊಂದು ಮೈಸೂರು ತಾಲೂಕು ವರುಣಾ ಹೋಬಳಿಯ ವರಕೂಡು ಗ್ರಾಮದಲ್ಲಿ ವಸತಿ ನಿವೇಶನ ಹಂಚಿಕೆ ಮಾಡುತ್ತಿದ್ದೇವೆ. ರೇರಾ ಅನುಮತಿ ಪಡೆದಿದ್ದೇವೆ ಹಾಗೇ ಜಿಎಸ್‌ಟಿ ನೋಂದಣಿ ಮಾಡಿಸಿದ್ದು, ಸಾರ್ವಜನಿಕ ರಿಂದ ಹಣ ಸಂಗ್ರಹಿಸುವ ಅಧಿಕಾರವಿದೆ. ಜೊತೆಗೆ ಮತ್ತೊಂದು ಬಿಲ್ಡರ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ ಎಂದು ನಂಬಿಸಿದ್ದಾರೆ.

ಸೊಸೈಟಿ ಅವರ ಮಾತಿಗೆ ಮರುಳಾದ ಮಹಿಳೆ 2024ರ ಜುಲೈ 1ರಂದು 15.45 ಲಕ್ಷ ರೂ. ಹಣವನ್ನು ಕಟ್ಟಿ ರಸೀದಿ ಪಡೆದುಕೊಂಡಿದ್ದಾರೆ. ಹೀಗೆ ಹಂತ ಹಂತವಾಗಿ ಬರೋಬ್ಬರಿ 28.95 ಲಕ್ಷ ರೂ ಹಣ ಪಾವತಿ ಮಾಡಿದ್ದಾರೆ.

ನಂತರದ ದಿನಗಳಲ್ಲಿ ಸೊಸೈಟಿ ಅವರು ಯಾವುದೇ ವಸತಿ ನಿವೇಶನವನ್ನು ನೋಂದಣಿ ಮಾಡಿಕೊಟ್ಟಿಲ್ಲ ಎಂದು ಮಹಿಳೆ ಸೊಸೈಟಿ ಅವರನ್ನು ಪ್ರಶ್ನಿಸಿದಾಗ ಮಾರಾಟ ಒಪ್ಪಂದ ಮಾಡಿಕೊಡುತ್ತೇವೆಂದು ಕಾಲಹರಣ ಮಾಡಿಕೊಂಡು ಬಂದಿದ್ದಾರೆ.

ಇವರ ಈ ನಡವಳಿಕೆಯಿಂದ ಅನುಮಾನಗೊಂಡ ಮಹಿಳೆಯೇ ನೇರವಾಗಿ ರೇರಾ ಕಚೇರಿಗೆ ಭೇಟಿ ನೀಡಿ ವಿಚಾರಿಸಿದಾಗ ಸದರಿ ಸೊಸೈಟಿಯು ರೇರಾ ಕಾಯ್ದೆಯಡಿ ನೋಂದಾಯಿತವಾಗಿಲ್ಲ ಹಾಗೂ ಸಂಸ್ಥೆಗೆ ವಸತಿ ನಿವೇಶನ ಅಭಿವೃದ್ಧಿಪಡಿಸಲು ಯಾವುದೇ ಅಧಿಕಾರವಿಲ್ಲ ಎಂದು ತಿಳಿದು ಬಂದಿದೆ. ಹಣ ಸ್ವೀಕರಿಸಿ ಯಾವುದೇ ನಿವೇಶನ ಹಂಚಿಕೆ ಮಾಡದೇ ಮೋಸ ಮಾಡಿದ ಸೊಸೈಟಿ ಅಧ್ಯಕ್ಷ, ಉಪಾಧ್ಯಕ್ಷ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳ ವಿರುದ್ಧ ಮಹಿಳೆ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಅಭಿನಂದನಾ ಸಮಾರಂಭ



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮುಖ್ಯ ಶಿಕ್ಷಕಿ ಪಿ.ಎನ್. ವೀಣಾ, ಸಾಹಿತಿ ಹಾಗೂ ಶಿಕ್ಷಕ ಟಿ. ಸತೀಶ್ ಜವರೇಗೌಡ, ಸಂಗೀತ ಶಿಕ್ಷಕಿ ಆರ್.ಹೆಚ್. ಶ್ರೀದೇವಿ ಮತ್ತಿತರರು ಉಪಸ್ಥಿತರಿದ್ದರು.

ಕುವೈತ್‌ನ ತೈಲ ಸಂಸ್ಕರಣಾಗಾರದ ಮೇಲೆ ಇರಾನ್ ಮತ್ತೆ ಡ್ರೋನ್ ದಾಳಿ!

ಕುವೈತ್: ಕುವೈತ್ ನ ಮಿನಾ ಅಲ್–ಅಹ್ಮದಿ ತೈಲ ಸಂಸ್ಕರಣಾಗಾರದ ಮೇಲೆ ಇರಾನಿನ ಡ್ರೋನ್ ಗಳು ಶುಕ್ರವಾರ ಮತ್ತೆ ದಾಳಿ ನಡೆಸಿದ್ದು, ಹಲವಾರು ಘಟಕಗಳು ಬೆಂಕಿ ಹೊತ್ತಿಕೊಂಡು ಉರಿಯುತ್ತಿರುವುದಾಗಿ ವರದಿಯಾಗಿದೆ. ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ ಘಟನೆಯನ್ನು ದೃಢಪಡಿಸಿದ್ದು, ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕ ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ. ಆದರೆ ದಾಳಿಯಿಂದಾದ ಯಾವುದೇ ಹಾನಿ ಕುರಿತ ಮಾಹಿತಿಯನ್ನು ಕುವೈತ್ ಹಂಚಿಕೊಂಡಿಲ್ಲ.



ಮಿನಾ ಅಲ್–ಅಹ್ಮದಿ ದಿನಕ್ಕೆ ಸುಮಾರು 7,30,000 ಬ್ಯಾರೆಲ್ ತೈಲವನ್ನು ಸಂಸ್ಕರಿಸಬಲ್ಲ ಸಾಮರ್ಥ್ಯ ಹೊಂದಿದೆ. ಪರ್ಷಿಯನ್ ಕೊಲ್ಲಿಯ ಸಣ್ಣ, ತೈಲ ಸಮೃದ್ಧ ರಾಷ್ಟ್ರವಾದ ಕುವೈತ್ ನಲ್ಲಿ ಮಿನಾ ಅಲ್–ಅಹ್ಮದಿ ಸೇರಿದಂತೆ ಮೂರು ತೈಲ ಸಂಸ್ಕರಣಾಗಾರಗಳಿವೆ. ದೇಶದ ತೈಲ ಉತ್ಪಾದನೆಯಲ್ಲಿ ಈ ಸಂಸ್ಕರಣಾಗಾರಗಳು ಪ್ರಮುಖವಾಗಿವೆ. ಇವುಗಳಿಲ್ಲದಿದ್ದರೆ ಸಂಸ್ಕರಣಾ ಸಾಮರ್ಥ್ಯದ ಕೊರತೆಯಿಂದಾಗಿ ತೈಲ ಬಾವಿಗಳನ್ನು ಮುಚ್ಚಬೇಕಾದ ಸಂದರ್ಭ ಎದುರಾಗಹುದು. ಸುರಕ್ಷತಾ ಕಾರಣಗಳಿಗಾಗಿ ಸಂಸ್ಕರಣಾಗಾರಗಳ ಕಾರ್ಯಾಚರಣೆಗಳನ್ನು ಮರುಪ್ರಾರಂಭಿಸುವುದು ಸುದೀರ್ಘ ಮತ್ತು ಸಂಕೀರ್ಣ ಪ್ರಕ್ರಿಯೆಯಾಗಿರುತ್ತದೆ. ಅಂದರೆ ಕಾರ್ಯಾಚರಣೆ ಪುನರಾರಂಭಗೊಳ್ಳುವವರೆಗೆ ತೈಲ ಬಾವಿಗಳು ನಿಷ್ಕ್ರಿಯವಾಗಿರುತ್ತವೆ.

ಸಿದ್ದರಾಮಯ್ಯರದ್ದು ಈಗ ಬರೀ ಸ್ವಾರ್ಥ ಸಾಧನೆ

- ಕೇಂದ್ರ ಸಚಿವ ವಿ. ಸೋಮಣ್ಣ ವಾಗ್ದಾಳಿ
- ಆಡಳಿತ ಪಕ್ಷದ ಶಾಸಕರೇ ನೈತಿಕತೆ ಕಳೆದುಕೊಂಡಿದ್ದಾರೆ

ಬೆಂಗಳೂರು, ಏ.3(ಕೆಎಂಶಿ)– ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅಧಿಕಾರವನ್ನು ಸ್ವಾರ್ಥಕ್ಕೋಸ್ಕರ, ಜನರನ್ನು ವಂಚಿಸಲು ಬಳಸಿ ರಾಜ್ಯವನ್ನು ಕತ್ತಲೆಯಲ್ಲಿ ಇಟ್ಟಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಇಂದಿಲ್ಲಿ ಆರೋಪಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿಯಲ್ಲಿ ಬಿಜೆಪಿ ಪಾಲುದಾರಿಕೆ ಇದೆ, ಒಳ್ಳೆಯ ಕೆಲಸ ಮಾಡಿದ್ದೇನೆ ಎಂಬುದಾಗಿ ಹೇಳುವ ನೈತಿಕತೆ ವಿರೋಧ ಪಕ್ಷದವರಷ್ಟೇ ಅಲ್ಲ, ಆಡಳಿತ ಪಕ್ಷದ ಶಾಸಕರೂ ಕಳೆದುಕೊಂಡಿದ್ದಾರೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಿತಿಮೀರಿದೆ. ಎಚ್ಚೆತ್ತುಕೊಳ್ಳದ ನಿರ್ಲಿಪ್ತ ಸರ್ಕಾರ ಇದಾಗಿದೆ ಎಂದರು.

ಮೂಲಭೂತಸೌಕರ್ಯದತ್ತ ಗಮನ ಕೊಡದೇ ಇಡೀ ಸಚಿವ ಸಂಪುಟ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ.

ಈ ಸರ್ಕಾರದ ಮೊಂಡುತನ, ಭ್ರಷ್ಟಾಚಾರದ ವಿರುದ್ಧ ನ್ಯಾಯ ತೀರ್ಮಾನ ಮಾಡಲು ಮತದಾರರಿಗೆ ಉಪಚುನಾವಣೆ ಅವಕಾಶ ಕಲ್ಪಿಸಿದೆ. ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಘೋಷಿಸಿದರೂ, ರಾಜ್ಯ ಸರ್ಕಾರ ಸ್ಪಂದಿಸದೇ ಮೂರು ವರ್ಷದಲ್ಲಿ 2,809 ರೈತರು ಸಾವನ್ನಪ್ಪಿದ್ದಾರೆ.

ವಿವಿಧ ಇಲಾಖೆಗಳಲ್ಲಿ ಸುಮಾರು 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಉತ್ತರ ಕರ್ನಾಟಕದಲ್ಲಿ ನೆರೆ ಸಂತ್ರಸ್ತರಿಗೆ ಒಂದು ರೂ. ಸಹ ಬಿಡುಗಡೆ ಮಾಡಿಲ್ಲ. ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ.

ಒಂದು ಸಮಾಜವನ್ನು ಇನ್ನೊಂದು ಸಮಾಜದ ವಿರುದ್ಧ ಎತ್ತಿಕಟ್ಟುವ ದೊಡ್ಡಸ್ಥಿಕೆಯನ್ನು ಸರ್ಕಾರ ಮಾಡುವ ಮೂಲಕ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡಿದೆ.

ಜಲಜೀವನ್ ಮಿಷನ್ ಯೋಜನೆಯಡಿ 28 ಸಾವಿರ ಕೋಟಿ ರೂ. ತೇವಣಿ ಇಟ್ಟಿದ್ದೇವೆ. ರಾಜ್ಯ ಸರ್ಕಾರ ಬಳಕೆ ಸರ್ಟಿಫಿಕೇಟ್ ನೀಡಿ ಹಣ ಪಡೆಯಬಹುದಾಗಿದೆ. ಇದುವರೆಗೆ ಕೇವಲ 11 ಸಾವಿರ ಕೋಟಿ ರೂ. ಮಾತ್ರ ಪಡೆದಿದೆ.

ಕಾಂಗ್ರೆಸ್‌ನವರು ಅನವಶ್ಯಕ ಟೀಕೆ ಮಾಡುವುದರಲ್ಲಿ ನಿಸ್ಸೀಮರು. ಮನರೇಗಾ ಹೆಸರಿನಲ್ಲಿ 41 ಲಕ್ಷ ಬೋಗಸ್ ಕಾರ್ಡ್ ಇಟ್ಟುಕೊಂಡು, ಜೆಸಿಬಿ ಮೂಲಕ ಕೆಲಸ ಮಾಡಿ ಯಾರದೋ ಹೆಸರಿನಲ್ಲಿ ಹಣ ಪಡೆಯಲಾಗುತ್ತಿತ್ತು.

ಪ್ರಧಾನಿ ನರೇಂದ್ರ ಮೋದಿ ದೇಶದ ಸರ್ವಾಂಗೀಣ ಅಭಿವೃದ್ಧಿ ಮತ್ತು ಹಳ್ಳಿಗಾಡಿನ ಜನರ ಜೀವನಮಟ್ಟ ಸುಧಾರಣೆಗೆ 88 ಸಾವಿರ ಕೋಟಿ ರೂ. ಬದಲಿಗೆ 97,000 ಕೋಟಿ ರೂ. ಮೀಸಲಿಟ್ಟಿದ್ದಾರೆ. ಜಿ–ರಾಮ್–ಜಿ ಮೂಲಕ ವಿಕಸಿತ ಭಾರತದ ಪರಿಕಲ್ಪನೆ ಮುಂದಿಟ್ಟಿದ್ದಾರೆ. ರಾಜ್ಯದಲ್ಲಿ ಕೆಟ್ಟ, ನಿರ್ಲಿಪ್ತ ಸರ್ಕಾರ ಇದ್ದು, ಅನೇಕ ಯೋಜನೆಗಳು ನೆನೆಗುದಿಗೆ ಬಿದ್ದಿವೆ ಎಂದರು.

ಆಶೀರ್ವಾದ



ಶ್ರವಣಬೆಳಗೊಳದ ಜೈನ ತೀರ್ಥಂಕರ ರಥೋತ್ಸವದಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪಾಲ್ಗೊಂಡು ಚಾರು ಕೀರ್ತಿ ಪಂಡಿತಾಚಾರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಮಹಾಸ್ವಾಮಿಗಳು ನಮ್ಮ ಮಠದ ಶೈಕ್ಷಣಿಕ ಸಂಸ್ಥೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಆಗಬೇಕಾಗಿರುವ ಕೆಲಸ ಕಾರ್ಯಗಳಿಗೆ ಸಹಕರಿಸುವಂತೆ ಶಾಸಕರಿಗೆ ತಿಳಿಸಿದರು. ಇದಕ್ಕೆ ಶಾಸಕರು ಸಕಾರಾತ್ಮಕವಾಗಿ ಸ್ಪಂದಿಸಿ ಸಹಕಾರ ನೀಡುವುದಾಗಿ ಸ್ವಾಮೀಜಿಯವರಿಗೆ ತಿಳಿಸಿದರು.

ಅರ್ಜಿ ಆಹ್ವಾನ

ಮೈಸೂರು, ಏ.3– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವತಿಯಿಂದ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಲಯ ಕಛೇರಿ–01 ಮತ್ತು ವಲಯ ಕಛೇರಿ–04, ಕಛೇರಿ–05, ಕಛೇರಿ–07 ಮತ್ತು ಕಛೇರಿ–08ರಲ್ಲಿ ಖಾಲಿಯಿರುವ ನಗರ ಪುನರ್ವಸತಿ ಕಾರ್ಯಕರ್ತರ ನೇಮಕಾತಿ ಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವ 18 ರಿಂದ 45 ವರ್ಷದ ಪುರುಷ, ಮಹಿಳಾ ವಿಕಲಚೇತನರಿಗೆ ಮಾತ್ರ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2490333 ಸಂಪರ್ಕಿಸುವುದು.

ನೀರಿನ ದರ ಏರಿಕೆ ಖಂಡಿಸಿ ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರು ಕನ್ನಡ ವೇದಿಕೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.3(ಎಂಕೆ)– ಮೈಸೂರು ನಗರಪಾಲಿಕೆಯು ನೀರಿನ ದರ ಹಾಗೂ ಒಳಚರಂಡಿ ಶುಲ್ಕ ಏರಿಕೆ ಮಾಡಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರಪಾಲಿಕೆ ಕೇಂದ್ರ ಕಚೇರಿ ಎದುರು ಜಮಾಯಿಸಿದ ವೇದಿಕೆ ಕಾರ್ಯಕರ್ತರು, ಪಾಲಿಕೆ ವಿರುದ್ಧ ದಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ತೆರಿಗೆ ನೀತಿಗೆ ನಗರ ಪಾಲಿಕೆ ಪೈಪೋಟಿ ನೀಡುವಂತೆ ಕುಡಿಯುವ ನೀರು ಮತ್ತು ಒಳಚರಂಡಿ ಶುಲ್ಕ ಏರಿಕೆ ಮಾಡಿದೆ ಎಂದು ಕಿಡಿಕಾರಿದರು.

ಈಗಾಗಲೇ ಬೆಲೆ ಏರಿಕೆಯಿಂದ ರಾಜ್ಯದ ಜನತೆ ತತ್ತರಿಸಿದ್ದು, ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಮೈಸೂರು ನಗರ ಪಾಲಿಕೆ ಶುಲ್ಕ ಹೆಚ್ಚಳ ಮಾಡಿದೆ. ಪಾಲಿಕೆ ಚುನಾಯಿತ ಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಏಕಾಏಕಿ ದರ ಏರಿಕೆ ಮಾಡಿರುವುದು ಖಂಡನೀಯ. ಜನರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ನಗರ ಪಾಲಿಕೆ ಸಂಪೂರ್ಣ ವಿಫಲವಾಗಿದ್ದರೂ ದರ ಏರಿಕೆ ಮಾಡಿರುವುದು ಸರಿಯಲ್ಲ. ಕೂಡಲೇ ದರ ಏರಿಕೆ ನಿರ್ಧಾರವನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಚಾಮರಾಜು ಮಂಡಕಳ್ಳಿ, ಹರೀಶ್, ಚಿನ್ನಪ್ಪ, ಶಿವುಗೌಡ, ಮಾದಪ್ಪ, ಸುನೀಲ್, ಗೋಪಿ, ಗೈಡ್ ಸ್ವಾಮಿ, ಬೀಡಾ ಬಾಬು, ಗೋವಿಂದರಾಜು, ರಮೇಶ್, ಸಿದ್ದಪ್ಪ, ಎಲ್ಐಸಿ, ಹೊನಕೆರೆ ಸ್ವಾಮಿ, ನಾಗರಾಜು, ರೈತ ಪರ್ವ ಅಧ್ಯಕ್ಷ ಅರುಣ್ ಕುಮಾರ್ ಮತ್ತಿತರರಿದ್ದರು.

ಚಿಣ್ಣರ ಮೇಳ–2026; ಮಕ್ಕಳ ರಂಗ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.3– ಮೈಸೂರಿನ ರಂಗಾಯಣದ ವತಿಯಿಂದ 22 ನೇ ವರ್ಷದ ಚಿಣ್ಣರ ಮೇಳ–2026, ಮಕ್ಕಳ ರಂಗ ತರಬೇತಿ ಶಿಬಿರವನ್ನು ಏ.14 ರಿಂದ ಮೇ.10 ರವರೆಗೆ ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಕಲಾ ಮಂದಿರದ ಆವರಣದ ರಂಗಾ ಯಣದಲ್ಲಿ ಆಯೋಜಿಸಲಾಗಿದೆ.

7 ವರ್ಷ ತುಂಬಿದ ಹಾಗೂ 15 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಶಿಬಿರಕ್ಕೆ ಪ್ರವೇಶ ಇರಲಿದ್ದು, ಏ.5 ರಂದು ಬೆಳಗ್ಗೆ 10 ಗಂಟೆಗೆ ರಂಗಾಯಣದ ಕಚೇರಿಯಲ್ಲಿ ಅರ್ಜಿ ವಿತರಿಸಲಾಗುತ್ತದೆ. ಅರ್ಜಿ ಶುಲ್ಕ ನೂರು ರೂಪಾಯಿ, 250 ಅರ್ಜಿಗಳನ್ನ ಮಾತ್ರ ನೀಡಲಾಗುತ್ತಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಏ.9ರ ಸಂಜೆ 5 ಗಂಟೆಯೊಳಗೆ ರಂಗಾಯಣದ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು.

ಚಿಣ್ಣರ ಮೇಳದ ಪ್ರವೇಶ ಶುಲ್ಕ ಪ್ರತಿ ಮಗುವಿಗೆ 4000 ರೂ. ನಿಗದಿಪಡಿಸಿದ್ದು, ಈ ಮೊತ್ತವನ್ನು ಉಪ ನಿರ್ದೇಶಕರು, ರಂಗಾಯಣ ಮೈಸೂರು ಇವರ ಹೆಸರಿಗೆ ಡಿಡಿ ತೆಗೆದು ಅರ್ಜಿ ಜೊತೆ ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ: 0821–2512639, 2512629, ಇ–ಮೇಲ್–rangayanamysore@gmail.com, ವೆಬ್‌ಸೈಟ್– rangayana mysore. karnataka.gov.in ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮುಂದಿನ ತಿಂಗಳು ರೇಷ್ಮೆ ಮಾರುಕಟ್ಟೆ ಕಾಮಗಾರಿ ಆರಂಭ

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಅಧ್ಯಕ್ಷತೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ರೇಷ್ಮೆ ಇಲಾಖೆ ಉಪನಿರ್ದೇಶಕ ನಾಗೇಂದ್ರಪ್ಪ ಮಾಹಿತಿ

ಮೈಸೂರು,ಏ.3(ಎಂಟಿವೈ)– ಮೈಸೂರಿನ ಬಂಡೀಪಾಳ್ಯದ ಎಪಿಎಂಸಿ ಆವರಣದಲ್ಲಿ ನೂತನವಾಗಿ ರೇಷ್ಮೆಗೂಡು ಮಾರುಕಟ್ಟೆ ನಿರ್ಮಿಸಲು 2.18 ಎಕರೆ ಭೂಮಿ ಮಂಜೂರಾಗಿದ್ದು, ಮೇ ತಿಂಗಳಲ್ಲಿ ಮಾರುಕಟ್ಟೆ ನಿರ್ಮಾಣ ಕಾರ್ಯವನ್ನು ಆರಂಭಿಸಲಾಗುವುದು ಎಂದು ರೇಷ್ಮೆ ಇಲಾಖೆ ಉಪ ನಿರ್ದೇಶಕ ಎಚ್.ಸಿ.ನಾಗೇಂದ್ರಪ್ಪ ತಿಳಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆಗೆ ಸಂಬಂಧಿಸಿದ ಮಾಹಿತಿ ನೀಡಿದ ನಾಗೇಂದ್ರಪ್ಪ, ಮಾರುಕಟ್ಟೆ ನಿರ್ಮಾಣಕ್ಕೆ ಈಗಾಗಲೇ ಡಿಪಿಆರ್ ಸಿದ್ಧಪಡಿಸಿ, ಕೇಂದ್ರ ಕಚೇರಿಯಿಂದ ಅನುಮೋದನೆ ಪಡೆಯಲಾಗಿದೆ. ಸದ್ಯ ಬಂಡೀಪಾಳ್ಯದಲ್ಲಿರುವ ಮಾರುಕಟ್ಟೆಯನ್ನು ನೂತನ ಮಾರುಕಟ್ಟೆಗೆ ಸ್ಥಳಾಂತರಿಸಲಾಗುವುದು. ಮೈಸೂರಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆಗೆ ಪ್ರತಿದಿನ 20ರಿಂದ 25 ಲಾಟ್ ಗೂಡು ಬರುತ್ತಿದೆ. ನೂತನ ಮಾರುಕಟ್ಟೆಯಲ್ಲಿ 60 ಲಾಟ್ ಇಡುವಷ್ಟು ಜಾಗ ದೊರೆಯಲಿದೆ ಎಂದರು.

ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ, ಬಿತ್ತನೆ ಬೀಜ ವಿತರಣೆ: ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಶೇ.94.8ರಷ್ಟು ಮಳೆಯಾಗಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಕಡಿಮೆಯಾಗಿದ್ದರಿಂದ ರಾಗಿ ಬಿತ್ತನೆ ಪ್ರಮಾಣ ಕ್ಷೀಣಿಸಿತ್ತು. ನಂತರ, ಹಿಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದ್ದರಿಂದ 26 ಸಾವಿರ ಎಕರೆ ಭೂಮಿಯಲ್ಲಿ ರಾಗಿ ಬಿತ್ತನೆ ಮಾಡಲಾಗಿತ್ತು. ಸದ್ಯ ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜದ ಕೊರತೆ ಇಲ್ಲ. ಕೃಷಿ ಯಂತ್ರೋಪಕರಣಗಳಿಗೆ ರೈತರಿಂದ ಬೇಡಿಕೆ ಬರುತ್ತಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.



ಸೆಲ್ವಕುಮಾರ್

ಗಣತಿಯಿಂದ ವಿನಾಯಿತಿ ಕೊಡಿ: ಜಿಲ್ಲೆಯಲ್ಲಿ ಏ.23ರಿಂದ ಜಾನುವಾರುಗಳಿಗೆ ಕಾಲುಬಾಯಿ ಜ್ವರದ ಲಸಿಕೆ ಅಭಿಯಾನ ಆರಂಭವಾಗುವ ಕಾರಣ ಮನೆ ಗಣತಿ ಪ್ರಕ್ರಿಯೆಯಿಂದ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗೆ ವಿನಾಯಿತಿ ಕೊಡಿಸುವಂತೆ ಪಶುಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ಸಿ.ನಾಗರಾಜು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಜನಗಣತಿಗೆ ಇನ್ನೂ 400 ಸಿಬ್ಬಂದಿ ಕೊರತೆ ಇದೆ. ಮುಂದೆ ಎಲ್ಲಾ ಗಣತಿದಾರರ ಪಟ್ಟಿ ಅಂತಿಮವಾದ ಬಳಿಕ ಸಾಧ್ಯವಾದರೆ ವಿನಾಯಿತಿ ಬಗ್ಗೆ ಪರಿಶೀಲಿಸಲಾಗುವುದು ಎಂದರು.

755 ಹಳ್ಳಿ ಘೋಷಣೆ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಮಾತನಾಡಿ, ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ 1,890 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ 1,722 ಕಾಮಗಾರಿ ಪೂರ್ಣವಾಗಿದ್ದು, 197 ಪ್ರಗತಿಯಲ್ಲಿವೆ. ಹರ್‌ಘರ್ ಕಾರ್ಯಕ್ರಮದಡಿ 1,128 ಹಳ್ಳಿಗಳಲ್ಲಿ 755 ಹಳ್ಳಿಗಳನ್ನು ಘೋಷಣೆ (ಡಿಕ್ಲೇರ್ಡ್) ಮಾಡಲಾಗಿದೆ. ಉಳಿದ ಹಳ್ಳಿಗಳನ್ನೂ ಹಂತಹಂತವಾಗಿ ಘೋಷಿಸಲಾಗುವುದು ಎಂದು ತಿಳಿಸಿದರು.

ಸಾಂಕ್ರಾಮಿಕ ರೋಗ ತಡೆಗೆ ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮಾತನಾಡಿ, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಸಾಂಕ್ರಾಮಿಕ ರೋಗಗಳ ತಡೆಗೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ಸಿಬ್ಬಂದಿ ಎಲ್ಲೆಡೆ ಜಾಗೃತಿ ಮೂಡಿಸುವುದರೊಂದಿಗೆ ಜನರ ಆರೋಗ್ಯ ರಕ್ಷಣೆ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಜಿಲ್ಲೆಯಲ್ಲಿ ತಾಯಿ ಹಾಗೂ ಶಿಶು ಮರಣ ಪ್ರಮಾಣ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಕೆ.ಬಿ. ಪ್ರಭುಸ್ವಾಮಿ, ಉಪ ಕಾರ್ಯದರ್ಶಿ ಸವಿತಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಮನ್ವಯಾಧಿಕಾರಿ ಎಂ.ಕೆ.ಮಲ್ಲೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ವಿ.ಪ್ರಿಯದರ್ಶಿನಿ, ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಶಿವಕುಮಾರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರ ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

ಉಪವಿಭಾಗಾಧಿಕಾರಿ ಚೆಕ್ ಕದ್ದು ನಕಲಿ ಸಹಿ ಮೂಲಕ ನಾಲ್ಕು ಲಕ್ಷ ವಂಚನೆ

ಇಬ್ಬರಿಗೆ ಒಂದೂವರೆ ವರ್ಷ ಜೈಲು ಶಿಕ್ಷೆ

ಮೈಸೂರು, ಏ.3(ಎಂಕೆ)– ಉಪ ವಿಭಾಗಾಧಿಕಾರಿಯ ಸರ್ಕಾರಿ ಚೆಕ್ ಕದ್ದು, ಸಹಿ ಮಾಡಿ ಸರ್ಕಾರಕ್ಕೆ 4 ಲಕ್ಷ ರೂ. ವಂಚಿಸಿದ್ದ ಇಬ್ಬರು ಆರೋಪಿಗಳಿಗೆ 1 ವರ್ಷ 6 ತಿಂಗಳು ಕಠಿಣ ಶಿಕ್ಷೆ ಹಾಗೂ 30 ಸಾವಿರ ದಂಡ ವಿಧಿಸಿ ಮೈಸೂರು 1ನೇ ಅಧಿಕ ಸಿಜೆಎಂ ನ್ಯಾಯಾಲಯ ಆದೇಶಿಸಿದೆ.

ಮೈಸೂರಿನ ಜನತಾನಗರ ನಿವಾಸಿಗಳಾದ ಸಿ.ವೆಂಕಟೇಶ್(63) ಹಾಗೂ ಜಯಲಕ್ಷ್ಮಿ(68) ಶಿಕ್ಷೆಗೆ ಗುರಿಯಾದವರು. ಮೈಸೂರು ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಡಿ ಗ್ರೂಪ್ ನೌಕರನಾಗಿದ್ದ ಆರೋಪಿ ಸಿ.ವೆಂಕಟೇಶ್, ಸರ್ಕಾರಿ ಚೆಕ್ (ಚೆಕ್ ನಂ.061283)ಅನ್ನು ಕದ್ದು ಆರೋಪಿ ಜಯಲಕ್ಷ್ಮಿ ಹೆಸರಿಗೆ 4 ಲಕ್ಷ ರೂ.ಬರೆದು ಉಪ ವಿಭಾಗಾಧಿಕಾರಿಯ ಸಹಿ ಜಾಗದಲ್ಲಿ ತನ್ನ ಸಹಿ ಮಾಡಿ ನೀಡಿದ್ದಾನೆ.

ಉಪ ವಿಭಾಗಾಧಿಕಾರಿಯ ಅಸಲಿ ಸಹಿ ಎಂದು ಬಿಂಬಿಸಿದ ಆರೋಪಿಗಳಿಬ್ಬರು, ಉಪ ವಿಭಾಗಾಧಿಕಾರಿಗಳ ಉಳಿತಾಯ ಖಾತೆಯಿಂದ 4 ಲಕ್ಷ ರೂ.ಗಳನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡು ಸರ್ಕಾರಕ್ಕೆ ಮೋಸ ಮಾಡಿ ವಂಚಿಸಿದ್ದಾರೆ.

ಈ ಸಂಬಂಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಲಕ್ಷ್ಮಿಪುರಂ ಪೊಲೀಸ್ ಠಾಣೆ ಪಿಎಸ್ಐ ಪ್ರಭುದೇವ್, ತನಿಖೆ ನಡೆಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರು 1ನೇ ಅಧಿಕ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ಎ.ಜಿ.ಶಿಲ್ಪ, ಆರೋಪಿಗಳಿಬ್ಬರಿಗೆ ಭಾರತೀಯ ದಂಡ ಸಂಹಿತೆ 379, 420, 471 ಕಲಂ ಅಡಿಯಲ್ಲಿ 1 ವರ್ಷ 6 ತಿಂಗಳು ಕಠಿಣ ಕಾರಾಗೃಹ ಶಿಕ್ಷೆ ಹಾಗೂ 30 ಸಾವಿರ ರೂ.ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ಕೆ.ಪ್ರಕಾಶ ವಾದ ಮಂಡಿಸಿದ್ದರು.

ಏ.14, ಮೈಸೂರಲ್ಲಿ ಅಭಿನಂದನಾ ಸಮಾರಂಭ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ಏ.14ರಂದು ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮ ಜಯಂತಿ ಕಾರ್ಯಕ್ರಮದ ಅಂಗವಾಗಿ ಮೈಸೂರು ವಿವಿ ಅಧೀನಕ್ಕೊಳಪಡುವ ವಿಭಾಗಗಳು, ಕಾಲೇಜುಗಳಲ್ಲಿ ಪಿಹೆಚ್.ಡಿ ಪದವಿ ಪಡೆದ ಸಂಶೋಧಕರು, ಸ್ನಾತಕ–ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. 2025–26ನೇ ಪ್ರಥಮ ರ್‍ಯಾಂಕ್ ಪಡೆದಿರುವ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳು ಪಿಹೆಚ್.ಡಿ ಅಧಿಸೂಚನೆ, ಸ್ನಾತಕ/ಸ್ನಾತಕೋತ್ತರ ಪದವಿಯ ರ್‍ಯಾಂಕ್ ಪ್ರಮಾಣ ಪತ್ರ ಹಾಗೂ ಜಾತಿ ಪ್ರಮಾಣ ಪತ್ರಗಳೊಂದಿಗೆ ಏ.13ರರೊಳಗೆ ಉಪ ಕುಲಸಚಿವರು, ಎಸ್‌ಸಿ ಮತ್ತು ಎಸ್‌ಟಿವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನದ ಕಟ್ಟಡ, ಮೈಸೂರು ಇಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದು ಎಂದು ಉಪಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2ನೇ ವರ್ಷದ ವಿವಾಹ ಮಹೋತ್ಸವದ ಶುಭಾಶಯಗಳು



ಪದ್ಮಾವತಿ .K ಮತ್ತು ಮಹೇಂದ್ರ .C.S

ಶುಭಕೋರುವವರು: ತಂದೆ.ತಾಯಿ– ಕಮಲ ಕಾಂತರಾಜು, ಕಾಂತಮ್ಮ, ಸಿದ್ದರಾಜು ಚೌಹಳ್ಳಿ T.N. ಪುರ, C.S ನವೀನ, ಸುಕನ್ಯ C.S, ಕಿರಣ್, ಪ್ರಿಯಾಂಕ, ಸಣ್ಣಮ್ಮ ಅಜ್ಜಿ, ಪ್ರಶಾಂತ್, ಅನಿತಾ ವಿ, ರಾಜೇಶ, ಲಕ್ಷ್ಮೀ ಕೆ, ರಮೇಶ .C, ಪೂಜಾ ಕೆ, ಮನು, ಪ್ರಮೀಳಾ ಪ್ರಭಾಕರ C, ರತ್ನ ಗೋವಿಂದರಾಜು ಸ್ವಾತಿ.ಕೆ, ಚಂದ್ರಕಲಾ .ಕೆ ಹೊರಳವಾಡಿ ನಂಜಮ್ಮ, ಮರಮ್ಮ ಕುಟುಂಬವರ್ಗದವರು

20ನೇ ವರ್ಷದ ಸವಿನೆನಪು



ದಿ|| ಶ್ರೀಮತಿ ಮಂಜುಳ

ನಿಧನ: 04–04–2006 ಮಂಗಳವಾರ

ನೀವು ನಮ್ಮನ್ನಗಲಿ ಇಂದಿಗೆ 20ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ತಾಯಿ– ಮಾತೃಶ್ರೀ, ಶ್ರೀಮತಿ ಜಯಮ್ಮ (ಲೇಟ್ ಮೈಸೂರು ಮಹಾಲಿಂಗೇಗೌಡರ ಧರ್ಮಪತ್ನಿ)
ಅಣ್ಣ ಲೋಕೇಶ್ M ಹಾಗೂ
ಕುಟುಂಬವರ್ಗದವರು, ಯರಗನಹಳ್ಳಿ, ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ಬಾನು ಬಿ ಅಮ್ಮ ರವರ ವಾರಸುದಾರ ಲೇಟ್ ಸರ್ದಾರ್‌ಸಿಂಗ್ ಮತ್ತು ಲೇಟ್ ಮೇನಕ ಬಾಯಿ ರವರುಗಳ ಕುಟುಂಬದವರಾದ [1] ಶ್ರೀ. ಪ್ರತಾಪ್ ಸಿಂಗ್ ಮತ್ತು [2] ಶ್ರೀ. ಚಂದ್ರಬಾನ್ ಸಿಂಗ್, [3] ಶ್ರೀಮತಿ. ವಿನುತ ಸಿಂಗ್, [4] ಶ್ರೀಮತಿ. ಸಿ. ಅನಿತಾ ಸಿಂಗ್ ಮತ್ತು [5] ಶ್ರೀ. ಲಕ್ಷ್ಮಣ್‌ಸಿಂಗ್ ಸಿ. ರವರುಗಳು ಈ ಕೆಳಗೆ ವಿವರಿಸುವ ಅವರವರ ಮಾಲಿಕತ್ವದ ಸ್ವತ್ತುಗಳ ನಿರುಪಾಧಿತ ಮಾಲೀಕರಾಗಿದ್ದು, ಎರಡೂ ಕುಟುಂಬದವರು ಒಟ್ಟಾಗಿ ಈ ಕೆಳಗೆ ವಿವರಿಸುವ ಷೆಡ್ಯೂಲ್ ಸ್ವತ್ತನ್ನು, ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಸಂತೆಪೇಟೆ, 2ನೇ ಅಡ್ಡ ರಸ್ತೆಯಲ್ಲಿರುವ ಮನೆ ಸಂಖ್ಯೆ: 853 D–11 ಮತ್ತು 853/1 D-11/1, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟ ಇ–ಸ್ವತ್ತಿನ ಸಂಖ್ಯೆ: 9667474443, ಮತ್ತು 25–1–554–149A, ಅಸೆಸ್ಮೆಂಟ್ ನಂ. 853 D-11 & 853/1 D-11/1, ಪಿಐಡಿ ನಂ. 145811 & 231425, ವಾರ್ಡ್ ನಂ. 46 & 23, ಒಟ್ಟು ಗೂಡಿಸಿದ ಸ್ವತ್ತಿನ ಒಟ್ಟು ವಿಸ್ತೀರ್ಣ:106.5253669 ಚದರ ಮೀಟರ್‌ಗಳು. ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ: ಹಂಡೆ ರಾಮಣ್ಣ ರವರ ಮನೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ :ನಾಗರಾಜೇಗೌಡ ರವರ ಮನೆ ಮತ್ತು ದಕ್ಷಿಣಕ್ಕೆ: ರಾಮ್ ದೇವ್‌ರವರ ಮನೆ.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ

ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ,
ನಜರ್‌ಬಾದ್, ಮೈಸೂರು–570010.
E-Mail: aeenhmys@gmail.com ದೂರವಾಣಿ ಸಂಖ್ಯೆ: 0821–2951499

ಸಂಖ್ಯೆ:ಸಕಾಇಂ:ರಾಹೆ:ಉವಿಮೈ:ರಾಹ275ಕೆ:ಕಚುದೆ:2026–27:004 ದಿನಾಂಕ: 01–04–2026

ತಿದ್ದುಪಡಿ ಪ್ರಕಟಣೆ

ಈ ಕಛೇರಿಯ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಸಕಾಇಂ:ರಾಹೆ:ಉವಿಮೈ:ರಾಹೆ275ಕೆ :ಕಚುದೆ:2025–26:1365 ದಿನಾಂಕ: 25–03–2026 ಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ಸಾರ್ವಜನಿಕ ಪಾಲ್ಗೊಳ್ಳುವಿಕೆಗಾಗಿ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸುವ ಅಂತಿಮ ದಿನಾಂಕವನ್ನು 10–04–2026 ರವರೆಗೆ ವಿಸ್ತರಿಸಲಾಗಿದೆ. ಹಾಗೂ, ಆಕ್ಷೇಪಣೆಗಳನ್ನು ಸಲ್ಲಿಸುವ ವಿಳಾಸ ಬದಲಾಗಿದ್ದು, ಸಾರ್ವಜನಿಕರು ತಮ್ಮ ಸಲಹೆ, ಅಭಿಪ್ರಾಯ ಅಥವಾ ಆಕ್ಷೇಪಣೆಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ನಜರ್‌ಬಾದ್, ಮೈಸೂರು–570010. ಮೇಲ್:aeenhmys@gmail.com) ಇಲ್ಲಿಗೆ ಸಲ್ಲಿಸತಕ್ಕದ್ದು. ಪ್ರಕಟಣೆಯ ಇತರೆ ಷರತ್ತುಗಳು ಮತ್ತು ವಿಷಯಗಳು ಯಥಾವತ್ತಾಗಿರುತ್ತವೆ.

ಸಹಿ/– ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ರಾಷ್ಟ್ರೀಯ ಹೆದ್ದಾರಿ ಉಪವಿಭಾಗ,
ಮೈಸೂರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ಡೋಜ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಸ್ಥಳ	ಹೆಸರು / ವಿಳಾಸ	ದೂರವಾಣಿ
ಕೊಡಗು	ಪ್ರಸಾದ್, ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ	9731469871
ಮಂಡ್ಯ	ಕೆ. ಮೋಹನ್‌ರಾಜ್	8762960325
ಶ್ರೀರಂಗಪಟ್ಟಣ	ವಿನಯ್ ಕಾರೇಕುರ, ಶ್ರೀರಂಗಪಟ್ಟಣ	9686893234
ಹುಣಸೂರು	ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು.	9448720626
ಚಾಮರಾಜನಗರ	ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ	9242265667
ಟಿ. ನರಸೀಪುರ	ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ.	9986719590
ಗುಂಡ್ಲುಪೇಟೆ	ಸೋಮಶೇಖರ್, ದ.ರಾ. ಬೇಂದ್ರೆ ನಗರ, ತ್ರಿಶಿನಿ ಲೇಔಟ್,ಗುಂಡ್ಲುಪೇಟೆ.	9845995426
ಕೆ.ಆರ್. ನಗರ	ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್	9483084345
ಮಳವಳ್ಳಿ	ಸರಸ್ವತಿ. ವಿ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430	9632407806
ಹಾಸನ	ಆರ್.ಎನ್.ಸೋಮೇಶ್‌ಗೌಡ, ಜ್ಯೋತಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ.	7019311936
ಕುಶಾಲನಗರ	ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ	9845698401
ಜಯಪುರ	ಬಿಳಿಗಿರಿ, ಜಯಪುರ	9945479288
ಪಿರಿಯಾಪಟ್ಟಣ	ವಿರೇಶ್, ಪಿರಿಯಾಪಟ್ಟಣ	8660057128
ವಿರಾಜಪೇಟೆ	ಮಂಜುನಾಥ, ವಿರಾಜಪೇಟೆ	9900949353
ಯಳಂದೂರು	ಬಿ.ನಾಗರಾಜು, ಮೈತ್ರಿ ಮೆಡಿಕಲ್, ಬಳೆಪೇಟೆ, ಯಳಂದೂರು	9844349191
ಕೆ.ಆರ್.ಪೇಟೆ	(ಶ್ರೀನಿವಾಸ), ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ	9449326847, 7022757438
ಹೆಚ್.ಡಿ.ಕೋಟೆ	ಮಂಜುನಾಥ ಎಸ್., ಹೆಚ್.ಡಿ.ಕೋಟೆ	9483574452
ಕೆ.ಎಂ.ದೊಡ್ಡಿ	ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ	9242120338
ಹುಣಸೂರು	ರಘು, ರಘು ಫೋಟೋ ವರ್ಲ್ಡ್, ಹುಣಸೂರು	9845590889
ನಂಜನಗೂಡು	ರಂಗಸ್ವಾಮಿ, ನಂ.4565, ಕಪಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301	9901602226
ಕೊಳ್ಳೇಗಾಲ	ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ	9448576247, 7899849868